Swabhimani Sahakari
Pages : 80 / 12₹
Volume - 18
Issue - 01
January - 2021

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

2021
ನೂತನ ವರ್ಷದ
ಶುಭಾಶಯಗಳು

ನಮಃ ಸೂರ್ಯಾಯ ಶಾಂತಾಯಾ ಸರ್ವರೋಗ ನಿವಾರಿಣೆ
ಆಯುರ್ ಆರೋಗ್ಯ ಮ ಐಶ್ವರ್ಯ ಮ ದೇಹಿ ದೇವಾಃ




ಜನವರಿ 1
ಸೌಹಾರ್ದ ಸಹಕಾರಿ
ದಿನಾಚರಣೆ

ಜನವರಿ 26
ಗಣರಾಜ್ಯೋತ್ಸವ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5135

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1354

ಅಧ್ಯಕ್ಷರ ನುಡಿ



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

2020ರಲ್ಲಿ ಕೋರೋನಾ ಮಹಾಮಾರಿಯ ಅಟ್ಟಹಾಸದಿಂದಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ ಇಡೀ ದೇಶವೇ ಸಂಕಷ್ಟವನ್ನು ಅನುಭವಿಸುವಂತಾಯಿತು. ಇದಕ್ಕೆ ಸೌಹಾರ್ದ ಸಹಕಾರಿಗಳೇನು ಹೊರತಲ್ಲ. ಆದಾಗ್ಯೂ ಸೌಹಾರ್ದ ಸಹಕಾರಿಗಳು ಸಂಕಷ್ಟವನ್ನು ಮೆಟ್ಟಿ ಉತ್ತಮ ಕಾರ್ಯನಿರ್ವಹಣೆಯತ್ತ ಸಾಗಿವೆ. ಚೇತರಿಕೆ ಕಂಡಿರುವುದು ಸಮಾಧಾನಕರ. 2021ರಲ್ಲಿ ಉತ್ತಮ ಸಾಧನೆಯನ್ನು ಮಾಡಲು ಸನ್ನದ್ಧರಾಗೋಣ ಭಗವಂತನು ನಮಗೆಲ್ಲ ಶಕ್ತಿಯನ್ನು ದಯಪಾಲಿಸಲಿ ಎಂದು ಪ್ರಾರ್ಥಿಸೋಣ.

## ವೀಡಿಯೊ ಕಾನ್ಫರೆನ್ಸ್/ವರ್ಚುವಲ್ ಮೀಟಿಂಗ್ ಮೂಲಕ ಸಂಯುಕ್ತ ಸಹಕಾರಿಯ 19ನೇ ಸಾಮಾನ್ಯ ಸಭೆ ಯಶಸ್ವಿಯಾಗಲು ಸಹಕರಿಸಿದ ಸಹಕಾರಿಗಳಿಗೆ ಕೃತಜ್ಞತೆಗಳು 2021ರ ಕ್ಯಾಲೆಂಡರ ಬಿಡುಗಡೆಗಾಗಿ ಆಗಮಿಸಿದ್ದ ಮಾನ್ಯ ಸಹಕಾರ ಸಚಿವರು ಹರ್ಷವ್ಯಕ್ತಪಡಿಸಿರುವುದು ಸಹಕಾರಿಗಳಿಗೆ ಹಾಗೂ ನಮಗೆ ಹೆಚ್ಚಿನ ಉತ್ಸಾಹ ಬಂದಿದೆ. ಅನೇಕ ಸೌಹಾರ್ದ ಸಹಕಾರಿಗಳು ಸಹ ವಿಡಿಯೊ ಕಾನ್ಫರೆನ್ಸ್/ ವರ್ಚುವಲ್ ಮೀಟಿಂಗ ಮೂಲಕ ವಾರ್ಷಿಕ ಸಾಮಾನ್ಯ ಸಭೆಗಳನ್ನು ನಡೆಸಿರುವುದು ಸ್ವಾಗತಾರ್ಹ.

**ಆತ್ಮೀಯ ಸಹಕಾರಿ ಬಂಧುಗಳೆ,**

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ನೂತನ ವರ್ಷ 2021ರ, ಸೌಹಾರ್ದ ಸಹಕಾರಿ ದಿನದ ಹಾಗೂ ಮಕರ ಸಂಕ್ರಾಂತಿಯ ಹಾರ್ದಿಕ ಶುಭಾಶಯಗಳು

2020ರಲ್ಲಿ ಕೋರೋನಾ ಮಹಾಮಾರಿಯ ಅಟ್ಟಹಾಸದಿಂದಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ ಇಡೀ ದೇಶವೇ ಸಂಕಷ್ಟವನ್ನು ಅನುಭವಿಸುವಂತಾಯಿತು. ಇದಕ್ಕೆ ಸೌಹಾರ್ದ ಸಹಕಾರಿಗಳೇನು ಹೊರತಲ್ಲ. ಆದಾಗ್ಯೂ ಸೌಹಾರ್ದ ಸಹಕಾರಿಗಳು ಸಂಕಷ್ಟವನ್ನು ಮೆಟ್ಟಿ ಉತ್ತಮ ಕಾರ್ಯನಿರ್ವಹಣೆಯತ್ತ ಸಾಗಿವೆ. ಚೇತರಿಕೆ ಕಂಡಿರುವುದು ಸಮಾಧಾನಕರ. 2021ರಲ್ಲಿ ಉತ್ತಮ ಸಾಧನೆಯನ್ನು ಮಾಡಲು ಸನ್ನದ್ಧರಾಗೋಣ ಭಗವಂತನು ನಮಗೆಲ್ಲ ಶಕ್ತಿಯನ್ನು ದಯಪಾಲಿಸಲಿ ಎಂದು ಪ್ರಾರ್ಥಿಸೋಣ.

2019-20ರ ವಾರ್ಷಿಕ ಸಾಮಾನ್ಯ ಸಭೆಯನ್ನು ಅನಿವಾರ್ಯವಾಗಿ ಸರಕಾರದ ಸೂಚನೆಗೆ ಅನುಗುಣವಾಗಿ ವಿಡಿಯೋ ಕಾನ್ಫರೆನ್ಸ್/ವರ್ಚುವಲ್ ಮೂಲಕ ವ್ಯವಸ್ಥೆ ಮಾಡಬೇಕಾಯಿತು. ರಾಜ್ಯದ 1845 ಸೌಹಾರ್ದ ಸಹಕಾರಿಗಳು ಈ ವ್ಯವಸ್ಥೆಯನ್ನು ಸ್ವಾಗತಿಸಿ ಭಾಗವಹಿಸಿ ಸಹಕರಿಸಿರುವುದು ಅತ್ಯಂತ ಸಂತೋಷದ ವಿಷಯ. ಡಿಸೆಂಬರ್ 2020ರಲ್ಲಿ ರಾಜ್ಯದಾದ್ಯಂತ ಸುಮಾರು 20 ಸಂಪರ್ಕ ಸಭೆಗಳಲ್ಲಿ ಭಾಗವಹಿಸಿದ 1845 ಸೌಹಾರ್ದ ಸಹಕಾರಿಗಳು ನಮ್ಮ ಮನವಿ ಸ್ಪಂದಿಸಿ ಈ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿರುವುದ ಜೊತೆಗೆ ಒಟ್ಟಾರೆ ರಾಜ್ಯದ 2900 ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಸಭೆಯಲ್ಲಿ ತಮ್ಮ ಹಾಜರಾತಿಯನ್ನು ಕೊಡುವುದರ ಜೊತೆಗೆ 1700ಕ್ಕೂ ಹೆಚ್ಚು ಪ್ರತಿನಿಧಿಗಳು ನಿರಂತರವಾಗಿ ಸಕ್ರೀಯವಾಗಿ ಸಭೆಯಲ್ಲಿ ಭಾಗವಹಿಸಿರುವುದು ಮತ್ತು ಆಧುನಿಕ ತಂತ್ರಜ್ಞಾನವನ್ನು ಸಮರ್ಥವಾಗಿ ಉಪಯೋಗಿಸಲು ಸಾಧ್ಯವಾಗಿದೆ ಮತ್ತು ಸೌಹಾರ್ದ ಸಹಕಾರಿಗಳು ತಂತ್ರಜ್ಞಾನ ಬಳಕೆಯಲ್ಲಿ ಮುಂಚೋಣಿಯಲ್ಲಿದ್ದೇವೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದಾಗಿದೆ.

ಸಂಯುಕ್ತ ಸಹಕಾರಿಯ 2021ನೇ ಸಾಲಿನ ಕ್ಯಾಲೆಂಡರ ಬಿಡುಗಡೆಗಾಗಿ ಸಹಕಾರ ಸಚಿವ ಶ್ರೀ ಎಸ್.ಟಿ. ಸೋಮಶೇಖರವರು ಆಗಮಿಸಿ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಭೆಗಳ ಈ ವ್ಯವಸ್ಥೆಯ ಬಗ್ಗೆ ಈ ಶಿಸ್ತಿನ ಸಭೆಯ ಬಗ್ಗೆ ಹರ್ಷವ್ಯಕ್ತ ಪಡಿಸಿರುವುದು ನಮಗೆ ಹೆಚ್ಚಿನ ಉತ್ಸಾಹ ನೀಡಿದೆ.

ಇದಲ್ಲದೇ ರಾಜ್ಯದ ಹಲವಾರು ಸೌಹಾರ್ದ ಸಹಕಾರಿಗಳು, ಸಂಯುಕ್ತ ಸಹಕಾರಿಯಿಂದ 22 ಸೌಹಾರ್ದ ಸಹಕಾರಿಗಳು ಈ ವ್ಯವಸ್ಥೆಯಿಂದ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ಸಾಧ್ಯವಾಗಿದೆ.

ಸಂಯುಕ್ತ ಸಹಕಾರಿಯ 19ನೇ ವಾರ್ಷಿಕ ಸಾಮಾನ್ಯ ಸಭೆ ಅತ್ಯಂತ ವ್ಯವಸ್ಥಿತವಾಗಿ ಅಚ್ಚುಕಟ್ಟಾಗಿ ನಡೆಸಲು ಸಹಕರಿಸಿದ ಎಲ್ಲರಿಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408,23573291
ಇ-ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ....................................... 3
ಜ್ಞಾನ ಜ್ಯೋತಿ......................................... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ................................................. 5-21
ಸಹಕಾರಿಗಳ ನಿಬಂಧಕರ ಸುತ್ತೋಲೆ ..22-49
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ................................................. 50-71
ಲೇಖನಗಳು
ಆರ್ಥಿಕ ಬೆಳವಣಿಗೆಯಲ್ಲಿ ಸಹಕಾರ ಸಂಘಗಳ ಪಾತ್ರ ........................... 72-73
ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ-9) ................................. 77-78

# ಸಂಪಾದಕೀಯ

## ಸೌಹಾರ್ದ ಸಹಕಾರ ಕ್ಷೇತ್ರ ಮುಖ್ಯ ವಾಹಿನಿಗೆ ಬಂದಿದೆ. ಠೇವಣಿದಾರರ ಹಿತರಕ್ಷಣೆ ಆದ್ಯತೆ ಅಗತ್ಯ.

ರಾಜ್ಯದ ಸೌಹಾರ್ದ ಸಹಕಾರಿಗಳ ಪ್ರಗತಿ ಸಮಾಧಾನಕರವಾಗಿದೆ. ಕಾರ್ಯಚಟುವಟಿಕೆಗಳಲ್ಲಿ ವಿಭಿನ್ನತೆ ಇದೆ. ಈ ಕ್ಷೇತ್ರದತ್ತ ರಾಜ್ಯದ ಜನರ ಆಕರ್ಷಣೆ ಇದೆ. ಸೌಹಾರ್ದ ಸಹಕಾರಿ ಕ್ಷೇತ್ರ ಈಗ ಸಹಕಾರ ಕ್ಷೇತ್ರದಲ್ಲಿ ಮುಖ್ಯ ವಾಹಿನಿಗೆ ಬಂದಂತಾಗಿದೆ. ಸೌಹಾರ್ದ ಸಹಕಾರಿಗಳು ಹೆಮ್ಮೆಪಡುವ ವಿಷಯ. ಇದಕ್ಕೆ ರಾಜ್ಯದ ಸೌಹಾರ್ದ ಸಹಕಾರಿಗಳ ಹಿರಿಯ ಸಹಕಾರಿಗಳ ಶ್ರಮ ಶ್ಲಾಘನೀಯ ಅಭಿನಂದನೀಯ.

ಸಂಪನ್ಮೂಲಗಳ ಸದ್ಬಳಕೆಗೆ ಸಹಕಾರಿಯ ದೂರದೃಷ್ಟಿ ಮತ್ತು ಗುಣಮಟ್ಟದ ಕ್ರಿಯಾಯೋಜನೆ ಸಿದ್ಧಪಡಿಸಿ ಜಾರಿಗೊಳಿಸುವುದು ಅಗತ್ಯ. ಆರ್ಥಿಕ ಶಿಸ್ತುಪಾಲನೆಗೆ ಪ್ರಥಮ ಆದ್ಯತೆ ಇರಬೇಕು. ಪ್ರಸಕ್ತ ಪೈಪೋಟಿ ಯುಗ ಹಾಗೂ ತಂತ್ರಜ್ಞಾನದ ಮೂಲಕ ಪ್ರಗತಿಪರ ಕಾರ್ಯನಿರ್ವಹಣೆಯ ಯುಗದಲ್ಲಿ ಸಾಲ ನೀಡುವುದೊಂದೆ ಮೂಲ ಉದ್ದೇಶವೆನಿಸುವುದಿಲ್ಲ. ಸದಸ್ಯರಿಗೆ ಹಲವಾರು ಸೇವಾ ಸೌಲಭ್ಯಗಳನ್ನು ಒದಗಿಸುವುದು ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ.

ಆದರೆ ರಾಜ್ಯದ ಹಲವಾರು ಸೌಹಾರ್ದ ಸಹಕಾರಿಗಳಲ್ಲಿ ಕೆಲವು ವಿಷಯಗಳಲ್ಲಿ ಅವ್ಯವಸ್ಥೆ ಕಾಣುತ್ತಿದೆ. ನಿಯಮಗಳ ಪಾಲನೆ ಕಾಣುತ್ತಿಲ್ಲ. ಕೇವಲ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಹೆಚ್ಚು ಒತ್ತು ಕೊಡುವುದು. ಕ್ರೋಢೀಕರಣಕ್ಕೆ ಆಮಿಷಗಳನ್ನು ಕೊಡುವುದು ನಂತರ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಉಪಯೋಗಿಸದೆ ಬೇರೆ ಬೇರೆ ಸಹಕಾರಿ ಸಂಸ್ಥೆಗಳಲ್ಲಿ, ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ, ರಿಯಲ್ ಎಸ್ಟೇಟ್ ಉದ್ಯಮ ವಿನಿಯೋಗಿಸಿರುವುದು ಕಂಡು ಬಂದಿದೆ. ಸ್ವ ಹಿತಾಸಕ್ತಿಗಳಿಗೆ ಅಗತ್ಯ ಸೆಕ್ಯುರಿಟಿಗಳನ್ನು ಪಡೆಯದೆ ನಿಯಮಬಾಹಿರವಾಗಿ ದೊಡ್ಡ ಪ್ರಮಾಣದಲ್ಲಿ ಸಾಲಗಳನ್ನು ನೀಡುತ್ತಿರುವುದು ಕಂಡು ಬಂದಿದೆ. ಇದು ಆರೋಗ್ಯಕರ ಬೆಳವಣಿಗೆಯಲ್ಲ. ಇದರಿಂದಾಗಿ ಸೌಹಾರ್ದ ಸಹಕಾರಿಯ ಚಳುವಳಿಗೆ ಹಾಗೂ ಕಾರ್ಯಚಟುವಟಿಕೆಗಳಿಗೆ ಹಿನ್ನಡೆಯಾಗುತ್ತಿದೆ ಮತ್ತು ಈ ಕ್ಷೇತ್ರದ ಹೆಸರು ಹಾಳು ಮಾಡುವ ಪರಿಸ್ಥಿತಿ ಎದುರಾಗುತ್ತದೆ ಈ ಬಗ್ಗೆ ಸೌಹಾರ್ದ ಸಹಕಾರಿಗಳು ಎಚ್ಚರಿಕೆ ವಹಿಸುವುದು ಅಗತ್ಯ. ಇಂಥಹ ಸಹಕಾರಿಗಳ ಮೇಲೆ ಸಂಯುಕ್ತ ಸಹಕಾರಿಯು ಕಟ್ಟುನಿಟ್ಟಿನ ಕಾನೂನು ಕ್ರಮ ತೆಗೆದುಕೊಳ್ಳುತ್ತದೆ ಇದು ಅನಿವಾರ್ಯ, ತೊಂದರೆಗಳಿಗೆ ಅವಕಾಶವಿರದಂತೆ ಸೌಹಾರ್ದ ಸಹಕಾರಿಗಳ ನಡೆ ಇರಬೇಕು ತಾವುಗಳೆಲ್ಲ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಗುಣಾತ್ಮಕ ನಡೆಯನ್ನು ಅನುಸರಿಸಿ ಸೌಹಾರ್ದ ಸಹಕಾರಿಗಳ ನಡೆ ಗುಣಮಟ್ಟದ ಕಡೆ ಎಂಬ ಘೋಷವಾಕ್ಯವನ್ನು ಕಟ್ಟು ನಿಟ್ಟಾಗಿ ಪಾಲಿಸಿ ಸೌಹಾರ್ದ ಸಹಕಾರಿ ಕ್ಷೇತ್ರದ ಸುಸ್ಥಿತ ಅಭಿವೃದ್ಧಿಯ ಪಾಲುದಾರರಾಗವೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ.

ಶ್ರೇಣಿ 57



## ಜ್ಞಾನ ಜ್ಯೋತಿ

ಎಂ. ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

### "ಇರುವ ಭಾಗ್ಯವ ನೆನೆದು ಬಾರದೆಂಬುದನು ಬಿಡು"

"Life is not a bed of roses but contains thorns and stones " ಎಂಬ ಆಂಗ್ಲ ಉಕ್ತಿಯನ್ವಯ ಮಾನವನ ಜೀವನ ಸುಖದ ಸುಪತ್ತಿಗೆಯಾಗಿರದೇ ಕಲ್ಲುಮುಳ್ಳುಗಳಿಂದಲೂ ಕೂಡಿದೆ ಎಂಬ ಕಟುಸತ್ಯವನ್ನು ಅಂತವರ ಪಾಲಿಗೆ ಜೀವನ ಸಂತೃಪ್ತಿಯಿಂದ ಕೂಡಿರುತ್ತದೆಂಬುದು ಚಿಂತನಶೀಲರ ಇಂಗಿತ, ವ್ಯಕ್ತಿಯದೇಹದ ಸರ್ವ ಅಂಗಾಂಗಳನ್ನು ನಿಯಂತ್ರಿಸಿ ಚಾಲನಾ ಶಕ್ತಿ ನೀಡಿ ಪ್ರಗತಿಯೆಡೆಗೆ ಕೊಂಡೊಯ್ಯುವ ಮುಖ್ಯಾಂಗವಾದ ಮೆದುಳನ್ನು ಶುಭಾಶಭ ಆಶೆಗಳ "ತಯಾರಿಕಾ ಕಾರ್ಖಾನೆ (Factory of Multiplied Desires) ನಿರೂಪಿಸಲಾಗಿದೆ.

ಆಶೆಗಳನ್ನು ಮಿತಿಯಲ್ಲಿಟ್ಟುಕೋ ಅವುಗಳ ಪೈಕಿ ಈಡೇರಿಕೆಯಾಗಿರುವವನು ಮಾನ್ಯಮಾಡಿ ತೃಪ್ತಿ ತಂದುಕೋ ಈಡೇರದಿದ್ದುದನ್ನು ಸ್ಮೃತಿ ಸಕಲದಿಂದ ಕಿತ್ತೆಸೆದು ನಿಶ್ಚಿಂತನಾಗಿರು ಎಂಬ ಅಂಶವನ್ನು ಬಿತ್ತರಿಸುವ 'ಡಿವಿಜಿಯವರ ಈ ಕೆಳಗಿನ ಪದ್ಯ ಬಹುಜನಪ್ರಿಯ ಹಾಗೂ ಜೀವನದ ಅಡಿಗಲ್ಲಾಗುತ್ತದೆಂದೂ ಭಾವಿಸಿದ ಸರ್ಕಾರ ಈ ಪದ್ಯವನ್ನು ಎಲ್ಲ ಕೆ.ಎಸ್.ಆರ್.ಟಿ.ಸಿ ಬಸ್ಸುಗಳಲ್ಲಿ ಬರೆಸಿ ಸರ್ವ ಪ್ರಯಾಣಿಕರು ಪ್ರಯಾಣದ ಅವಧಿಯಲ್ಲಿ ಓದಿ ಜೀರ್ಣಿಸಿಕೊಳ್ಳಲೆಂದು ಸದಭಿಲಾಶೆಯನ್ನು ತಳೆಯಲಾಗಿದೆ. ಪದ್ಯದ ಓಟ ಈ ಕೆಳಗಿನಂತಿದೆ.

**ಬರದಿಹುದರೆಣಿಕೆಯಲಿ ಬಂದಿಹುದ ಮರೆಯದಿರು**
**ಗುರುತಿಸೊಳಿ ತಿರುವುದನು ಕೇಡುಗಳ ನಡುವೆ**
**ಇರುವ ಭಾಗ್ಯವ ನೆನೆದು ಬಾರದೆಂಬುದನ್ನು ಬಿಡು**
**ಹರುಷಕಿದೆ ದಾರಿಯಲೋ ॥ ಮಂಕುತಿಮ್ಮ ॥**

"ಬಾರದು ಬಪ್ಪದು ಬಪ್ಪುದು ತಪ್ಪದು ಎಂಬ ಧ್ಯೇಯೋಕ್ತಿಯು ನಮ್ಮ ಪಾಪಪುಣ್ಯಗಳ ಆಧಾರದ ಮೇಲೆ ನಮ್ಮ ಸಾಧನೆಗಳ ಲಭ್ಯತೆಯೆಂಬುದನ್ನು ದೃಡೀಕರಿಸುತ್ತಾರೆ. ಆಶೆಗಳು ತಪ್ಪಲ್ಲ, ಆದರೆ ಆಶೆಗಳ ಈಡೇರದಿದ್ದಾಗ ಕೈಚೆಲ್ಲಿ ಕುಳಿತು ಕೊರಗುತ್ತಾ ಜೀವನವೇ ವೈಪಲ್ಯವೆನ್ನುವುದು ತಪ್ಪೆನ್ನುತ್ತಾರೆ ಜ್ಞಾನಿಗಳು. ಪಡೆಯಬೇಕಾದ್ದನ್ನು ಪಡೆಯಬೇಕೆಂಬ ಮಹತ್ವಾಕಾಂಕ್ಷೆಯನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದರೆ ಈಡೇರದ ಆಶೆಗಾಗಿ ಹಲುಬುವುದು ದೌರ್ಬಲ್ಯದ ಲಕ್ಷಣವಲ್ಲದೇ ಭವಿಷ್ಯದ ಬಗ್ಗೆ ಅತೃಪ್ತಿ ಹೊಂದಿ ಜೀವನವು ಸೂತ್ರ ಕಳೆದುಕೊಂಡು ಗಾಳಿಪಟವಾಗದಂತೆ ಎಚ್ಚರಿಕೆ ವಹಿಸಬೇಕೆನ್ನುತ್ತದೆ. ಈ ಕಗ್ಗ ಕೈಯಲ್ಲಿರುವ ಒಂದು ಹಕ್ಕಿಯುಪೊದೆಯಲ್ಲಿರುವ ನೂರು ಹಕ್ಕಿಗಳಿಗಿಂತ ಉತ್ತಮವೆಂಬ ಸಂತೃಪ್ತಿ ನಮ್ಮನ್ನು ಸಾಧನೆಯತ್ತ ಪ್ರೇರೇಪಿಸುತ್ತದೆ.

ಆದ್ದರಿಂದ ವೈಪಲ್ಯಗಳನ್ನು ಪಟ್ಟಿಯನ್ನು ಬೆಳೆಸಿಕೊಳ್ಳದೇ ಪ್ರಸಕ್ತ ಸಾಧ್ಯವಾಗಿರುವ ಸಾಧನೆಯ ತೃಪ್ತಿಯಿಂದ ಮುಂದುವರಿದಾಗ ಜೀವನ ಸಾರ್ಥಕವಾಗುತ್ತದೆಂಬುದೇ ಈ ಪದ್ಯದ ಸಾರಾಂಶ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 15,397 ಆಗಿರುತ್ತದೆ. ಇವುಗಳ ಪೈಕಿ 8,110 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 7,287.

**ಡಿಸೆಂಬರ್ ತಿಂಗಳ ಪ್ರಕರಣಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳು 640, ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 567

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2,574 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 250 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 170 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2,154 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1007 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 96 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 477 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 434 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಡಿಸೆಂಬರ್ ತಿಂಗಳಿನಲ್ಲಿ 42 ಪ್ರಕರಣ ದಾಖಲಾಗಿರುತ್ತವೆ.

# ವಿಡಿಯೊ ಕಾನ್ಫರೆನ್ಸ್ /ವರ್ಚುವಲ್ ಮೀಟಿಂಗ್ ಮೂಲಕ ಸಂಯುಕ್ತ ಸಹಕಾರಿಯ 19ನೇ ಸಾಮಾನ್ಯ ಸಭೆ ಯಶಸ್ವಿ. ಸಹಕಾರ ಸಚಿವ ಶ್ರೀ ಎಸ್.ಟಿ ಸೋಮಶೇಖರರವರಿಂದ 2021 ಕ್ಯಾಲೆಂಡರ್ ಬಿಡುಗಡೆ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 19ನೇ ಸಾಮಾನ್ಯ ಸಭೆ ಈ ಬಾರಿ ಕೋರೋನಾ ಮಹಾಮಾರಿಯ ಕಾರಣದಿಂದಾಗಿ ವಿಭಿನ್ನವಾಗಿ ಅಂದರೆ ಆಧುನಿಕ ತಂತ್ರಜ್ಞಾನವನ್ನು ಬೆಳಸಿ ವಿಡಿಯೊ ಕಾನ್ಫರೆನ್ಸ/ವರ್ಚುವಲ್ ಮೀಟಿಂಗ್ ಮೂಲಕ ನಡೆದಿರುವುದು ವಿಶೇಷ. ರಾಜ್ಯದ 2900 ಸೌಹಾರ್ದ ಸಹಕಾರಿಗಳು ಈ ತಂತ್ರಜ್ಞಾನವನ್ನು ಬಳಸಿ ತಮ್ಮ ಹಾಜರಾತಿಯನ್ನು ನೀಡಿದರೆ 1800 ಕ್ಕೂ ಹೆಚ್ಚು ಪ್ರತಿನಿಧಿಗಳು ಸಾಮಾನ್ಯ ಸಭೆ ಮುಗಿಯುವವರೆಗೆ ನಿರಂತರವಾಗಿ ಹಾಜರಿದ್ದು ಹಲವಾರು ಪ್ರತಿನಿಧಿಗಳು ಪ್ರಶ್ನೋತ್ತರಗಳಲ್ಲಿ ಸಕ್ರೀಯವಾಗಿ ಭಾಗವಹಿಸಿರುವುದು ಸೌಹಾರ್ದ ಸಹಕಾರಿಗಳು ತಂತ್ರಜ್ಞಾನವನ್ನು ಬಳಸಿಕೊಂಡು ಬೆಳೆಯುವುದರಲ್ಲಿ ಮುಂಚೋಣಿಯಲ್ಲಿದ್ದಾರೆ ಎಂಬುದನ್ನು ಧೃಡಪಡಿಸಿದೆ.

## ಉಪನ್ಯಾಸ

ಸಾಮಾನ್ಯ ಸಭೆ ಪ್ರಾರಂಭದಲ್ಲಿ ಬೆಳಿಗ್ಗೆ 10–00 ಘಂಟೆಯಿಂದ 10–45 ರ ವರೆಗೆ ನಬಾರ್ಡ ನಿವೃತ್ತ ಅಧಿಕಾರಿ ಶ್ರೀ ವೈ.ವಿ.ಗುಂಡೂರಾವರವರಿಂದ "ಸೌಹಾರ್ದ ಸಹಕಾರಿಗಳ ಉತ್ತಮ ಗುಣಮಟ್ಟ ನಿರ್ವಹಣೆಯಲ್ಲಿ ಸಹಕಾರಿಗಳ ಪಾತ್ರ" ಎಂಬ ವಿಷಯವಾಗಿ ಉಪನ್ಯಾಸ ಉತ್ತಮವಾಗಿ ಮೂಡಿಬಂತು.

## ಪ್ರಾರ್ಥನೆ

ರಂಗಚಂದಿರದ ಕಲಾವಿದ ಶ್ರೀ ಶಂಕರ ಮತ್ತು ತಂಡದವರಿಂದ ಪ್ರಾರ್ಥನೆ, ನಾಡಗೀತೆ, ರೈತಗೀತೆ ಮತ್ತು ಸಹಕಾರ ಗೀತೆಗಳ ನಂತರ ಸಭಾ ಕಾರ್ಯಕ್ರಮ ಪ್ರಾರಂಭಿಸಲಾಯಿತು.

## ಸ್ವಾಗತ

ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ರವರು ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರನ್ನು ಮತ್ತು ಸಂಯುಕ್ತ ಸಹಕಾರಿಯ ಎಲ್ಲ ನಿರ್ದೇಶಕರನ್ನು ಮತ್ತು ಆನ್ ಲೈನ್ ಮೂಲಕ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹಾಜರಿರುವ ಎಲ್ಲ ಪ್ರತಿನಿಧಿಗಳನ್ನು ಸ್ವಾಗತಿಸಿದರು.

## ಶ್ರೀ ಸಂಜೀವ ಮಹಾಜನ್ ಇವರಿಂದ ಶ್ರದ್ಧಾಂಜಲಿ ಕಾರ್ಯಕ್ರಮ

ವರದಿ ವರ್ಷದಲ್ಲಿ ಅಂದರೆ 2019-20ನೇ ಸಾಲಿನಲ್ಲಿ ನಿಧನರಾದ 48 ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳು, ರಾಜ್ಯ ಹಾಗೂ ರಾಷ್ಟ್ರ ಧುರೀಣರಿಗೆ ಮೌನ ಆಚರಿಸಿ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಸಂಜೀವ ಮಹಾಜನರವರು ನಡೆಸಿಕೊಟ್ಟರು.

## ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿಯವರಿಂದ ಪ್ರಾಸ್ತಾವಿಕ ಭಾಷಣ :

**ಆತ್ಮೀಯ ಸಹಕಾರಿ ಬಂಧುಗಳೇ,**

**ಸ್ವಾಗತ :** ಶಾರ್ವರಿನಾಮ ಸವಂತ್ಸರದ ದಕ್ಷಿಣಾಯನದ ಮಾರ್ಗಶಿರ ಮಾಸದ ಶುಭ ಪಂಚಮಿ ಶನಿವಾರದಂದು ನಡೆಯುತ್ತಿರುವ 19ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಆನ್‌ಲೈನ್‌ನಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ಭಾಗವಹಿಸುತ್ತಿರುವ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಪರವಾಗಿ ಗೌರವ ಹಾಗೂ ಆದರ ಪೂರ್ವಕ ಪ್ರಣಾಮಗಳನ್ನು ಸಲ್ಲಿಸುತ್ತೇನೆ. ಆದರ ಪೂರ್ವಕ ಸ್ವಾಗತ ಕೋರುತ್ತೇನೆ.

**19ನೇ ವಾರ್ಷಿಕ ಸಾಮಾನ್ಯ ಸಭೆಯ ವೈಶಿಷ್ಟ್ಯತೆ :** ಪ್ರತಿ ವರ್ಷ ಸಂಯುಕ್ತ ಸಹಕಾರಿಯ ವಾರ್ಷಿಕ ಸಭೆ ಸಂಭ್ರಮದಿಂದ ಸಡಗರದಿಂದ ಕೂಡಿರುತ್ತಿತ್ತು. ರಾಜ್ಯದ ವಿವಿಧ ಭಾಗಗಳಿಂದ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಹಾಗೂ ಸಹಕಾರಿಗಳು, ಅಧಿಕಾರಿಗಳು ತುಂಬ ಉತ್ಸಾಹದಿಂದ ವಾರ್ಷಿಕ ಮಹಾಸಭೆಯಲ್ಲಿ ಹಾಗೂ ಉಳಿದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವುದನ್ನು ನೋಡಲು ಕಣ್ಣಿಗೆ ಹಬ್ಬದ ವಾತಾವರಣವಿರುತಿತ್ತು. ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಮತ್ತು ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಬಿಂಬಿಸುವ ಪ್ರದರ್ಶಿನಿಗಳು, ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸಹಕಾರಿ ಕ್ಷೇತ್ರದ ಪೂರಕ ಸಂಸ್ಥೆಗಳ ಮತ್ತು ಕಂಪನಿಗಳ ಉತ್ಪಾದಿತ ವಸ್ತುಗಳ ಮಾರಾಟ ಹಾಗೂ ಪ್ರದರ್ಶನ ವ್ಯವಸ್ಥೆಗಳು, ಸಂಯುಕ್ತ ಸಹಕಾರಿಯ ಪ್ರಕಟಣೆಗಳ ಮಾರಾಟ ವ್ಯವಸ್ಥೆ ಇವುಗಳೆಲ್ಲ ಸಂಭ್ರಮದ ಹಾಗೂ ಹಬ್ಬದ ವಾತಾವರಣವನ್ನು ನೋಡಲು ಅವಕಾಶವಾಗುತ್ತಿತ್ತು.

ಈ ವರ್ಷದ ವಾತಾವರಣವೆ ಭಿನ್ನವಾಗಿದೆ. ಕೋರೋನಾ ಮಹಾಮಾರಿಯ ಕಾರಣದಿಂದಾಗಿ ನಾವುಗಳೆಲ್ಲ ಒಟ್ಟಾಗಿ ಒಂದೆಡೆ ಸೇರುವುದಕ್ಕೆ ಅವಕಾಶವಾಗದೇ ಇರುವುದರಿಂದ ಸರಕಾರದ ಅನುಮತಿಯ ಮೇರೆಗೆ ಈ ಬಾರಿ ವಿಡಿಯೋ ಕಾನ್ಫರೆನ್ಸ್/ವರ್ಚುಯಲ್ ಮೀಟಿಂಗ್ ಮೂಲಕ 19ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಏರ್ಪಡಿಸಲಾಗಿದೆ. ತಾವುಗಳು ಸಹಕರಿಸಿ ಭಾಗವಹಿಸುತ್ತಿದ್ದೀರಿ ಇದು ಅತ್ಯಂತ ಸಂತೋಷದ ವಿಷಯ. ನಾವುಗಳು ತಾಂತ್ರಿಕತೆಯನ್ನು ಅಳವಡಿಸಿಕೊಳ್ಳಲು ಸಮರ್ಥರಾಗಿದ್ದೇವೆ ಎಂಬುದಕ್ಕೆ ಇದು ಉತ್ತಮ ನಿದರ್ಶವೆಂದು ಭಾವಿಸಬಹುದಾಗಿದೆ.

**ಸಂಯುಕ್ತ ಸಹಕಾರಿಯ ಮೂಲಕ ಸೌಹಾರ್ದ ಸಹಕಾರಿಗಳ ಆನ್‌ಲೈನ್ ಮೂಲಕ ವಾರ್ಷಿಕ ಮಹಾಸಭೆಗಳ ವ್ಯವಸ್ಥೆ :** ಕೋರೋನ ಮಹಾಮಾರಿಯ ಪರಿಣಾಮವಾಗಿ ರಾಜ್ಯದಲ್ಲಿ ವಾರ್ಷಿಕ ಮಹಾಸಭೆಗಳನ್ನು ಆನ್‌ಲೈನ್/ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಲು ಸರ್ಕಾರ ಅನುಮತಿಸಿರುವುದರ ಹಿನ್ನೆಲೆಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳು ಆನ್‌ಲೈನ್ ಮೂಲಕ ವಾರ್ಷಿಕ ಸಾಮಾನ್ಯ ಸಭೆಗಳನ್ನು ನಡೆಸಲು ಅನುಕೂಲವಾಗುವಂತೆ, ಸಂಯುಕ್ತ ಸಹಕಾರಿಯು ವಿಡಿಯೋ ಕಾನ್ಫರೆನ್ಸ್ ಮೂಲಕ ಝೂಮ್ ಆಫ್‌ನ್ನು ಬಳಸಿ ಸಾಮಾನ್ಯ ಸಭೆಗಳನ್ನು ಅವಕಾಶ ಮಾಡಿಕೊಡಲಾಗಿದೆ. ಈ ಬಗ್ಗೆ ರಾಜ್ಯದಾದ್ಯಂತ ಹಲವಾರು ಕರೆಗಳು ಬಂದಿದ್ದು, ದಿನಾಂಕದ ಹಾಗೂ ಸಮಯದ ಅಭಾವದಿಂದಾಗಿ 24 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಅದರಲ್ಲಿ 2 ಅರ್ಜಿಗಳು ತಿರಸ್ಕೃತವಾಗಿ 22 ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ಈ ತಂತ್ರಾಂಶ ಬಳಸಿ ನಿರ್ವಹಿಸಿರುವುದು ಸಂಯುಕ್ತ ಸಹಕಾರಿಗೆ ಒಂದು ಹೆಮ್ಮೆಯ ವಿಷಯವಾಗಿದೆ.

**ಸೌಹಾರ್ದ ಸಹಕಾರಿ ಕ್ಷೇತ್ರದ 2019-20ನೇ ಸಾಲಿನ ಪ್ರಗತಿ :** 2019-20ನೇ ಸಾಲಿನಲ್ಲಿ 425 ಸೌಹಾರ್ದ ಸಹಕಾರಿಗಳು ಹೊಸದಾಗಿ ಈ ಕ್ಷೇತ್ರವನ್ನು ಪ್ರವೇಶಿಸಿವೆ. ಇದರಲ್ಲಿ 1 ಹಳೆ ಕಾಯ್ದೆಯಿಂದ ಹೊಸ ಕಾಯಿದೆಗೆ ಪರಿವರ್ತಿತವಾಗಿದೆ 2 ಹೊಸ ಕಾಯಿದೆಯಿಂದ ಹಳೆ ಕಾಯ್ದೆಗೆ ಪರಿವರ್ತಿತವಾಗಿವೆ. ಒಂದು ನೊಂದಣೆ ರದ್ದಾಗಿದೆ. ಸೌಹಾರ್ದ ಸಹಕಾರಿಗಳ ಸಂಖ್ಯೆ 5045ಕ್ಕೆ ತಲುಪಿದೆ. ಸೌಹಾರ್ದ ಸಹಕಾರಿಗಳಲ್ಲಿ ಸದಸ್ಯರ ಸಂಖ್ಯೆ 62 ಲಕ್ಷದಷ್ಟು ಇದೆ. ಠೇವಣಿ ರೂ.21,578 ಕೋಟಿ ಇದೆ. ರೂ. 1,667 ಕೋಟಿಗಳಷ್ಟು ನಿಧಿಗಳು ಇದ್ದು, ರೂ.17,322 ಕೋಟಿಗಳನ್ನು ಸಾಲ ನೀಡಲಾಗಿದೆ. ರೂ 24,436 ಕೋಟಿಗಳಷ್ಟು ದುಡಿಯುವ ಬಂಡವಾಳವಿದೆ. ಈ ಕ್ಷೇತ್ರ 55000 ಜನರಿಗೆ ಉದ್ಯೋಗವನ್ನು ಕಲ್ಪಿಸಿದೆ. ವರ್ಷಾಂತ್ಯಕ್ಕೆ ರೂ 361 ಕೋಟಿಗಳ ಲಾಭ ಇದೆ.

**"ಸಂಯುಕ್ತ ಸಹಕಾರಿಯ ನಡೆ, ಗುಣಮಟ್ಟದ ಕಡೆ" :**

ಕಳೆದ ವರ್ಷದವರೆಗೆ "ಸಂಯುಕ್ತ ಸಹಕಾರಿಯ ನಡೆ ಸೌಹಾರ್ದ ಸಹಕಾರಿಗಳ ಕಡೆ" ಎಂಬುದಾಗಿತ್ತು. ಅದರಂತೆ ಕಾರ್ಯನಿರ್ವಹಿಸಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಂಖ್ಯೆಯನ್ನು ಹೆಚ್ಚಿಸುವಲ್ಲಿ ಹಾಗು ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯ ನಿರ್ವಹಿಸುವಲ್ಲಿ ಮಾರ್ಗದರ್ಶನ ನೀಡಲಾಯಿತು. ಜಿಲ್ಲಾ ಸಂಪರ್ಕ ಕಛೇರಿ, ವಲಯವಾರು ಸಭೆಗಳು, ಸಂಪರ್ಕ ಸಭೆಗಳ ಮೂಲಕ ಎಲ್ಲ ಸೌಹಾರ್ದ ಸಹಕಾರಿಗಳನ್ನು ತಲುಪುವ

ಕಾರ್ಯವಾಗಿದೆ. ಈ ವರ್ಷದ ಸಾಮಾನ್ಯ ಸಭೆಗೆ ಅರ್ಹ ಸದಸ್ಯರ ಸಂಖ್ಯೆ 3596ನ್ನು ದಾಟಿರುವುದು ನಮ್ಮ ಪ್ರಯತ್ನದ ಸಾರ್ಥಕತೆ ಎಂದು ಭಾವಿಸುತ್ತೇನೆ. ಮುಂಬರುವ ದಿನಗಳಲ್ಲಿ ಈ ಸಂಖ್ಯೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುತ್ತಿದೆ.

**ಕಳೆದ ವರ್ಷದಿಂದ "ಸೌಹಾರ್ದ ಸಹಕಾರಿಗಳ ನಡೆ ಗುಣಮಟ್ಟದ ಕಡೆ" :** ಎನ್ನುವ ಉದ್ದೇಶವನ್ನಿರಿಸಿಕೊಂಡು ಕಾರ್ಯವನ್ನು ಮಾಡುತ್ತಲಿದೆ. ಈಗಾಗಲೇ ಗುಣಮಟ್ಟದಲ್ಲಿ ಗುರುತಿಸಿಕೊಂಡಿರುವ ಸೌಹಾರ್ದ ಸಹಕಾರ ಕ್ಷೇತ್ರ ಇನ್ನಷ್ಟು ಗುಣಮಟ್ಟವನ್ನು ತಲುಪಬೇಕು ಎನ್ನುವುದು ನಮ್ಮ ಅಪೇಕ್ಷೆ. ಇದಕ್ಕೆ ಪೂರಕವಾಗಿ

**ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆ :** ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಪರಿವೀಕ್ಷಣೆಯನ್ನು ಹಮ್ಮಿಕೊಳ್ಳಲಾಗಿದೆ. ವಿಶೇಷವಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರ ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಗೆ ಕ್ರಮವಿಡಲಾಗಿದೆ. ನಂತರ ಪ್ರಥಮ ಹಂತದಲ್ಲಿ 50 ಕೋಟಿಗೂ ಹೆಚ್ಚು ಬಂಡವಾಳವಿರುವ 41 ಸೌಹಾರ್ದ ಸಹಕಾ–ರಿಗಳ ಪರಿವೀಕ್ಷಣೆ, ನಂತರದಲ್ಲಿ 30 ರಿಂದ 50 ಕೋಟಿ ಬಂಡವಾಳವಿರುವ 60 ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ ನಂತರದಲ್ಲಿ 10 ರಿಂದ 30 ಕೋಟಿ ಬಂಡವಾಳ ವಿರುವ 250ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಗೆ ಕ್ರಮವಿಡಲಾಗುತ್ತಿದೆ. ಈ ಪರಿವೀಕ್ಷಣೆ ಸೌಹಾರ್ದ ಸಹಕಾರಿಗಳ ಗುಣಮಟ್ಟ ಹೆಚ್ಚಿಸುವಲ್ಲಿ ಅಗತ್ಯ ಎಂದು ಭಾವಿಸಿದೆ. ಇದರಲ್ಲಿ ಯಾವುದೇ ಪಕ್ಷಪಾತಗಳಿರುವುದಿಲ್ಲ. ಪರಿವೀಕ್ಷಣಾ ನಂತರದಲ್ಲಿ ಸಹಕಾರಿಯ ಜವಾಬ್ದಾರಿ ಕುರಿತು ಕ್ರಮವಿಡಲು ಸೂಕ್ತ ಮಾರ್ಗದರ್ಶನಗಳನ್ನು ನೀಡಲಾಗುವುದು ತನ್ಮೂಲಕ ಗುಣಮಟ್ಟ ನಿರ್ವಹಣೆಗೆ ಆದ್ಯತೆ ನೀಡಲಾಗುವುದು.

**ತ್ವರಿತ ದಾವಾ ಪ್ರಕರಣಗಳ ಇತ್ಯರ್ಥ :** ಸೌಹಾರ್ದ ಸಹಕಾರಿ ದಾವಾ ಪಂಚಾಯಿತಿ ನ್ಯಾಯಾಲಯದ ದಾವೆಗಳ ಇತ್ಯರ್ಥವನ್ನು ತ್ವರಿತಗೊಳಿಸಲು ಕ್ರಮವಿಡಲಾಗಿದೆ. ಕಳೆದ 3 ತಿಂಗಳಿನಲ್ಲಿ 2100ಕ್ಕೂ ಹೆಚ್ಚು ಪ್ರಕರಣಗಳು ಇತ್ಯರ್ಥಗೊಂಡಿವೆ. 3 ಲಕ್ಷ ಮೊತ್ತಗಳ ವರೆಗಿನ ವಿವಾದಗಳನ್ನು ಇತ್ಯರ್ಥಗೊಳಿಸುವ ಸಲುವಾಗಿ ಮಧ್ಯಸ್ತಗಾರರನ್ನು ನೇಮಕ ಮಾಡಲು ಸಂಯುಕ್ತ ಸಹಕಾರಿಯ ಪ್ರಯತ್ನದಿಂದಾಗಿ ಅವಕಾಶ ದೊರೆತಿದೆ. ಪ್ರಸ್ತುತ 202 ಜನ ಮಧ್ಯಸ್ಥದಾರರು ಪಟ್ಟಿಯಲ್ಲಿರುತ್ತಾರೆ. ಕಡಿಮೆ ಮಧ್ಯಸ್ಥದಾರರು ಇರುವ ಜಿಲ್ಲೆಯಲ್ಲಿ ಹೆಚ್ಚಿನ ಮಧ್ಯಸ್ತದಾರರನ್ನು ನೇಮಕ ಮಾಡುವ ಬಗ್ಗೆ ಕ್ರಮವಿಡಲಾಗುತ್ತಿದೆ.

**ಸೌಹಾರ್ದ ಸಹಕಾರಿಗಳ ಆರ್ಥಿಕ ಸಬಲತೆಯಯ ಮಾನದಂಡಗಳಗಳ ರಚನೆಗೆ ಕ್ರಮ :** ಕಳೆದ ಕೆಲವು ವರ್ಷಗಳಿಂದ ಸತತವಾಗಿ ರಾಜ್ಯದ ಸೌಹಾರ್ದ ಸಹಕಾರಿಗಳ ಆರ್ಥಿಕ ಸಬಲತೆಯ ಬಗ್ಗೆ ಚರ್ಚೆ ನಡೆಯುತ್ತಿರುವುದು ತಮಗೆ ತಿಳಿದ ವಿಷಯ. ಸಂಯುಕ್ತ ಸಹಕಾರಿಯು ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸಬೇಕು. ರಾಜ್ಯದ ಸೌಹಾರ್ದ ಸಹಕಾರಿಗಳು ಇವುಗಳನ್ನು ಅಳವಡಿಸಿಕೊಂಡು ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟವನ್ನು ಹೆಚ್ಚಿಸಲು ಕ್ರಮವಿಡಲು ಸಾಧ್ಯವಾಗುತ್ತದೆ ಎಂದು ಆಶಿಸಲಾಗಿದೆ.

**ಶಾಖಾ ಅನುಮತಿ ಮಾನದಂಡಗಳ ಪರಿಷ್ಕರಣೆ :** ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಶಾಖೆಗಳನ್ನು ತೆರೆಯುವ ಕುರಿತು ಮಾನದಂಡಗಳನ್ನು ಪರಿಷ್ಕರಿಸಲಾಗಿದೆ. ಅನಿಯಮಿತ ಶಾಖೆ ತೆರೆಯುವುದನ್ನು ತಪ್ಪಿಸಿ ಗುಣಾತ್ಮಕವಾದ ಕೆಲವೇ ಶಾಖೆಗಳನ್ನು ಹೊಂದಿ ಸೌಹಾರ್ದ ಸಹಕಾ–ರಿಗಳು ಉತ್ತಮ ಕಾರ್ಯನಿರ್ವಹಿಸುವಂತಾಗಬೇಕೆ ಎನ್ನುವುದು ನಮ್ಮ ಅಪೇಕ್ಷೆಯಾಗಿದೆ.

**ಶಾಸನ ಬದ್ಧ ಕಾರ್ಯಗಳ ನಿರ್ವಹಣೆ :** ವರದಿ ಸಾಲಿನಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರಿಗಳು 3313 ಸೌಹಾರ್ದ ಸಹಕಾರಿಗಳಿಗೆ ಭೇಟಿ ಕಾರ್ಯಚಟುವಟಿಕೆಗಳನ್ನು ಗಮನಿಸಿದ್ದಾರೆ. ರಾಜ್ಯದಾದ್ಯಂತ 250 ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳಿಗೆ ಹಲವಾರು ವಿಧದಲ್ಲಿ ಕಾನೂನು ಸಲಹೆ ಮಾರ್ಗದರ್ಶನ ನೀಡಲಾಗಿದೆ. ವರದಿ ಸಾಲಿನಲ್ಲಿ 704 ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಯನ್ನು ಮಾಡಲಾಗಿದೆ. ಒಟ್ಟು 121 ಸೌಹಾರ್ದ ಸಹಕಾರಿಗಳಿಂದ 182 ಶಾಖೆಗಳನ್ನು ಆರಂಭಿಸಲು ಅನುಮೋದನೆಯನ್ನು ನೀಡಲಾಗಿದೆ. ಒಟ್ಟು 361 ಸೌಹಾರ್ದ ಸಹಕಾರಿಗಳನ್ನು ಸಮಾಪನೆಗೆ ಸಹಕಾರ ಇಲಾಖೆಗೆ ಶಿಫಾರಸ್ಸು ಮಾಡಲಾಗಿದೆ.. ಒಟ್ಟು 94 ಸಹಕಾರಿಗಳಿಗೆ ವಿಶೇಷಾಧಿಕಾ–ರಿಗಳನ್ನು ನೇಮಕ ಮಾಡಲಾಗಿದೆ. ವರದಿ ಸಾಲಿನಲ್ಲಿ 22 ಸಹಕಾರಿಗಳ 192 ನಿರ್ದೇಶಕರನ್ನು ಕಾನೂನು ರಿತ್ಯಾ ಅನರ್ಹಗೊಳಿಸಲಾಗಿದೆ.

**ಸೌಹಾರ್ದ ಸಹಕಾರಿ ಕಾಯ್ದೆಯ ಮೂಲ ಆಶಯಗಳ ಪುನರ್ ಸ್ಥಾಪನೆಗೆ ಕ್ರಮ :** ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯನ್ನು ಪ್ರಾರಂಭದಲ್ಲಿದ್ದಂತೆ ಯಥಾಸ್ಥಿತಿಯಲ್ಲಿರುವಂತೆ ತಿದ್ದುಪಡಿ ಮಾಡುವಂತೆ ಮಾನ್ಯ ಸಹಕಾರ ಸಚಿವರನ್ನು ವಿನಂತಿಸಲಾಗಿದೆ. ಹಲವು ಸುತ್ತಿನ ಸಭೆಗಳನ್ನು ಮಾನ್ಯ ಸಹಕಾರ ಸಚಿವರು ನಡೆಸಿದ್ದಾರೆ. ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಸಹಕಾರಿಗಳ ನಿಬಂಧಕರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಲೆಕ್ಕಪರಿಶೋಧಕ ಪ್ಯಾನಲ್ ಮಾಡುವುದನ್ನು ಹೊರತು ಪಡಿಸಿ ಸಂಯುಕ್ತ ಸಹಕಾರಿಯು ಸಲ್ಲಿಸಿದ ಪ್ರಸ್ತಾವನೆಯನ್ನು ಉಳಿದೆಲ್ಲ ತಿದ್ದುಪಡಿಗಳನ್ನು ಮಾಡಿಕೊಡುವುದಾಗಿ ಮಾನ್ಯ ಸಹಕಾರ ಸಚಿವರು ತಿಳಿಸಿದ್ದಾರೆ.

**ಆದಾಯ ತೆರಿಗೆ ಕಾಯ್ದೆ ತಿದ್ದುಪಡಿಗಾಗಿ ಪ್ರಯತ್ನ :** ಕಳೆದ ಹಲವಾರು ವರ್ಷಗಳಿಂದ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಆಗುತ್ತಿರುವ ಆದಾಯ ತೆರಿಗೆ ಅಧಿಕಾರಿಗಳ ತೊಂದರೆಗಳನ್ನು ಹಾಗೂ ಕಿರುಕುಳಗಳನ್ನು ನಿವಾರಿಸಲು ಸಹಕಾರ ಭಾರತಿಯವರ ಜೊತೆ ಗೂಡಿ ಕೇಂದ್ರದ ಹಣಕಾಸು ಮಂತ್ರಿಗಳಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ಭೇಟಿ ಮಾಡಿ ಸಮಸ್ಯೆಗಳ ಬಗ್ಗೆ ವಿವರಿಸಲಾಗಿದೆ. ಮಾನ್ಯ ಪ್ರಧಾನ ಮಂತ್ರಿಯವರಿಗೂ ಸಹ ಮನವಿಗಳನ್ನು ಸಲ್ಲಿಸಲಾಗಿದೆ. ಮಾನ್ಯ ಪ್ರಧಾನಮಂತ್ರಿಯವರ ಕಚೇರಿಯಿಂದ ಸಂಬಂಧಿಸಿದ

ಅಧಿಕಾರಿಗಳಿಗೆ ಕೂಡಲೇ ಸೂಕ್ತ ಕ್ರಮವಿಡುವಂತೆ ಸೂಚನೆಗಳು ಬಂದಿರುವುದು ಸಕಾರಾತ್ಮಕ ಸ್ಪಂದನೆ ಆಗಿರುವುದು ಸಂತೋಷದ ವಿಷಯ. ಪರಿಣಾಮವಾಗಿ ಆದಾಯ ತೆರಿಗೆ ಕಾಯಿದೆ 194ಎ ಗೆ ತಿದ್ದುಪಡಿಯಾಗಿದೆ. ಇದರಿಂದ 50 ಕೋಟಿಗಿಂತಲೂ ಕಡಿಮೆ ವ್ಯವಹಾರ ಇರುವ ಸಹಕಾರಿ ಸಂಸ್ಥೆಗಳು ಸದಸ್ಯರಿಗೆ ನೀಡುವ ಬಡ್ಡಿಗೆ ಟಿಡಿಎಸ್ ಮಾಡುವಂತಿಲ್ಲ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಹಾಗೂ ಸಹಕಾರ ಭಾರತಿಯ ಜಂಟಿ ಪ್ರಯತ್ನದ ಪರಿಣಾಮವಾಗಿ ಇಡೀ ದೇಶದ ಎಲ್ಲಾ ಸಹಕಾರಿ ಸಂಸ್ಥೆಗಳಿಗೆ ಈ ಕಾಯಿದೆಯಿಂದ ಅನುಕೂಲವಾಗಿದೆ. ಅದರಂತೆ, ಸೆಕ್ಷನ್ 269ಎಸ್.ಎಸ್, 269 ಟಿ, 269 ಎಸ್ ಟಿ ಇವುಗಳ ತಿದ್ದುಪಡಿಗೂ ಕೂಡ ಮನವಿಗಳನ್ನು ಸಲ್ಲಿಸಲಾಗಿದೆ. ಪ್ರಯತ್ನ ಜಾರಿಯಲ್ಲಿದೆ.

**ಇ-ಸ್ಟಾಂಪಿಂಗ್ :** ದೇಶದಲ್ಲಿಯೇ ಪ್ರಪ್ರಥಮವಾಗಿ ಸಹಕಾರ ಕ್ಷೇತ್ರದ ಮೂಲಕ ಇ-ಸ್ಟಾಂಪಿಂಗ್ ಪ್ರಾರಂಭಿಸಿರುವ ಹೆಮ್ಮೆ ಸೌಹಾರ್ದ ಸಹಕಾರಿ ಕ್ಷೇತ್ರದ್ದಾಗಿದೆ. ಪ್ರಸ್ತುತ ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ನಿರ್ವಹಿಸುವ 1346 ಇ-ಸ್ಟಾಂಪಿಂಗ್ ಕೇಂದ್ರಗಳಿವೆ.

**ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳು :** 2019-20ನೇ ಸಾಲಿನಲ್ಲಿ 296 ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ. 23,361 ಪ್ರತಿನಿಧಿಗಳು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತಾರೆ.

**ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ :** ಬೆಳಗಾವಿ ಪ್ರಾಂತೀಯ ಕಛೇರಿಯಿಂದ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳು, ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಆಯೋಜಿಸಲಾಗಿತ್ತು. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 142 ಸೌಹಾರ್ದ ಸಹಕಾರಿಗಳಿಂದ 250 ಪ್ರತಿನಿಧಿಗಳು ಭಾಗವಹಿಸಿದ್ದರು. ಹಾಗೂ ಕಲಬುರಗಿ ಪ್ರಾಂತದಿಂದ ಆಯೋಜಿಸಿದ್ದ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 129 ಸೌಹಾರ್ದ ಸಹಕಾರಿಗಳಿಂದ 169 ಪ್ರತಿನಿಧಿಗಳು ಭಾಗವಹಿಸಿದ್ದರು.

**ಯುವ ಸಂವಾದ ಹಾಗೂ ತರಬೇತಿ :** 2019-20ನೇ ಸಾಲಿನಲ್ಲಿ ಸೌಹಾರ್ದ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ ಒಟ್ಟಾರೆ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಯುವಕರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ದಿನಾಂಕ 15 ಮೇ 2019ರಂದು ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಇವರ ಸಂಯುಕ್ತ ಆಶ್ರಯದಲ್ಲಿ "ಯುವಜನ ಮತ್ತು ಸಹಕಾರ" ಸಂವಾದ ಕಾರ್ಯಕ್ರಮವನ್ನು ಹಾಗೂ ದಿನಾಂಕ 30.08.2019 ರಂದು ಕಾನೂನು ವಿಶ್ವ ವಿದ್ಯಾಲಯ ಹುಬ್ಬಳ್ಳಿಯ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಹಾಗೂ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿಯಿಂದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ "ಯುವಜನ ಹಾಗೂ ಸಹಕಾರ" ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ಸಂಯುಕ್ತ ಸಹಕಾರಿ ಸಿಬ್ಬಂದಿಗಳಿಗೆ ತರಬೇತಿ :**

**ಜಿಲ್ಲಾ ಸಂಯೋಜಕರಿಗಾಗಿ ತರಬೇತಿ :** ಸಂಯುಕ್ತ ಸಹಕಾರಿ ಜಿಲ್ಲಾ ಸಂಯೋಜಕರಿಗಾಗಿ ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಎರಡು ದಿನದ ತರಬೇತಿಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಸಂಯೋಜಕರು, ಪ್ರಾಂತೀಯ ವ್ಯವಸ್ಥಾಪಕರು, ಹಾಗೂ ವ್ಯವಸ್ಥಾಪಕ ಸಿಬ್ಬಂದಿಗಳು ಭಾಗವಹಿಸಿದ್ದರು.

**ಕಾರ್ಯಕ್ಷಮತಾ ಅಭಿವೃದ್ಧಿ ತರಬೇತಿ :** ಸಂಯುಕ್ತ ಸಹಕಾರಿಯ ಎಲ್ಲ ಸಿಬ್ಬಂದಿಯವರಿಗೆ ಬಾಗಲಕೋಟ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಶಿವಯೋಗ ಮಂದಿರದಲ್ಲಿ 3 ದಿನಗಳ ಕಾಲ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

**ಅಂತರರಾಜ್ಯ ಸಹಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳು :** ಪ್ರಸಕ್ತ ಸಾಲಿನಲ್ಲಿ ಮುಂಬೈ ಮೂಲದ ಸಹಕಾರಿಗಳಿಗೆ ತರಬೇತಿ ಹಾಗೂ ತೆಲಂಗಾಣ ರಾಜ್ಯದ ಸಹಕಾರಿಗಳ ಅಧ್ಯಯನ ಭೇಟಿಯನ್ನು ಹಾಗೂ ನೇಪಾಳದ ಸಹಕಾರಿ ತಂಡದ ಅಧ್ಯಯನ ಭೇಟಿಯನ್ನು ಆಯೋಜಿಸಲಾಗಿತ್ತು.

**ಪ್ರಚಾರ ಕಾರ್ಯಕ್ರಮಗಳು :**

**ಸಂಪರ್ಕ ಸಭೆ :** ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಗೆ ಮತ್ತು ಸೌಹಾರ್ದ ಸಹಕಾರಿಯ ಚಳುವಳಿಯ ಬೆಳವಣಿಗೆ ಹಾಗೂ ಕಾರ್ಯ ಯೋಜನೆ ಕುರಿತು ಸಂಪರ್ಕ ಸಭೆಯನ್ನು ಆಯೋಜಿಸಲಾಗುತ್ತದೆ. ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ಪ್ರಾಂತದಿಂದ ಒಟ್ಟು 18 ಸಂಪರ್ಕ ಸಭೆಗಳನ್ನು ಆಯೋಜಿಸಲಾಗಿದ್ದು, ಒಟ್ಟು 835 ಸೌಹಾರ್ದ ಸಹಕಾರಿಗಳಿಂದ 1719 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ. ಪ್ರಸ್ತಕ ಸಾಲಿನಲ್ಲಿ 20 ಸಂಪರ್ಕ ಸಭೆಗಳನ್ನು ನಡೆಸಲಾಗಿದೆ. 1826 ಸೌಹಾರ್ದ ಸಹಕಾರಿಗಳು ಭಾಗವಹಿಸಿರುವುದು ಹಾಗೂ ಹಲವಾರು ಸಮಸ್ಯೆ, ಸಲಹೆ, ಮಾರ್ಗದರ್ಶನಗಳನ್ನು ಹಂಚಿಕೊಂಡಿರುವುದು ಸ್ವಾಗತಾರ್ಹ.

**ಸಮಾಲೋಚನಾ ಸಭೆ :** ಸೌಹಾರ್ದ ಸಹಕಾರಿಯ ಸದಸ್ಯರುಗಳು, ಸಿಬ್ಬಂದಿಗಳು ಹಾಗೂ ಆಡಳಿತ ಮಂಡಳಿಯವರಿಗಾಗಿ ಬೆಂಗಳೂರು, ಮೈಸೂರು, ಬೆಳಗಾವಿ, ಕಲಬುರಗಿ ಪ್ರಾಂತದಿಂದ ಒಂದು ದಿನದ ಸಮಾಲೋಚನಾ ಸಭೆಗಳನ್ನು ಆಯೋಜಿಸಲಾಗಿತ್ತು. ಇಂತಹ ಸಭೆಗಳಲ್ಲಿ ಒಟ್ಟು 466 ಸೌಹಾರ್ದ ಸಹಕಾರಿಗಳಿಂದ 817 ಪ್ರತಿನಿಧಿಗಳು ಭಾಗವಹಿಸಿದ್ದರು.

**ಮುಖ್ಯ ಕಾರ್ಯನಿರ್ವಾಹಕರ ಸಭೆಗಳು :** ರಾಜ್ಯದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹರುಗಳ ವಾರ್ಷಿಕ ಪ್ರಗತಿ ಪರಿಶೀಲನೆಯ ಸಭೆಗಳನ್ನು ಜಿಲ್ಲಾವಾರು ಆಯೋಜಿಸಲಾಗಿತ್ತು. ಬೆಂಗಳೂರು ಪ್ರಾಂತದಿಂದ 7, ಮೈಸೂರು ಪ್ರಾಂತದಿಂದ 18, ಬೆಳಗಾವಿ ಪ್ರಾಂತದಿಂದ 16 ಹಾಗೂ ಕಲಬುರಗಿ

ಪ್ರಾಂತದಿಂದ 10 ಮುಖ್ಯಕಾರ್ಯನಿರ್ವಾಹಕರ ಸಭೆಗಳನ್ನು ಆಯೋಜಿಸಲಾಗಿತ್ತು. ಒಟ್ಟು 2462 ಸೌಹಾರ್ದ ಸಹಕಾರಿಗಳಿಂದ 2974 ಪ್ರತಿನಿಧಿಗಳು ಈ ಸಭೆಗಳಲ್ಲಿ ಭಾಗವಹಿಸಿರುತ್ತಾರೆ.

**ಅಧಿಪ್ರೇರಣಾ/ಗೌರವ ಮಧ್ಯಸ್ಥಗಾರರ ಸಭೆ :** ಮೈಸೂರು, ಬೆಳಗಾವಿ ಪ್ರಾಂತೀಯ ಕಛೇರಿಯಿಂದ ಒಟ್ಟು 2 ಸಹಕಾರಿ ಸಂಸ್ಥೆಗಳಿಗೆ ಅಧಿಪ್ರೇರಣಾ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ 190 ಪ್ರತಿನಿಧಿಗಳು ಭಾಗವಹಿಸಿದ್ದರು.

**ಸಂಯುಕ್ತ ಸಹಕಾರಿಯ ಸುತ್ತೋಲೆಗಳ ಪರಿಷ್ಕರಣಾ ಸಭೆ :** ಸಂಯುಕ್ತ ಸಹಕಾರಿಯ ಸುತ್ತೋಲೆಗಳ ಪರಿಷ್ಕರಣೆ ಹಾಗೂ ಆರ್ಥಿಕ ಸಬಲತೆಯ ಮಾನದಂಡಗಳನ್ನು ರಚಿಸುವ ಕುರಿತು ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ 35 ಸೌಹಾರ್ದ ಸಹಕಾರಿಗಳಿಂದ ಒಟ್ಟು 53 ಪ್ರತಿನಿಧಿಗಳು ಭಾಗವಹಿಸಿದ್ದರು.

**ಸೌಹಾರ್ದ ಸಹಕಾರಿಗಳ ಕ್ರೀಡೋತ್ಸವ, ಸೌಹಾರ್ದ ಸ್ಪೂರ್ತಿ – 2019 ಕಾರ್ಯಕ್ರಮ :** ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ, ಇದರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಸಹಯೋಗದೊಂದಿಗೆ ರಾಜ್ಯದಲ್ಲೇ ಪ್ರಥಮ ಬಾರಿಗೆ ಸೌಹಾರ್ದ ಸಹಕಾರಿಗಳ ಕ್ರೀಡೋತ್ಸವ "ಸೌಹಾರ್ದ ಸ್ಪೂರ್ತಿ–2019" ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

**ಸೌಹಾರ್ದ ಸಹಕಾರಿಗಳ ಬೃಹತ್ ಸಮಾವೇಶ – 2020 :** ಸೌಹಾರ್ದ ದಿನಾಚರಣೆಯ ಅಂಗವಾಗಿ ದಿನಾಂಕ 01.01.2020ರಂದು ಮಂಗಳೂರಿನ ಪುರಭವನದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಹಾಗೂ ಸಂಯುಕ್ತ ಸಹಕಾರಿಯ, ಸೌಹಾರ್ದ ಸಹಕಾರಿಗಳ ಆಶ್ರಯದಲ್ಲಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಬೃಹತ್ ಸಮಾವೇಶವನ್ನು ಆಯೋಜಿಸಲಾಗಿತ್ತು. ಶ್ರೀ ಗುರುದೇವದತ್ತ ಸಂಸ್ಥಾನಮ್ ಶ್ರೀ ಒಡಿಯೂರು ಕ್ಷೇತ್ರದ ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿ ಇವರು ಸಮಾವೇಶವನ್ನು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎ. ಸುರೇಶ್ ರೈ ಇವರು ವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್. ಆರ್.ಸತೀಶ್‌ಚಂದ್ರ ಇವರು ನಡೆಸಿಕೊಟ್ಟರು. ಮಾನ್ಯ ಮುಜರಾಯಿ ಮತ್ತು ಬಂದರು ಹಾಗೂ ಒಳನಾಡು ಸಚಿವ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಇವರು ದಕ್ಷಿಣ ಕನ್ನಡ ಜಿಲ್ಲಾ ಒಕ್ಕೂಟ ಸೌಹಾರ್ದದ ನಾಮಫಲಕ ಅನಾವರಣಗೊಳಿಸಿದರು. ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರಕುಮಾರ್ ಕೋ–ಸಿಬಿಲ್ ತಂತ್ರಾಂಶ ಅನಾವರಣಗೊಳಿಸಿದರು.

**ಅವಲೋಕನಾ ಸಭೆ :** ಪ್ರತಿವರ್ಷ ವಾರ್ಷಿಕ ಸಾಮಾನ್ಯ ಸಭೆಗಿಂತ ಮೊದಲು ಅವಲೋಕನಾ ಸಭೆಗಳನ್ನು ನಡೆಸಲಾಗುತ್ತದೆ. ಅದರಂತೆ, ಈ ವರ್ಷ ಅಂದರೆ 2020–21ನೇ ಸಾಲಿನಲ್ಲಿ ಕೋರೋನ ಮಹಾಮಾರಿಯ ಕಾರಣದಿಂದಾಗಿ ಭೌತಿಕ ಸಭೆಗಳನ್ನು ನಡೆಸಲು ಸಾಧ್ಯವಾಗದೇ ಆನ್‌ಲೈನ್ ಸಭೆಗಳನ್ನು ನಡೆಸಲಾಗಿದೆ.

**ಜಿಲ್ಲಾ ಒಕ್ಕೂಟಗಳ ಕಾರ್ಯನಿರ್ವಹಣಾ ಸಭೆ :** ರಾಜ್ಯದಲ್ಲಿ ಇದುವರೆಗೆ 12 ಜಿಲ್ಲೆಗಳಲ್ಲಿ ಒಕ್ಕೂಟಗಳ ರಚನೆಯಾಗಿದ್ದು, ಕಾರ್ಯನಿರ್ವಹಿಸುತ್ತಿದೆ. ದಿನಾಂಕ 15ನೇ ಡಿಸೆಂಬರ್ 2020ರಂದು ಪ್ರಪ್ರಥಮವಾಗಿ ಈ ಒಕ್ಕೂಟಗಳ ಅಧ್ಯಕ್ಷರು, ನಿರ್ದೇಶಕರು, ಪದಾಧಿಕಾರಿಗಳ ಸಭೆಯನ್ನು ಆನ್‌ಲೈನ್ ಮೂಲಕ ಆಯೋಜಿಸಲಾಗಿತ್ತು. ಈ ಸಭೆಯಲ್ಲಿ 90ಕ್ಕೂ ಹೆಚ್ಚಿನ ಪ್ರತಿನಿಧಿಗಳು ಭಾಗವಹಿಸಿದ್ದರು. ಒಕ್ಕೂಟಗಳ ಪದಾಧಿಕಾರಿಗಳ ಆಸಕ್ತಿ ಹಾಗೂ ಸೌಹಾರ್ದ ಸಹಕಾರ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಕಾಳಜಿ ಶ್ಲಾಂಘನೀಯ. ಈ ಸಭೆಯಲ್ಲಿ ಒಕ್ಕೂಟಗಳು ರಾಜ್ಯದಾದ್ಯಂತ ಸ್ಥಾಪನೆಯಾಗಬೇಕು. ಒಕ್ಕೂಟಗಳು ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಜಿಲ್ಲೆಯ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸಬೇಕು. ಒಕ್ಕೂಟಗಳ ಆರ್ಥಿಕ ಸಬಲತೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂಬ ಬಗ್ಗೆ ವಿವರವಾಗಿ ಚರ್ಚಿಯಾಗಿರುವುದು ಸಂತೋಷದ ವಿಷಯವಾಗಿದೆ. ಮುಂಬರುವ ದಿನಗಳಲ್ಲಿ ಪ್ರತಿವರ್ಷ ಒಕ್ಕೂಟಗಳ ಸಭೆಯನ್ನು ಆಯೋಜಿಸಲು ಕ್ರಮವಿಡಲಾಗಿದೆ.

**ಜಿಲ್ಲಾ ಸಂಪರ್ಕ ಕಚೇರಿಗಳು :** ಎಲ್ಲ ಜಿಲ್ಲೆಗಳ ಜಿಲ್ಲಾ ಕೇಂದ್ರಗಳಲ್ಲಿ ಸಂಪರ್ಕ ಕಚೇರಿಯನ್ನು ಪ್ರಾರಂಭಿಸಲಾಗಿದೆ.

**ಸಹಕಾರ ಬ್ಯಾಂಕಿಂಗ್ ಹಾಗೂ ಆಡಳಿತ – ಆರು ತಿಂಗಳ ಅವಧಿಯ ಡಿಪ್ಲೋಮಾ ಕೋರ್ಸ್ (ಡಿ.ಸಿ.ಬಿ.ಎಮ್) :** ಎರಡನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸನ್ನು ದಿನಾಂಕ 01.01.2020ರಿಂದ ಪ್ರಾರಂಭಿಸಿ 30.06.2020ಕ್ಕೆ ಮುಕ್ತಾಯ ಮಾಡಲಾಗಿದೆ. ಈ ಎರಡನೇ ತಂಡದಲ್ಲಿ ಒಟ್ಟು 272 ಅಭ್ಯರ್ಥಿಗಳು ಪ್ರವೇಶ ಪಡೆದಿದ್ದರು. ಈ ತಂಡವನ್ನು ಬೆಂಗಳೂರು, ಶಿವಮೊಗ್ಗ, ಬೆಳಗಾವಿ, ರಾಯಚೂರು ಹಾಗೂ ಮುಧೋಳ ಹೀಗೆ 5 ಕೇಂದ್ರಗಳನ್ನಾಗಿ ವಿಂಗಡಿಸಿ ಸಂಪರ್ಕ ವರ್ಗಗಳನ್ನು ನಡೆಸಲಾಯಿತು. ಕೋರೋನ ಮಹಾಮಾರಿಯ ಕಾರಣದಿಂದಾಗಿ ಎರಡು ಹಾಗೂ ಮೂರನೇ ಸಂಪರ್ಕ ವರ್ಗಗಳನ್ನು ಆನ್‌ಲೈನ್ ಮೂಲಕ ಆಯೋಜಿಸಲಾಗಿತ್ತು. ಅಭ್ಯರ್ಥಿಗಳು ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದರು. ಈ ತಂಡದ ಅಂತಿಮ ಪರೀಕ್ಷೆಯನ್ನು ಸಹ ಆನ್‌ಲೈನ್ ಮೂಲಕ ನಡೆಸಲಾಯಿತು. ಈ ತಂಡದಲ್ಲಿ ಒಟ್ಟಾರೆ 246 ಅಭ್ಯರ್ಥಿಗಳು ಉತ್ತೀರ್ಣರಾಗಿದ್ದಾರೆ. ಮೂರನೇ ತಂಡವನ್ನು ದಿನಾಂಕ 01.01.2021ರಿಂದ ಪ್ರಾರಂಭಿಸಲಾಗುವುದು. ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿದೆ. ಡಿಸೆಂಬರ್ 31 ಪ್ರವೇಶ ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ.

**ಸಂಯುಕ್ತ ಸಹಕಾರಿಗೆ ನಿವೇಶನ ಹಾಗೂ ಕಟ್ಟಡ ನಿರ್ಮಾಣ :** ಬೆಂಗಳೂರು ನಗರದ ಮಲ್ಲೇಶ್ವರದಲ್ಲಿ ಕೇಂದ್ರ ಕಛೇರಿಯ ಕಟ್ಟಡ ನಿರ್ಮಾಣ ಕಾರ್ಯ ಮುಕ್ತಾಯ ಹಂತದಲ್ಲಿದೆ. 2021 ನೇ ಸಾಲಿನ ಪೂರ್ವಾರ್ಧದಲ್ಲಿ ಉದ್ಘಾಟನೆ ಹಮ್ಮಿಕೊಳ್ಳುವ ಹಂತದಲ್ಲಿದೆ. ಒಳಾಂಗಣ ವಿನ್ಯಾಸದ ಕೆಲಸಗಳು ಪ್ರಾರಂಭವಾಗಬೇಕಿದೆ.

ಬೆಳಗಾವಿ ಕಛೇರಿಯ ಕಟ್ಟಡ ಪ್ರಾರಂಭವಾಗಿದೆ. ಕೆಳಮಹಡಿಯ ಕೆಲಸಗಳು ಮುಕ್ತಾಯವಾಗಿದ್ದು ಮುಂದಿನ ಹಂತದ ಕೆಲಸಗಳು ಪ್ರಗತಿಯಲ್ಲಿವೆ. ಪ್ರಸಕ್ತ ಆಡಳಿತ ಮಂಡಳಿಯ ಅಧಿಕಾರಾವಧಿಯಲ್ಲಿಯೇ ಕಟ್ಟಡ ಮುಕ್ತಾಯವಾಗುವ ನಿರೀಕ್ಷೆ ಇದೆ. ಕಲಬುರಗಿ ಹಾಗೂ ಮೈಸೂರು ಪ್ರಾಂತೀಯ ಕಚೇರಿಗಳಿಗೆ ಉತ್ತಮ ನಿವೇಶನಗಳನ್ನು ಖರೀದಿಸಲಾಗಿದೆ.

**67ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ :** ದಿನಾಂಕ 17ನೇ ನವೆಂಬರ್ 2020ರಂದು ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ದರ್ಜಿಗಳ ಸಹಕಾರ ಮಹಾಮಂಡಳನಿ., ಬೆಂಗಳೂರು, ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ ನಿ ಕೋಲಾರ, ಕೋಲಾರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಒಕ್ಕೂಟ, ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲ ಸಹಕಾರ ಸಂಘಗಳು, ಸೌಹಾರ್ದ ಸಹಕಾರ ಸಂಸ್ಥೆಗಳು ಹಾಗೂ ಸಹಕಾರ ಇಲಾಖೆಯ ಸಹಯೋಗದೊಂದಿಗೆ 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯನ್ನು ಚಿಕ್ಕಬಳ್ಳಾಪುರದಲ್ಲಿ ಆಯೋಜಿಸಲಾಗಿತ್ತು. ದಿನದ ವಿಷಯವಾದ “ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು” ಈ ಬಗ್ಗೆ ನಬಾರ್ಡನ ನಿವೃತ್ತ ಅಧಿಕಾರಿಯಾದ ಶ್ರೀ ವೈ.ವಿ.ಗುಂಡೂರಾವರವರು ಉಪನ್ಯಾಸ ನೀಡಿದರು. ಮಾನ್ಯ ಸಹಕಾರ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಸುಧಾಕರ್, ಮಾನ್ಯ ನಗರಾಭಿವೃದ್ಧಿ ಸಚಿವರಾದ ಶ್ರೀ ಭೈರತಿ ಬಸವರಾಜ್, ಮಾನ್ಯ ಶಾಸಕಕರು ಹಾಗೂ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಹಾಲು ಉತ್ಪಾದಕರ ಒಕ್ಕೂಟ ನಿ., ಕೋಲಾರದ ಅಧ್ಯಕ್ಷರಾದ ಶ್ರೀ ಕೆ.ವೈ.ನಂಜೆಗೌಡ, ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಸುಬ್ಬಾರೆಡ್ಡಿ, ಸಹಕಾರ ಇಲಾಖೆಯ ನಿಬಂಧಕರಾದ ಶ್ರೀ ಜಿಯಾಉಲ್ಲ, ಜಿಲ್ಲಾಧಿಕಾರಿ ಶ್ರೀಮತಿ ಆರ್ ಲತಾ, ಜಿಲ್ಲಾ ಪೋಲೀಸ ವರಿಷ್ಠಾಧಿಕಾರಿಯಾದ ಶ್ರೀ ಮಿಥುನಕುಮಾರ್, ಸಹಕಾರಿ ಇಲಾಖೆಯ ಅಧಿಕಾರಿಗಳನ್ನು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಸಚಿವರಾದ ಶ್ರೀ ಎಸ್. ಟಿ. ಸೋಮಶೇಖರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಸರಕಾರದ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಡಾ ಕೆ. ಸುಧಾಕರರವರು ವಹಿಸಿದ್ದರು. 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವತಿಯಿಂದ ಉತ್ತಮ ಸೌಹಾರ್ದ ಸಹಕಾರಿ ಹಾಗೂ ಶ್ರೇಷ್ಠ ಸಹಕಾರಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

**ಉತ್ತಮ ಸೌಹಾರ್ದ ಸಹಕಾರಿಗಳಿಗೆ/ಶ್ರೇಷ್ಠ ಸಹಕಾರಿಗಳಿಗೆ ಪ್ರಶಸ್ತಿ ಪುರಸ್ಕಾರ :** ಹಿಂದಿನ ವಾರ್ಷಿಕ ಮಹಾಸಭೆಯಲ್ಲಿ ಆರಂಭಿಸಿದಂತೆ ಈ ವರ್ಷ ಕೂಡ ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆ ಹಾಗೂ ಶ್ರೇಷ್ಠ ಸಹಕಾರಿಗಳನ್ನು ಗುರುತಿಸಿ ಪುರಸ್ಕರಿಸಲಾಗುವುದು. ಇಂದಿನ ಸಭೆ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಯುತ್ತಿರುವುದರಿಂದ ಈ ಸಭೆಯಲ್ಲಿ ಶ್ರೀಯುತರ ಹೆಸರುಗಳನ್ನು ಪ್ರಕಟಿಸಿ ಮುಂದಿನ ದಿನಗಳಲ್ಲಿ ಭೌತಿಕವಾಗಿ ಬೃಹತ ಸಭೆಯೊಂದನ್ನು ಆಯೋಜಿಸಿ ಸಹಕಾರಿಗಳನ್ನು ಸನ್ಮಾನಿಸಲಾಗುವುದು.

**ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಸಹಕಾರಿಗಳಿಗೆ ಅಭಿನಂದನೆ :** ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುವ ವಿಶೇಷ ಸಂಗತಿ ಎಂದರೆ 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಂದರ್ಭದಲ್ಲಿ ರಾಜ್ಯದಲ್ಲಿ 32 ಸಹಕಾರಿಗಳನ್ನು ಗುರುತಿಸಿ ಕರ್ನಾಟಕ ಸರಕಾರದ ಪ್ರತಿಷ್ಠಿತ ಸಹಕಾರ ರತ್ನ ಪ್ರಶಸ್ತಿಯನ್ನು ನೀಡಲಾಗಿದೆ. ಅದರಲ್ಲಿ 4 ಜನರು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಸೇರಿದವರಾಗಿದ್ದಾರೆ.

ಇವರೆಲ್ಲರಿಗೂ ಸಂಯುಕ್ತ ಸಹಕಾರಿಯ ವತಿಯಿಂದ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ನಿಮ್ಮ ಸಹಕಾರವೇ ನಮಗೆ ಸ್ಫೂರ್ತಿ :** ಸೌಹಾರ್ದ ಸಹಕಾರಿ ಕಾಯ್ದೆಯ ಕೆಲವು ತೊಡಕುಗಳು, ಆದಾಯ ತೆರಿಗೆ ಕಾಯ್ದೆಯಡಿಯಲ್ಲಿ ಆಗುತ್ತಿರುವ ಬಾಧೆಗಳು, ಮಧ್ಯೆಯೂ ರಾಜ್ಯದ ಸೌಹಾರ್ದ ಸಹಕಾರ ಚಳುವಳಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಕರ್ನಾಟಕದ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಂಯುಕ್ತ ಸಹಕಾರಿಯು ಗುರುತಿಸಲ್ಪಟ್ಟಿರುವುದು ನಾವುಗಳೆಲ್ಲ ಸಂತೋಷಪಡುವ ವಿಷಯ. ನೀವು ನೀಡುತ್ತಿರುವ ಸಹಕಾರವೇ ನಮ್ಮ ಸ್ಫೂರ್ತಿ ನಿಮಗೆಲ್ಲ ಧನ್ಯವಾದಗಳು ಎಂದು ತಿಳಿಸಿದರು.

**ಕೃತಜ್ಞತೆ :** ಸಂಯುಕ್ತ ಸಹಕಾರಿಯ ಕ್ರಿಯಾ ಯೋಜನೆಗಳನ್ನು ಸಾಕಾರಗೊಳಿಸುವಲ್ಲಿ ಜೊತೆಯಾಗಿ ಶ್ರಮಿಸುತ್ತಿರುವ ಮಾನ್ಯ ಉಪಾಧ್ಯಕ್ಷರು, ಪ್ರಸಕ್ತ ಆಡಳಿತ ಮಂಡಲಿಯ ಸದಸ್ಯರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕರ್ನಾಟಕ ರಾಜ್ಯ ಸರಕಾರದ ಮಾನ್ಯ ಮುಖ್ಯ ಮಂತ್ರಿಗಳು, ವಿಶೇಷವಾಗಿ ಸಹಕಾರ ಮಂತ್ರಿಗಳಾದ ಶ್ರೀ ಎಸ್.ಟಿ.ಸೋಮಶೇಖರವರು, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಸಹಕಾರಿಗಳ ನಿಬಂಧಕರು, ರಾಜ್ಯದ

ಎಲ್ಲ ಸಹಕಾರ ಮಹಾಮಂಡಳಗಳ ಪದಾಧಿಕಾರಿಗಳು, ಸಹಕಾರ ಇಲಾಖೆಯ ಎಲ್ಲ ಅಧಿಕಾರಿಗಳು, ವಿಶೇಷವಾಗಿ ಸಹಕಾರಿಗಳ ನಿಬಂಧಕರ ಕಚೇರಿಯ ಕಾನೂನ ಕೋಶ ವಿಭಾಗದ ಜಂಟಿ ನಿಬಂಧಕರಾದ ಶ್ರೀ ಎಮ್.ಡಿ.ನರಸಿಂಹಮೂರ್ತಿಯವರಿಗೆ ಸಂಯುಕ್ತ ಸಹಕಾರಿಯ ಎಲ್ಲ ಅಧಿಕಾರಿಗಳಿಗೆ ಆಡಳಿತ ಮಂಡಳಿಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮುಂಬರುವ ದಿನಗಳಲ್ಲೂ ಇದೇ ರೀತಿಯ ಸಹಕಾರವನ್ನು ಅಪೇಕ್ಷಿಸುತ್ತೇನೆ "ನಿಮ್ಮ ಸಂಪೂರ್ಣ ಸಹಕಾರದಿಂದ ಆಡಳಿತ ಮಂಡಳಿಯ ನಿರಂತರ ಪ್ರಯತ್ನದ ಫಲವಾಗಿ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಉತ್ತಮವಾಗಿ ನಡೆಯಲು ಹಾಗೂ ಈ ಸಾಧನೆ ಸಾಧಿಸಲು ಸಾಧ್ಯವಾಗಿದೆ. ಸಹಕಾರ ನೀಡಿದ ಎಲ್ಲ ಸಹಕಾರಿ ಗಣ್ಯಮಾನ್ಯರಿಗೆ ಸಿಬ್ಬಂದಿಯವರಿಗೆ ಧನ್ಯವಾದಗಳು.

## ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ ಪಾಟೀಲ್ ಇವರಿಂದ ಸಾಮಾನ್ಯ ಸಭೆಯ ವಿಷಯಗಳ ಮಂಡನೆ :

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ ಪಾಟೀಲ್ ರವರಿಂದ ಸಾಮಾನ್ಯ ಸಭೆಯ ವಿಷಯ ಪಟ್ಟಿಯಲ್ಲಿರುವಂತೆ ಅನುಕ್ರಮವಾಗಿ ವಿಷಯಗಳ ಮಂಡನೆ ಮಾಡಿರುವುದನ್ನು ಸದಸ್ಯರು ಸರ್ವಾನುಮತದಿಂದ ಅನುಮೊದಿಸಿದರು.

**ಪ್ರಶ್ನೋತ್ತರಗಳು :** ಹಲವಾರು ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಉತ್ತರ ನೀಡಿದರು.

## ಸಭೆಯಲ್ಲಿ ಸಹಕಾರ ಸಚಿವ ಶ್ರೀ ಎಸ್.ಸೋಮಶೇಖರ ರವರಿಂದ ಕ್ಯಾಲೆಂಡರ್ ಬಿಡುಗಡೆ.



ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ವಿನಂತಿಯ ಮೇರೆಗೆ ರಾಜ್ಯದ ಸಹಕಾರ ಸಚಿವರಾದ ಮಾನ್ಯ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರವರು ಆಗಮಿಸಿ ಸಂಯುಕ್ತ ಸಹಕಾರಿಯ 2021 ನೇ ಸಾಲಿನ ಕ್ಯಾಲೆಂಡರ ಬಿಡುಗಡೆ ಮಾಡಿದರು. ಸಂಯುಕ್ತ ಸಹಕಾರಿಯ ವಿಡಿಯೊ ಕಾನ್ಫರೆನ್ಸ ಮೂಲಕ ನಡೆಯುತ್ತಿರುವ ವಾರ್ಷಿಕ ಸಾಮಾನ್ಯ ಸಭೆ ಹಾಗೂ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

## ವಂದನಾರ್ಪಣೆ :

ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಮಂಜುನಾಥರವರು ವಂದನಾರ್ಪಣೆ ಸಲ್ಲಿಸಿದರು. ರಾಷ್ಟ್ರಗೀತೆ ಹಾಗೂ ಶಾಂತಿ ಮಂತ್ರದೊಂದಿಗೆ ಸಭೆ ಮುಕ್ತಾಯವಾಯಿತು.

# ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿ ಶ್ರೀ ಮಂಜುನಾಥಸಿಂಗ್ ಇವರ ಜೊತೆಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಚರ್ಚೆ ಹಾಗೂ ಸನ್ಮಾನ



**ಬೆಂಗಳೂರು** : ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿ ಶ್ರೀ ಮಂಜುನಾಥ ಸಿಂಗ್ ಇವರೊಂದಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ದಾವಾ ಪಂಚಾಯಿತಿ ನ್ಯಾಯಾಲಯದ ಕಾರ್ಯಕಲಾಪಗಳ ಬಗ್ಗೆ ಚರ್ಚಿಸಿದರು. ಶ್ರೀ ಮಂಜುನಾಥ ಸಿಂಗರವರು ಪೀಠಾಧಿಕಾರಿಯಾಗಿ ಕಾರ್ಯಭಾರ ವಹಿಸಿಕೊಂಡ ನಂತರ ವ್ಯಾಜ್ಯಗಳ ವಿಲೇವಾರಿ ತ್ವರಿತವಾಗಿ ನಡೆಯುತ್ತಿವೆ. ಅಧಿಕಾರ ವಹಿಸಿಕೊಂಡ ಕೇವಲ 3 ತಿಂಗಳಲ್ಲಿ 2500 ಕೇಸಗಳ ವಿಲೇವಾರಿಯಾಗಿದೆ. ಇನ್ನು 3 ತಿಂಗಳಲ್ಲಿ 4000 ಕೇಸಗಳ ವಿಲೇವಾರಿಗೆ ಕ್ರಮವಿಡಲಾಗುವುದು ಎಂದು ತಿಳಿಸಿದರು. ನಿರ್ದೇಶಕರುಗಳಾದ ಶ್ರೀ ಗುರುನಾಥ ಜಾಂತಿಕರ, ಶ್ರೀ ಜಿ.ಎನ್.ಪಾಟೀಲ ಶ್ರೀ ಮಂಜುನಾಥ ರವರು ಹಲವಾರು ವಿಷಯಗಳ ಬಗ್ಗೆ ಚರ್ಚೆ ಮಾಡಿದರು. ಶ್ರೀ ಸಿದ್ರಾಮಪ್ಪ ಉಪ್ಪಿನ, ಶ್ರೀ ತಿಮ್ಮಯ್ಯ ಶೆಟ್ಟಿ ಇವರುಗಳು ಪೀಠಾಧಿಕಾರಿಗಳ ಕಾರ್ಯಶೈಲಿಯನ್ನು ಶ್ಲಾಘಿಸಿದರು.

ಸಭೆಯಲ್ಲಿ ಶ್ರೀ ಮಂಜುನಾಥ ಸಿಂಗರವರನ್ನು ಶಾಲು ಹೊದಿಸಿ ಹಾರ ಹಾಕಿ ಫಲತಾಂಬೂಲ ನೀಡಿ ಸನ್ಮಾನಿಸಲಾಯಿತು. ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮಾತನಾಡಿ ಕಳೆದ 3 ತಿಂಗಳುಗಳ ಹಿಂದೆ ಕೋರ್ಟನ ಕಾರ್ಯಚಟುವಟಿಕೆಗಳ ಬಗ್ಗೆ ಸೌಹಾರ್ದ ಸಹಕಾರಿಗಳಲ್ಲಿ ಅಸಮಾಧಾನವಿತ್ತು. ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಈ ಅಸಮಾಧಾನವನ್ನು ನಿವಾರಿಸಲು ಹಲವು ಬಾರಿ ಸಹಕಾರ ಸಚಿವರನ್ನು ಹಾಗು ಸಹಕಾರ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಯವರನ್ನು ಹಾಗೂ ನಿಬಂಧಕರನ್ನು ಭೇಟಿ ಮಾಡಿ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸಲಾಗಿತ್ತು. ಸರಕಾರ ಶ್ರೀ ಮಂಜುನಾಥ ಸಿಂಗ್ ರವರಂತಹ ಅಧಿಕಾರಿಯವರನ್ನು ಪೀಠಾಧಿಕಾರಿಯನ್ನಾಗಿ ನೇಮಕ ಮಾಡಿರುವುದು ಸಂಯುಕ್ತ ಸಹಕಾರಿಗೆ ಹಾಗೂ ಸೌಹಾರ್ದ ಸಹಕಾರಿಗಳಿಗೆ ಸಮಾಧಾನವನ್ನು ತಂದಿದೆ. ಶ್ರೀ ಮಂಜುನಾಥ ಸಿಂಗ್‌ರವರ ಕಾರ್ಯಶೈಲಿಯನ್ನು ಮೆಚ್ಚಿ ಸಂತೋಷ ವ್ಯಕ್ತಪಡಿಸಿದರು.

ಶ್ರೀ ಮಂಜುನಾಥ ಸಿಂಗ್‌ರವರು ಮಾತನಾಡಿ ಸಹಕಾರ ಕ್ಷೇತ್ರದಲ್ಲಿ ಸಾರ್ವಜನಿಕರ ಸೇವೆಗೆ ಉತ್ತಮ ಅವಕಾಶವಿದೆ ಮಾಡುವ ಕೆಲಸವನ್ನು ಶ್ರದ್ಧೆಯಿಂದ ಪ್ರಾಮಾಣಿಕತೆಯಿಂದ ಮಾಡಿದಾಗ ಮನಸ್ಸಿಗೆ ನೆಮ್ಮದಿ ಇರುತ್ತದೆ ಎಂದು ತಿಳಿಸುತ್ತ ತಾವು ಸೇವೆ ಸಲ್ಲಿಸಿರುವ ಉಡುಪಿ ಮುಂತಾದ ಜಿಲ್ಲೆಗಳಲ್ಲಿ ತಮ್ಮ ಅವಧಿಯಲ್ಲಿ ನಡೆದ ಕಾರ್ಯಚಟುವಟಿಕೆಗಳ ಬಗ್ಗೆ ವಿವರಿಸಿದರು. ಪ್ರಸಕ್ತ ಬೆಂಗಳೂರು 3ನೇ ವಲಯದ ಉಪನಿಬಂಧಕರಾಗಿ ಸೇವೆ ಸಲ್ಲಿಸುತ್ತ ಹೆಚ್ಚುವರಿಯಾಗಿ ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿಯಾಗಿ ಕಾರ್ಯನಿರ್ವಹಿಸುವ ಸದಾವಕಾಶ ಒದಗಿದೆ. ಈ ಕಾರ್ಯವನ್ನು ಉತ್ತಮವಾಗಿ ನಿರ್ವಹಿಸಲು ತಮ್ಮೆಲ್ಲರ ಸಹಕಾರ ಅಗತ್ಯ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲರವರು ವಂದನಾರ್ಪಣೆ ಮಾಡಿದರು.

# ಅನೇಕ ಸಮಸ್ಯೆಗಳಿಗೆ ಪರಿಹಾರ ಒದಗಿಸಿದ ಹಾಗೂ ಸಹಕಾರಿಗಳಲ್ಲಿ ಕಾರ್ಯಕ್ಷಮತೆಯನ್ನು ಹೆಚ್ಚಿಸಿದ ರಾಜ್ಯದ ಸೌಹಾರ್ದ ಸಹಕಾರಿಗಳ ಅವಲೋಕನಾ ಸಭೆಗಳು

ಡಿಸೆಂಬರ್ ಮಾಹೆಯಲ್ಲಿ ದಿನಾಂಕ 1 ರಿಂದ ಪ್ರಾರಂಭಿಸಿ ದಿನಾಂಕ 14 ರವರೆಗೆ ರಾಜ್ಯದ 20 ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಸೌಹಾರ್ದ ಸಹಕಾರಿಗಳ ಅವಲೋಕನಾ ಸಭೆಗಳನ್ನು ನಡೆಸಲಾಯಿತು. ಒಟ್ಟಾರೆ 4162 ಸೌಹಾರ್ದ ಸಹಕಾರಿಗಳ ಪೈಕಿ 1826, ಪ್ರತಿಶತ 4387 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಈ ಸಭೆಗಳಲ್ಲಿ ಭಾಗವಹಿಸಿ ಸಕ್ರೀಯವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಲು ಅವಕಾಶವಾಗಿದೆ. ಉತ್ತಮ ಸಲಹೆಗಳನ್ನು ನೀಡಿದ್ದಾರೆ. ಕೆಲವು ಹಿರಿಯ ಸಹಕಾರಿಗಳು ಈ ರೀತಿಯ ಅವಲೋಕನಾ ಸಭೆಗಳ ಮೂಲಕ ಸೌಹಾರ್ದ ಸಹಕಾರಿಗಳನ್ನು ಹುರಿದುಂಬಿಸಿದಂತಾಗುತ್ತದೆ. ಹೊಸ ಚೈತನ್ಯವನ್ನು

ಮೂಡಿಸಿದಂತಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತ ಮಾಡಿದರು. ಅವಲೋಕನ ಸಭೆಗಳು ನಡೆದ ಸ್ಥಳಗಳಲ್ಲಿ ಸಂಬಂಧಿಸಿದ ಜಿಲ್ಲೆಗಳ ನಿರ್ದೇಶಕರುಗಳು ಸಕ್ರೀಯವಾಗಿ ಭಾಗವಹಿಸಿದ್ದರು.

ಎಲ್ಲ ಅವಲೋಕನಾ ಸಭೆಗಳಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತ "ಸೌಹಾರ್ದ ಸಹಕಾರಿಗಳ ನಡೆ ಗುಣಮಟ್ಟದ ಕಡೆ" ಎಂಬ ವಿಷಯಕ್ಕೆ ಹೆಚ್ಚು ಒತ್ತುಕೊಟ್ಟು ಸಂಯುಕ್ತ ಸಹಕಾರಿಯು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ತಮ್ಮ ಗುಣಮಟ್ಟವನ್ನು ಕಾಯ್ದುಕೊಳ್ಳಲು ಹಾಗೂ ಹೆಚ್ಚಿಸಿಕೊಳ್ಳಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲು ಕ್ರಮವಿಡಬೇಕೆಂದು ಸೂಚಿಸಿದರು.

ಇದಕ್ಕೆ ಪೂರಕವಾಗಿ ಸಂಯುಕ್ತ ಸಹಕಾರಿಯ ಮೂಲಕ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಗೆ, ಆದಾಯ ತೆರಿಗೆ ಕಾಯ್ದೆಯ ತೊಂದರೆಗಳ ನಿವಾರಣೆಗೆ ಪ್ರಯತ್ನಿಸಿರುವ ಬಗ್ಗೆ, ಸಂಯುಕ್ತ ಸಹಕಾರಿಯ ಕಟ್ಟಡಗಳ ಹಾಗೂ ನಿವೇಶನಗಳ ನಿರ್ವಹಣೆಯ ಬಗ್ಗೆ ಡಿ.ಸಿ.ಬಿ.ಎಮ್ ಕೋರ್ಸನ ವಿವರಗಳು, ಸೌಹಾರ್ದ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳ ಬಗ್ಗೆ, ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆ ನಡೆಸುತ್ತಿರುವ ಬಗ್ಗೆ, ಸೌಹಾರ್ದ ಸಹಕಾರಿಗಳು ಠೇವಣಿದಾರರ ಹಿತರಕ್ಷಣೆಗೆ ಕ್ರಮ ತೆಗೆದುಕೊಳ್ಳುವ ಬಗ್ಗೆ, ಸೌಹಾರ್ದ ತಮ್ಮ ಸಂಪನ್ಮೂಲಗಳನ್ನು ಭದ್ರವಾಗಿರುವ ಬ್ಯಾಂಕುಗಳಲ್ಲಿ ಮಾಡಬೇಕೆ ವಿನಹ ಬೇರೆ ಸಹಕಾರ ಸಂಸ್ಥೆಗಳಲ್ಲಿ, ಯಾವುದೇ ಹಿತಾಸಕ್ತಿಯಿಂದ ಕೆಲವೇ ಪದಾಧಿಕಾರಿಗಳಿಗೆ ನಿಯಮಬಾಹಿರವಾಗಿ ಸಾಲ ನೀಡಬಾರದು ಕಾನೂನು ನಿಯಮಗಳ ವ್ಯಾಪ್ತಿಯಲ್ಲಿ ಹೂಡಿಕೆ ಮಾಡಬೇಕೆಂದು ತಿಳಿಸಿದರು. ಇದಲ್ಲದೆ ಇನ್ನೂ ಹಲವಾರು ವಿಷಯಗಳ ಬಗ್ಗೆ ಮಾತನಾಡಿ ನಂತರ ಸಭೆಯಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳ ಪ್ರಶ್ನೆಗಳಿಗೆ ಉತ್ತರ ನೀಡಿದರು. ಎಲ್ಲ ಸಭೆಗಳು ಅತ್ಯಂತ ಉತ್ತಮಗುಣಮಟ್ಟದಲ್ಲಿ ಪರಿಣಾಮಕಾರಿಯಾಗಿ ನಡೆಯಿತು.

## ಸೌಹಾರ್ದ ಸಹಕಾರಿಗಳ ದಾವೆಗಳನ್ನು ಇತ್ಯರ್ಥಗೊಳಿಸಲು 288 ಮಧ್ಯಸ್ಥದಾರರ ನೇಮಕ ಮಾಡಿ ನಿಬಂಧಕರ ಆದೇಶ

## ಒಟ್ಟಾರೆ ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಮಧ್ಯಸ್ಥದಾರರ ಸಂಖ್ಯೆ 490

ಈಗಾಗಲೇ ರಾಜ್ಯದಾದ್ಯಂತ ಸೌಹಾರ್ದ ಸಹಕಾರಿಗಳ ವ್ಯಾಜಗಳ ವಿಲೇವಾರಿಗಾಗಿ 202 ಮಧ್ಯಸ್ಥದಾರರ ನೇಮಕದ ಜೊತೆಗೆ ಹೊಸದಾಗಿ ಸಹಕಾರಿಗಳ ನಿಬಂಧಕರು 288 ಮಧ್ಯಸ್ಥದಾರರ ನೇಮಕ ಮಾಡಿ 18.12.2020 ರಂದು ಆದೇಶ ಹೊರಡಿಸಿದ್ದಾರೆ. ಇದರಿಂದಾಗಿ ರಾಜ್ಯದ ಸೌಹಾರ್ದ ಸಹಕಾರಿಗಳ ವ್ಯಾಜ್ಯಗಳ ವಿಲೇವಾರಿ ತೀವ್ರಗತಿಯಲ್ಲಿ ಆಗಲು ಸಾಧ್ಯವಾಗುತ್ತದೆ.

ಈ ಮಧ್ಯಸ್ಥದಾರರಾಗಿ ನೇಮಕಗೊಂಡಿರುವ ವಕೀಲರು ಕನಿಷ್ಠ 8 ವರ್ಷಕ್ಕಿಂತ ಹೆಚ್ಚು ವರ್ಷಗಳ ಅನುಭವ ಹೊಂದಿದವರಾಗಿದ್ದಾರೆ. 3 ಲಕ್ಷದ ಮಿತಿಯೊಳಗಿನ ಆರ್ಥಿಕ ವ್ಯವಹಾರಗಳ ದಾವೆಗಳನ್ನು ಈ ಮಧ್ಯಸ್ಥದಾರರು ನಿರ್ವಹಿಸುತ್ತಾರೆ. ಮಧ್ಯಸ್ಥದಾರರು ಸಹಕಾರಿಗಳ ಸ್ಥಳದಲ್ಲಿಯೆ ದಾವೆಗಳನ್ನು ಇತ್ಯರ್ಥಗೊಳಿಸಿ ಸಂಬಂಧಿಸಿದವರಿಗೆ ವರದಿ ಕಳುಹಿಸಬೇಕು.

ಈ ಆದೇಶದ ಪೂರ್ಣವಿವರಗಳನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ ಮತ್ತು ಸ್ವಾಭಿಮಾನಿ ಸಹಕಾರಿಯ ಡಿಜಿಟಲ್ ಪ್ರತಿಯಲ್ಲಿ ಪ್ರಕಟಿಸಿದೆ.

ಸೌಹಾರ್ದ ಸಹಕಾರಿಗಳ ಸಾಲ ವಸೂಲಾತಿ ಪ್ರಕ್ರೀಯೆ ಚುರುಕುಗೊಳ್ಳುವುದರ ಜೊತೆಗೆ ಸಹಕಾರಿಗಳ ಆರ್ಥಿಕತೆಯಲ್ಲಿ ಚೇತರಿಕೆ ಹಾಗೂ ಹಣಕಾಸು ನಿರ್ವಹಣೆಗೆ ಬಲ ನೀಡುತ್ತದೆ ಈ ಆದೇಶ.

## ರಾಜ್ಯದ ಸೌಹಾರ್ದ ಸಹಕಾರಿಗಳ ಜಿಲ್ಲಾ ಒಕ್ಕೂಟಗಳ ಕಾರ್ಯನಿರ್ವಹಣಾ ಸಭೆ

ದಿನಾಂಕ 15ನೇ ಡಿಸೆಂಬರ್ 2020ರಂದು ಪ್ರಪ್ರಥಮವಾಗಿ ಈ ಒಕ್ಕೂಟಗಳ ಅಧ್ಯಕ್ಷರು, ನಿರ್ದೇಶಕರು, ಪದಾಧಿಕಾರಿಗಳ ಸಭೆಯನ್ನು ಆನ್‌ಲೈನ್ ಮೂಲಕ ಆಯೋಜಿಸಲಾಗಿತ್ತು. ಈ ಸಭೆಯಲ್ಲಿ 90ಕ್ಕೂ ಹೆಚ್ಚಿನ ಪ್ರತಿನಿಧಿಗಳು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜಾಂತಿಕರ, ಶ್ರೀ ಸಂಜೀವ ಮಹಾಜನ, ಶ್ರೀ ಬಿ.ಎಸ್.ಗುಂಡೂರಾವ, ಶ್ರೀ ಪ್ರಸನ್ನಕುಮಾರ, ಶ್ರೀ ಶ್ರೀಧರ, ಶ್ರೀ ಗಂಗಾಧರಯ್ಯ ಶ್ರೀಮತಿ ಸರಸ್ವತಿ ಮುಂತಾದವರು ಭಾಗವಹಿಸಿ ಒಕ್ಕೂಟಗಳ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಹಾಗೂ ಒಕ್ಕೂಟಗಳ ಆರ್ಥಿಕ ಭದ್ರತೆಗೆ ಹಲವಾರು ಸೂಚನೆಗಳನ್ನು ನೀಡಿದರು.

ರಾಜ್ಯದಲ್ಲಿ ಇದುವರೆಗೆ 12 ಜಿಲ್ಲೆಗಳಲ್ಲಿ ಒಕ್ಕೂಟಗಳ ರಚನೆಯಾಗಿದ್ದು, ಕಾರ್ಯನಿರ್ವಹಿಸುತ್ತಿದೆ. ಒಕ್ಕೂಟಗಳ ಪದಾಧಿಕಾರಿಗಳ ಆಸಕ್ತಿ ಹಾಗೂ ಸೌಹಾರ್ದ ಸಹಕಾರ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಕಾಳಜಿ ಶ್ಲಾಘನೀಯ. ಈ ಸಭೆಯಲ್ಲಿ ಒಕ್ಕೂಟಗಳು ಆರ್ಥಿಕವಾಗಿ ಸಶಕ್ತವಾಗಿ ಕಾರ್ಯನಿರ್ವಹಿಸುವಂತ ಸೌಹಾರ್ದ ಸಹಕಾರಿಗಳ ಒಕ್ಕೂಟಗಳು ಸೌಹಾರ್ದ ಸಹಕಾರಿಗಳ ಹಲವು ವಿಧವಾದ ಸೇವೆಯನ್ನು ಒದಗಿಸುವುದರ ಮೂಲಕ ತಮ್ಮ ಆದಾಯವನ್ನು

ಸಂಗ್ರಹ ಮಾಡಿಕೊಳ್ಳಬಹುದಾಗಿದೆ. ಇ-ಸ್ಟಾಂಪಿಂಗ ಕೇಂದ್ರವನ್ನು, ಸ್ಟೇಷನರಿ ವಸ್ತುಗಳ ಮಾರಾಟವನ್ನು, ಸೌಹಾರ್ದ ಸಹಕಾರಿಗಳ ಸಾಲ ವಸೂಲಾತಿಗಾಗಿ ಸೇಲ್ ಆಫೀಸರಗಳ ನೇಮಕಾತಿಗಳನ್ನು, ಸೌಹಾರ್ದ ಸಹಕಾರಿಗಳ ನಿರ್ದೇಶಕರು ಹಾಗೂ ಸಿಬ್ಬಂದಿಯವರಿಗಾಗಿ ಅಧ್ಯಯನ ಪ್ರವಾಸಗಳನ್ನು ಹೀಗೆ ಅನೇಕ ಸಲಹೆಗಳು ವ್ಯಕ್ತವಾಗಿವೆ.

ಈ ಸಭೆಯಲ್ಲಿ ಒಕ್ಕೂಟಗಳು ರಾಜ್ಯಾದ್ಯಂತ ಸ್ಥಾಪನೆಯಾಗಬೇಕು. ಒಕ್ಕೂಟಗಳು ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಜಿಲ್ಲೆಯ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸಬೇಕು. ಒಕ್ಕೂಟಗಳ ಆರ್ಥಿಕ ಸಬಲತೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂಬ ಬಗ್ಗೆ ವಿವರವಾಗಿ ಚರ್ಚಿಯಾಗಿರುವುದು ಸಂತೋಷದ ವಿಷಯವಾಗಿದೆ. ಮುಂಬರುವ ದಿನಗಳಲ್ಲಿ ಪ್ರತಿವರ್ಷ ಒಕ್ಕೂಟಗಳ ಸಭೆಯನ್ನು ಆಯೋಜಿಸಲು ತೀರ್ಮಾನಿಸಲಾಯಿತು.

## ಕರ್ನಾಟಕ ರಾಜ್ಯ ಬಸವೇಶ್ವರ ಸುದ್ಧಿಮಾಧ್ಯಮ ಸಹಕಾರ ಮಹಾಮಂಡಳದ ಮುಖವಾಣಿ – ಸಹಕಾರ ಸಿಂಚನ

## ಸಹಕಾರ ಕ್ಷೇತ್ರದ ಸಮಗ್ರ ಕಾರ್ಯಚಟುವಟಿಕೆಗಳ ಮಾಸ ಪತ್ರಿಕೆ ಸಹಕಾರ ಸಿಂಚನ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರರವರಿಂದ ಪ್ರಥಮ ಸಂಚಿಕೆ ಬಿಡುಗಡೆ





**ಬೆಂಗಳೂರು :** ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಮಾಸ ಪತ್ರಿಕೆ "ಸಹಕಾರ ಸಿಂಚನ" ದ ಪ್ರಥಮ ಪತ್ರಿಕೆಯನ್ನು ವಿಶೇಷ ಸಭೆಯಲ್ಲಿ ಕರ್ನಾಟಕ ರಾಜ್ಯದ ಸಹಕಾರ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರರವರು ಬಿಡುಗಡೆ ಮಾಡಿ ಶುಭ ಕೋರಿದರು.

ಮಹಾಮಂಡಳದ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಮಾನ್ಯ ಸಚಿವರನ್ನು ಸಭೆಗೆ ಸ್ವಾಗತಿಸಿದ ಅಧ್ಯಕ್ಷರಾದ ಗುರುನಾಥ ಜಾಂತಿಕರರವರು ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಕಾರ್ಯಚಟುವಟಿಕೆಗಳನ್ನು ವಿವರಿಸುತ್ತ ಹಿರಿಯ ಸಹಕಾರಿಗಳು ಹಾಗೂ ಮಾಜಿ ಸಹಕಾರ ಸಚಿವ ಶ್ರೀ ಎಸ್.ಎಸ್.ಪಾಟೀಲ್‌ರವರ ಮುಂದಾಳತ್ವದಲ್ಲಿ ಈ ಮಹಾಮಂಡಳ ರಚನೆಯಾಗಿದೆ. ಈ ಮಹಾಮಂಡಳ ತನ್ನದೇ ಆದ ಸಹಕಾರ ಟಿ.ವಿ. ಪ್ರಾರಂಭಿಸುವ ಘನ ಉದ್ದೇಶವನ್ನು ಹೊಂದಿದೆ. ಈಗಾಗಲೇ "ಯೂ" ಟ್ಯೂಬ್ ಮೂಲಕ ಸಹಕಾರ ವಾರ್ತೆಗಳನ್ನು ಸಭೆ ಸಮಾರಂಭಗಳ ವರದಿಯನ್ನು ಬಿತ್ತರಿಸಲಾಗುತ್ತಿದೆ. ಜನರಿಂದ ಸಾಕಷ್ಟು ಪ್ರೋತ್ಸಾಹ ದೊರೆತಿದೆ. ಈಗ ಸಮಗ್ರ ಸಹಕಾರ ಕ್ಷೇತ್ರದ ರಾಷ್ಟ್ರೀಯ ಹಾಗೂ ರಾಜ್ಯದ ನೈಜ ಸುದ್ದಿ ಸಮಾಚಾರಗಳನ್ನು ಪ್ರಗತಿಚಿತ್ರವನ್ನು ದ್ವಿಭಾಷಾ ಮಾಸ ಪತ್ರಿಕೆಯನ್ನು ಪ್ರಕಟಿಸಲು ಕ್ರಮ ವಿಡಲಾಗಿದೆ. ಈ ಪತ್ರಿಕೆ ಸಮಗ್ರ ಸಹಕಾರ, ಆರ್ಥಿಕ, ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟು ಸಂಗ್ರಹ ಯೋಗ್ಯ ಹಾಗೂ ಅಧ್ಯಯನ ಯೋಗ್ಯ ಮಾಸ ಪತ್ರಿಕೆಯಾಗಿಸುವ ಉದ್ದೇಶ ಹೊಂದಿದೆ. ಎಂದು ತಿಳಿಸಿದರು.

ಮಹಾಮಂಡಳದ ಪ್ರಭಾರ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ್ರವರು ವಂದನಾರ್ಪಣೆ ಮಾಡಿದರು.



## ಕುರುಹೀನ ಸೌಹಾರ್ದ ಸಹಕಾರಿಯ ನಿರ್ದೇಶಕ ಶ್ರೀ ಡಾ.ಕೆ.ನಾರಾಯಣ ರಾಜ್ಯ ಸಭೆಗೆ ಅವಿರೋಧ ಆಯ್ಕೆ

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಜೊತೆಗೆ ನಿಕಟ ಸಂಪರ್ಕ ಹೊಂದಿರುವ ಸ್ವಾನ ಪ್ರಿಂಟ್ ಸಂಸ್ಥೆಯ ಉದ್ಯಮಿ ಶ್ರೀ ಕೆ. ನಾರಾಯಣ ರವರು ರಾಜ್ಯ ಸಭಾ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗೂ ರಾಜ್ಯದ ಸಮಸ್ತ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳು.

# ಸಂಯುಕ್ತ ಸಹಕಾರಿಯ ಕೇಂದ್ರ ಕಚೇರಿ ಹಾಗೂ ಪ್ರಾಂತೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ

## ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟದ ಕಡೆ ನಡೆಸಲು ಪ್ರತಿಜ್ಞೆ

## ಉತ್ತರದಾಯಿತ್ವದಲ್ಲಿ ಸಿಬ್ಬಂದಿಯವರಿಗೂ ಸಮಪಾಲು – ಬಿ.ಹೆಚ್.ಕೃಷ್ಣಾರೆಡ್ಡಿ



**ಬೆಂಗಳೂರು :** ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಪ್ರಾರಂಭವಾಗಿ 20 ವರ್ಷಗಳಾಗಿವೆ. ದಿನಾಂಕ 01.01.2001 ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದಿರುವದರಿಂದ ಪ್ರತಿ ವರ್ಷ 1, ಜನವರಿ ಸೌಹಾರ್ದ ಸಹಕಾರಿ ದಿನವನ್ನಾಗಿ ಆಚರಿಸಲಾಗುತ್ತಿದೆ. ರಾಜ್ಯದಾದ್ಯಂತ ಎಲ್ಲ ಸಹಕಾರಿಗಳು ಸಹಕಾರಿ ಧ್ವಜಾರೋಹಣ ಮಾಡುವುದರೊಂದಿಗೆ ದಿನಾಚರಣೆಗೆ ಚಾಲನೆ ನೀಡುವುದು ನಂತರ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಸರಕಾರದ ಸಾರ್ವಜನಿಕರ ಹಾಗೂ ಸದಸ್ಯರ ಗಮನ ಸೆಳೆಯುವುದಾಗಿದೆ. ಈ ಕ್ಷೇತ್ರದ ಅಭಿವೃದ್ಧಿಗಾಗಿ ಸಂಯುಕ್ತ ಸಹಕಾರಿ ನಿರಂತರ ಪ್ರಯತ್ನಗಳನ್ನು ಮಾಡುತ್ತಲಿದೆ. ಸೌಹಾರ್ದ ಸಹಕಾರಿ ಈ ದೇಶದಲ್ಲಿ ಒಂದು ಮಾದರಿ ಕಾಯ್ದೆಯಾಗಿ ಕೇಂದ್ರದ 97 ಸಂವಿಧಾನ ತಿದ್ದುಪಡಿಯಲ್ಲಿ ಯೂ ಸಹ ಸೌಹಾರ್ದ ಸಹಕಾರಿ ಪ್ರಾರಂಭದಲ್ಲಿಯೆ ಅಳವಡಿಸಿಕೊಂಡಿರುವ ಹಲವಾರು ಮಹತ್ವ ಅಂಶಗಳನ್ನು ಅಳವಡಿಸಿದೆ.

ಈ ದಿನಾಚರಣೆಯೆಂದು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟವನ್ನು ಉತ್ತಮ ಪಡಿಸುವ ಬಗ್ಗೆ ಪ್ರತಿಜ್ಞೆಯನ್ನು ಮಾಡೋಣ. ಸೌಹಾರ್ದ ಸಹಕಾರಿಗಳ ಎಲ್ಲ ಕಾರ್ಯಚಟುವಟಿಕೆಗಳಲ್ಲಿ ಆಡಳಿತ ಮಂಡಳಿಯವರಷ್ಟೆ ಜವಾಬ್ದಾರಿ ಸಿಬ್ಬಂದಿಯವರಿಗೂ ಇದೆ. ಸಿಬ್ಬಂದಿಯವರೂ ಸಹ ಉತ್ತರದಾಯಿತ್ವದಲ್ಲಿ ಪಾಲುದಾರರು ಹೀಗಾಗಿ ಎಲ್ಲರೂ ಸೇರಿ ಒಟ್ಟಾಗಿ ಕ್ರೀಯಾಶೀಲರಾಗಿ ಕಾರ್ಯನಿರ್ವಹಿಸೋಣ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರಿಂದ ಧ್ವಜಾರೋಹಣದ ನಂತರ ಎಲ್ಲ ಸಿಬ್ಬಂದಿಯವರು ಸಾಮೂಹಿಕವಾಗಿ ಸಹಕಾರ ಗೀತೆಯನ್ನು ಹೇಳಿದರು. ಬೆಂಗಳೂರು ಪ್ರಾಂತೀಯ ಅಧಿಕಾರಿ ಶ್ರೀ ನಾರಾಯಣ ಹೆಗಡೆಯವರು ವಂದನಾರ್ಪಣೆ ಸಲ್ಲಿಸಿದರು.

# ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ ಭಾಷಣ ಹಾಗೂ ಪ್ರಬಂಧ ಕಾರ್ಯಕ್ರಮ

## ಸೌಹಾರ್ದ ಸಹಕಾರ ಚಳುವಳಿ, ಸಂಯುಕ್ತ ಸಹಕಾರಿ ಗುಣಮಟ್ಟದ ಬಗ್ಗೆ ಸಹಕಾರಿಗಳಿಂದ ಹಾಗೂ ಸರಕಾರದಿಂದ ವಿಶ್ವಾಸಾರ್ಹತೆ ಸರ್ಟಿಫಿಕೇಟ್ ಪಡೆಯುವಂತಿರಬೇಕು – ಬಿ.ಹೆಚ್. ಕೃಷ್ಣಾರೆಡ್ಡಿ

ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ ಭಾಷಣ ಹಾಗೂ ಪ್ರಬಂಧ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕೇಂದ್ರ ಕಛೇರಿಯಲ್ಲಿ ನಡೆದ ಭಾಷಣ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀಯುತರು ಇದೊಂದು ಉತ್ತಮ ಕಾರ್ಯಕ್ರಮ. ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಯೋಜನೆಯ ಬಗ್ಗೆ ಆತ್ಮಾವಲೋಕನ ಮಾಡಿಕೊಂಡು ಮುಂಬರುವ ದಿನಗಳಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಳ್ಳುವಂತಹ ಕಾರ್ಯಕ್ರಮ ಇದಾಗಿದೆ ಎಂದು ನಾನು ಭಾವಿಸಿದ್ದೆನೆ. ಎಲ್ಲರೂ ಚೆನ್ನಾಗಿ ಮಾತನಾಡಲು ಪ್ರಯತ್ನಿಸಿದ್ದಿರಿ. ವಿಷಯಗಳ ಗ್ರಹಿಕೆಗೆ ಇನ್ನು ಹೆಚ್ಚಿನ ಒತ್ತು ನೀಡಬೇಕು. ಈ ಸೌಹಾರ್ದ ಸಹಕಾರಿ ಚಳುವಳಿಗೆ ಹಾಗು ಸಂಯುಕ್ತ ಸಹಕಾರಿ ಕಾರ್ಯ ಚಟುವಟಿಕೆಗಳಿಗೆ ಸೇವೆಯನ್ನು ಉಪಯೋಗಿಸಿಕೊಳ್ಳುವ ಸದಸ್ಯರು, ಸಾರ್ವಜನಿಕರು ಹಾಗು ಸರಕಾರಗಳು ತಮ್ಮ ವಿಶ್ವಾಸಾರ್ಹತೆಯನ್ನು ಸೂಚಿಸುವುದರ ಮೂಲಕ ನಾವು ಸರ್ಟಿಫಿಕೇಟ್ ಪಡೆದುಕೊಂಡಾಗ ನಮ್ಮ ಸೇವೆ ಸಾರ್ಥಕವಾಗುತ್ತದೆ ಎಂದು ತಿಳಿಸಿದರು. ಈ ರೀತಿಯ ಕಾರ್ಯಕ್ರಮಗಳು ಅಗತ್ಯ ಎಂದು ತಿಳಿಸಿದರು.

**ಭಾಷಣದ ವಿಷಯ :** "ಸಹಕಾರಿಗಳ ನಡೆ ಗುಣಮಟ್ಟದ ಕಡೆ ಹಾಗೂ

ಸಂಯುಕ್ತ ಸಹಕಾರಿಯ ಕಾರ್ಯಯೋಜನೆ "ಕಾರ್ಯಕ್ರಮದಲ್ಲಿ ಎಲ್ಲ ಸಿಬ್ಬಂದಿಯವರು ಭಾಗವಹಿಸಿ ಮಾತನಾಡಿದರು.

ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಆರ್ ಶೋಭಾ ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದರು. ಹಿರಿಯ ಅಧಿಕಾರಿ ಶ್ರೀ ಪಾಲರಾಜರವರು ಕಾರ್ಯಕ್ರಮ ನಿರೂಪಣೆ ಮಾಡಿದರು. ಭಾಷಣ ಸ್ಪರ್ಧೆಯಲ್ಲಿ ಶ್ರೀ ಹೆಚ್.ಜಿ.ಸಂತೋಷರವರಿಗೆ ಪ್ರಥಮ ಬಹುಮಾನ ಲಭಿಸಿತು. ಎರಡನೇ ಬಹುಮಾನವನ್ನು ಶ್ರೀಮತಿ ಅನಿತಾ ಹಾಗೂ ಶ್ರೀ ನವೀನರವರು ಹಂಚಿಕೊಂಡರು ತೃತಿಯ ಬಹುಮಾನವನ್ನು ಶ್ರೀ ಗುರುನಾಥ ಕುಸೂರುರವರು ಪಡೆದರು.



ಪ್ರಥಮ ಬಹುಮಾನ



ದ್ವಿತಿಯ ಬಹುಮಾನ



ತೃತೀಯ ಬಹುಮಾನ




**ಮೈಸೂರು :** ಮೈಸೂರು ಪ್ರಾಂತೀಯ ಕಚೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್. ವಿ ರಾಜೀವ್ ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ನಿರ್ದೇಶರು ಮತ್ತು ಸಹಕಾರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಪ್ರಾಂತದ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಭಾಷಣ ಸ್ಪರ್ಧೆಯಲ್ಲಿ ಶ್ರೀ ಶಿವಕುಮಾರ ಎ ಪ್ರಥಮ ಬಹುಮಾನ ಲಭಿಸಿತು. ಎರಡನೇ ಬಹುಮಾನವನ್ನು ಶ್ರೀ ಶಂಕರ ಎಸ್ ಹಾಗೂ ಶ್ರೀಮತಿ ರೇಣುಕಾ ಎಮ್.ವಿ ಇವರು ಪಡೆದರು. ತೃತಿಯ ಬಹುಮಾನವನ್ನು ಶ್ರೀ ಚಂದ್ರಶೇಖರ್ ಎನ್ ರವರು ಪಡೆದರು.



ಪ್ರಥಮ ಬಹುಮಾನ



ದ್ವಿತಿಯ ಬಹುಮಾನ



ದ್ವಿತಿಯ ಬಹುಮಾನ



ತೃತೀಯ ಬಹುಮಾನ



**ಕಲಬುರಗಿ :** ಕಲಬುರಗಿ ಪ್ರಾಂತೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಮತ್ತು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ನೆರವೇರಿಸಿದರು. ಪ್ರಾಂತೀಯ ವ್ಯವಸ್ಥಾಪಕರು ಹಾಗೂ ಪ್ರಾಂತದ ಸಿಬ್ಬಂದಿಗಳು ಮತ್ತು ಕಲಬುರ್ಗಿ ಜಿಲ್ಲೆಯ 40 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಭಾಷಣ ಸ್ಪರ್ಧೆಯಲ್ಲಿ ಶ್ರೀ ವೀರಶೆಟ್ಟಿ ಕೆ. ಪ್ರಥಮ ಬಹುಮಾನ ಲಭಿಸಿತು. ಎರಡನೇ ಬಹುಮಾನವನ್ನು ಶ್ರೀ ರವಿ ಕುಮಾರ್ ಇವರಿಗೆ ಲಭಿಸಿತು. ತೃತೀಯ ಬಹುಮಾನವನ್ನು ಶ್ರೀ ಓಂಕರ್ ಹಾಗೂ ಶ್ರೀ ಆನಂದ ರಾಯ್ ರವರು ಪಡೆದರು.




ಪ್ರಥಮ ಬಹುಮಾನ



ದ್ವಿತೀಯ ಬಹುಮಾನ



ತೃತೀಯ ಬಹುಮಾನ



ತೃತೀಯ ಬಹುಮಾನ



**ಬೆಳಗಾವಿ :** ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಪ್ರಾಂತದ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಭಾಷಣ ಸ್ಪರ್ಧೆಯಲ್ಲಿ ಶ್ರೀ ಬಸವರಾಜ ಹೊಂಗಲ ಪ್ರಥಮ ಬಹುಮಾನ ಲಭಿಸಿತು. ಎರಡನೇ ಬಹುಮಾನವನ್ನು ಶ್ರೀ ವೃಷಭನಾಥ ಪರಪ್ಪನವರ ಇವರಿಗೆ ಲಭಿಸಿತು. ತೃತಿಯ ಬಹುಮಾನವನ್ನು ಶ್ರೀ ರಾಕೇಶ ಹೆಚ್ ರವರು ಪಡೆದರು.

## ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದಲ್ಲಿ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ



**ಬೀದರ :** ದಿನಾಂಕ 01.01.2021 ರಂದು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ 2021ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ ಜರುಗಿತ್ತು. ಸಹಕಾರಿಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ ನೇರವೆರಿಸಿದರು. ರಾಷ್ಟ್ರದಲ್ಲಿ ಯಾವುದಾದರು ವಿಷಯದ ಮೇಲೆ ಎರಡು ಶಾಸನಗಳು ಜಾರಿಯಲ್ಲಿದ್ದರೆ ಅದು ಕೇವಲ ಸಹಕಾರಿ ಕ್ಷೇತ್ರದಲ್ಲಿ ಮಾತ್ರ ಎಂದು ನುಡಿದರು. ಸಹಕಾರ ಕಾಯ್ದೆಯು ಸ್ವತಂತ್ರ ಪೂರ್ವದಲ್ಲಿ 1904 ಬ್ರಿಟಿಷರು ಜಾರಿಗೆ ತಂದರುಕೂಡಾ ಅದು ಸಂಪೂರ್ಣ ಯಶಸ್ವಿಯಾಗಲ್ಲಿ ಈ ಹಿನ್ನಲೆಯಲ್ಲಿ ಸ್ವತಂತ್ರ ನಂತರ ಕೇಂದ್ರ ಸರ್ಕಾರವು ಸಹಕಾರಿ ಕ್ಷೇತ್ರದ ಬೆಳವಣಿಗೆ ಕುಂಠಿತಕ್ಕೆ ಕಾರಣ ಕಂಡುಹಿಡಿದು ಅತಿಯಾದ ಸರ್ಕಾರದ ಅಧಿಕಾರಿಗಳ ಮತ್ತು ರಾಜ–ಕಾರಣಿಗಳ ಹಸ್ತಕ್ಷೇಪದಿಂದ ಮುಕ್ತವಾದಗ ಮಾತ್ರ ಸಹಕಾರಿ ಬೇಳವಣಿಗೆ ಸಾಧ್ಯವೆಂದು ತಿಳಿದು ಎಲ್ಲಾ ರಾಜ್ಯ ಸರ್ಕಾರಗಳಿಗೆ ಸ್ವಾಯುತ ಕಾಯ್ದೆಯನ್ನು ಜಾರಿಗೊಳಿಸಿದರು. ಅದರ ಫಲವಾಗಿ ಇಂದು ಸೌಹಾರ್ದ ಸಹಕಾರಿ ಚಳುವಳಿ ಉದಯವಾಗಿ ಕಾಯ್ದೆ ರೂಪದಲ್ಲಿ ಜಾರಿಗೆ ಬಂದ ದಿನವಾಗಿದೆ ಎಂದು ನುಡಿದರು.

ಪ್ರಾಸ್ತವಿಕವಾಗಿ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರು ಮಾತನಾಡಿ ಬೀದರ ಜಿಲ್ಲೆ ಸಹಕಾರಿಗಳ ತವರೂರು ದಿನೆ ದಿನೆ ಉತ್ತಮ ಸಹಕಾರಿಗಳು ನೋಂದಣಿಗೊಂಡು ಕಾರ್ಯನಿರ್ವಹಿಸುತ್ತಿವೆ ಅವುಗಳಿಗೆ ಬೆನ್ನೆಲುಬಾಗಿ ಜಿಲ್ಲಾ ಒಕ್ಕೂಟ ಕಾರ್ಯನಿರ್ವಹಿಸುತ್ತಿದೆ. ಸದರಿ ಸಾಲಿನಲ್ಲಿ ಕೋವಿಡ್ ಹಿನ್ನಲೆಯಲ್ಲಿ ಬೃಹತ ಪ್ರಮಾಣದ ಕಾರ್ಯಕ್ರಮ ಆಯೋಜಿಸದೆ ಸರಳ ರೀತಿ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿದೆ ಪ್ರತಿ ವರ್ಷವು ಉತ್ತಮ ಸಹಕಾರಿ ಪ್ರಶಸ್ತಿ ನೀಡಲಾಗುತ್ತಿದೆ ಇದನ್ನು ಮುಂದಿನ ದಿನಗಳಲ್ಲಿ ಕಾರ್ಯಕ್ರಮ ಆಯೋಜಿಸಿ ನೀಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಒಕ್ಕೂಟದ ನಿರ್ದೇಶಕರಾದ ಶ್ರೀ ಕ್ರಾಂತಿಕುಮಾರ ಕುಲಾಲ್, ಹಿರಿಯ ಸಹಕಾರಿಗಳಾದ ಮಾಣಿಕಪ್ಪ ಗೋರನಾಳೆ, ಆನಂದ ಶಿವಯೋಗಿ, ಮಹಮ್ಮದ್ ಸೈಫ್, ಶ್ರೀರಂಗ ಕುಲಕರ್ಣಿ, ರಾಜಕುಮಾರ ಚಟ್ಟನ್ನಳಿ, ಸುನೀಲಕುಮಾರ ಗೌಳಿ, ಶಿವರಾಜ ಹೂಗಾರ, ಗಂಡೆರಾವ ಶಿವದೆ, ಸಂಗಶೆಟ್ಟಿ ಅಮೃತ ಹೋಸಮನಿ ಜಿಲ್ಲಾ ಸಂಯೋಜಕರಾದ ಶ್ರೀ ವೀರಶೆಟ್ಟಿ ಕಾಮಣ್ಣಾ ಉಪಸ್ಥಿತರಿದ್ದರು.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

## ಜನವರಿ 2021

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 31 | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

## ಫೆಬ್ರವರಿ 2021

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | | | | | | |

## ಮಾರ್ಚ್ 2021

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

## ಏಪ್ರಿಲ್ 2021

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | |

## ಮೇ 2021

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

## ಜೂನ್ 2021

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | | | |

## ಜುಲೈ 2021

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

## ಆಗಸ್ಟ್ 2021

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 246. | ಶ್ರೀ ಮಂಗಲಮೂರ್ತಿ ಗಣಪತಿ ಸಭಾಹಿತ | ಬಿ.ಎ, ಎಲ್, ಎಲ್ ಬಿ | ಸೆಂಟ್ ಮಿಲಾಗ್ರಿಸ್ ಬ್ಯಾಂಕಿನ ಹತ್ತಿರ, ತಾ: ಕುಮಟಾ ಜಿಲ್ಲಾ: ಉತ್ತರಕನ್ನಡ-581343. |
| 247. | ಶ್ರೀ ಈಶ್ವರ ಮಾಬ್ಲ ನಾಯ್ಕ | ಎಂ.ಎ ಎಲ್,ಎಲ್,ಬಿ | ನೇಸಾರ ಬಿಲ್ಡಿಂಗ್ ನಾರಾಯಣ ಗುರುನಗರ.ಚಿಪಗಿ. ಶಿರಸಿ ತಾ:ಶಿರಸಿ ಜಿ:ಉತ್ತರ ಕನ್ನಡ-581402. |
| 248. | ಶ್ರೀ ವೆಂಕಟೇಶ ವಿಠ್ಠಲ ಸರಳಾಯ | ಬಿ.ಕಾಂ, ಎಲ್, ಎಲ್ ಬಿ | ವಿಠ್ಠಲ ಸದನ, ಸೇನಾನಗರ ಫೇಸ ನಂ.3, ಆಲ್ ಅಮೀನ್ ಮೆಡಿಕಲ್ ಕಾಲೇಜ ಎದುರಿಗೆ, ವಿಜಯಪುರ-09. |
| 249. | ಶ್ರೀ ಇಬ್ರಾಹಿಮಸಾ ಕಾಶಿಮಸಾ ಸಾಸನೂರ | ಬಿ.ಎ, ಎಲ್, ಎಲ್ ಬಿ | ಮಹಾಂತೇಶ ನಗರ, ಮುದ್ದೇಬಿಹಾಳ,ಗಡಿಸೋಮನಾಳ, ತಾಳಿಕೋಟ, ವಿಜಯಪುರ. |
| 250. | ಶ್ರೀ ವೆಂಕಟೇಶ ಗೋವಿಂದ ಕುಲಕರ್ಣಿ | ಬಿ.ಕಾಂ, ಎಲ್, ಎಲ್ ಬಿ | ಅಯೋಧ್ಯಾ ನಗರ, ಗೊಡಬೋಲೆ ಮಾಳಾ, ವಿಜಯಪುರ-581101. |
| 251. | ಶ್ರೀ ಮಧುಕೇಶ್ವರ ಹೊನ್ನಪ್ಪ ನಾಯ್ಕ | ಬಿ.ಕಾಂ, ಎಲ್, ಎಲ್ ಬಿ | ಗಣೇಶ ನಗರ, ಪೊ: ಪುಟ್ಟನಮನೆ, ತಾ: ಶಿರಸಿ (ಉ.ಕ)-581402. |
| 252. | ಶ್ರೀ ಶಾಂತಾರಾಮ ನಾಯ್ಕ | ಎಂ.ಎ ಬಿ.ಎಡ್, | ಟೀಚರ್ ಕಾಲೋನಿ, ನಂದನಗದ್ದಾ, ಕಾರವಾರ ತಾ: ಉತ್ತರಕನ್ನಡ-581304. |
| 253. | ಶ್ರೀ ರಾಜೇಶ್ವರಿ ಕೃಷ್ಣಮೂರ್ತಿ ಬಿ | ಎಂ,ಎಸ್,ಸಿ ಬಿ.ಎಡ್, ಎಲ್, ಎಲ್ ಬಿ | 647/ಎ, ಕೆಂಚಾ ರಸ್ತೆ, ಕಾರವಾರ ಜಿ:ಉತ್ತರಕನ್ನಡ |
| 254. | ಶ್ರೀಮತಿ ಜ್ಯೋತಿ ನಾ ಪಾಟೀಲ | ಬಿ.ಎಸ್.ಸಿ, ಎಲ್, ಎಲ್.ಬಿ | ವಿವೇಕಾನಂದ ನಗರ, 3ನೇ ಕ್ರಾಸ್, #55, ಶಿರಸಿ, (ಉ.ಕ) 581402. |
| 255. | ಶ್ರೀ ಬಿ. ಜಯಂತಿ ಕೃಷ್ಣಮೂರ್ತಿ | ಬಿ.ಎ, ಎಲ್, ಎಲ್ ಬಿ | ಮಹಿಮಂಗಲಂ ಕಾಂಪ್ಲೆಕ್ಸ್, ಸಾಯಿ ಮಂದಿರ ರಸ್ತೆ, ದೋಬಿಘಾಟ್, ಕಾರವಾರ. ಉ.ಕ. |
| 256. | ಶ್ರೀ ಪ್ರಶಾಂತ ಈರಾ ನಾಯ್ಕ | ಬಿ.ಎ, ಎಲ್, ಎಲ್ ಬಿ | ನ್ಯೂ ಕೆ ಎಚ್.ಬಿ ಕಾಲೋನಿ,ಹಬ್ಬುವಾಡಾ, ಕಾರವಾರ ಜಿಲ್ಲೆ.ಉತರಕನ್ನಡ-581373 |
| 257. | ಶ್ರೀ ಶ್ರೀನಿವಾಸ ಜೆ ನಾಯ್ಕ | ಬಿ.ಎ, ಎಲ್, ಎಲ್ ಬಿ | ಪೈ ಬಿಲ್ಡಿಂಗ, ಕೋರ್ಟ ಹತ್ತಿರ, ತಾ: ಕುಮಟಾ ಜಿಲ್ಲಾ:ಉತ್ತರಕನ್ನಡ-581343. |

21

| | | | |
|---|---|---|---|
| 258. | ಶ್ರೀ ಗಣಪತಿ ಈರಾ ನಾಯ್ಕ | ಬಿ.ಕಾಂ, ಎಲ್, ಎಲ್ ಬಿ | ಲಕ್ಷೀ ನಿವಾಸ, ಕೋರ್ಟ ರೋಡ್ ,ಶಿರಸಿ ಜಿ:ಉತ್ತರಕನ್ನಡ-581401 |
| 259. | ಶ್ರೀ ಗಜಾನನ ವಿಜಯಕುಮಾರ ನಾಯ್ಕ | ಬಿ.ಎ, ಎಲ್, ಎಲ್ ಬಿ | ತೇಲಂಗ ರಸ್ತೆ, ಚೌಡೇಶ್ವರಿ ದೇವಸ್ಥಾನ ಹತ್ತಿರ,ನಂದನಗದ್ದಾ, ಕಾರವಾರ ಜಿಲ್ಲೆ: ಉತ್ತರ ಕನ್ನಡ-581343. |
| 260. | ಶ್ರೀ ಗಂಗಪ್ಪ ಬಸವಣೆಪ್ಪ ಈರಪ್ಪಗೋಳ | ಬಿ.ಎ, ಬಿ.ಎಡ್, ಎಲ್, ಎಲ್ ಬಿ | ಮು/ಪೋ ಹೀರೆಮೇಳ ತಾ: ಬೈಲಹೊಂಗಲ ಜಿ: ಬೆಳಗಾವಿ.-591102. |
| 261. | ಶ್ರೀ ಶ್ರೀನಿವಾಸ ರಾಮು ಹರಕೆ | ಬಿ.ಎ, ಎಲ್, ಎಲ್ ಬಿ | ಬಸವನಾಳಗಡ್ಡೆ, ಪೋಸ್ಟ್ , ಹಿರೇಕೊಡಿ, ತಾ. ಚಿಕ್ಕೊಡಿ, ಬೆಳಗಾವಿ-591247. |
| 262. | ಶ್ರೀ ಸುಧಾಕರ ಕಾಳಪ್ಪ ಪತ್ತಾರ | ಎಂ.ಕಾ, ಎಲ್.ಎಲ್.ಬಿ | ಮನೆ ನಂ. 1083, ಕುರುಬರ ಗಲ್ಲಿ, ಬೈಲಹೊಂಗಲ 591102. |
| 263. | ಶ್ರೀ ಸಿದಗೌಡ ಯಲಗೌಡ ಪಾಟೀಲ | ಬಿ.ಎ, ಎಲ್, ಎಲ್ ಬಿ | ಸಾ: ಜೋಡಕುರಳಿ ತಾ: ಚಿಕ್ಕೋಡಿ ಜಿ: ಬೆಳಗಾವಿ-591213. |
| 264. | ಶ್ರೀ ಮಹಾಂತೇಶ ಬಸವಣ್ಣೆಪ್ಪಾ ಇಂಚಲ | ಬಿ.ಎ, ಎಲ್, ಎಲ್ ಬಿ | ಮನೆ ನಂ. 126, ಭಾವಿಹಾಳ ಗ್ರಾಮ, ತಾ: ಬೈಲಹೊಂಗಲ ಜಿ: ಬೆಳಗಾವಿ-591102. |
| 265. | ಶ್ರೀ ಈರಪ್ಪಾ ಮಾರುತಿ ಅನಿಗೋಳ | ಬಿ.ಕಾಂ, ಎಲ್, ಎಲ್ ಬಿ | ಮಳೆಪ್ಪನವರ ಚಾಳ, ಬೈಲಹೊಂಗಲ ತಾ: ಬೈಲಹೊಂಗಲ ಜಿ: ಬೆಳಗಾವಿ - 591102. |
| 266. | ಶ್ರೀ ಬಸವಂತ ಶಿವಪ್ಪ ಗಳಂಗಳ | ಬಿ.ಎಸ್.ಸಿ, ಎಲ್, ಎಲ್.ಬಿ | ಮನೆ ನಂ. ಸಿ.ಸಿ.ಬಿ76, 3ನೇ ಅಡ್ಡ ರಸ್ತೆ, ಮಹಾದ್ವಾರ ರೋಡ, ಬೆಳಗಾವಿ-590001. |
| 267. | ಶ್ರೀ ಸಿದ್ದಪ್ಪ ಹೊನ್ನಪ್ಪ ಜಮಾದಾರ | ಬಿ.ಎ, ಎಲ್, ಎಲ್ ಬಿ | ಕ/ಆಫ್ ಜಿ.ಆಯ್ ಪಂಚನ್ನವರ, ಕಿಲ್ಲಾ ರಾಮದುರ್ಗ, ತಾ: ರಾಮದುರ್ಗ ಜಿ: ಬೆಳಗಾವಿ-591123. |
| 268. | ಶ್ರೀ ಮಹಾಂತೇಶ ಗುರುಬಸಪ್ಪಾ ಕುಲ್ಲೋಳ್ಳಿ | ಬಿ.ಎಸ್.ಸಿ, ಎಲ್, ಎಲ್.ಬಿ | ಚೇಂಬರ ನಂ: 20, ನ್ಯಾಯವಾದಿಗಳ ಸಂಕೀರ್ಣ, ನ್ಯಾಯಾಲಯ ಆವರಣ, ಬೆಳಗಾವಿ |
| 269. | ಶ್ರೀ ರಮೇಶ ಬಸವಂತಪ್ಪ ಘೂಳಿ | ಬಿ.ಎ, ಎಲ್, ಎಲ್ ಬಿ | ಎಲ್.ಐ.ಜಿ.-202, ಮಹಾಂತೇಶ ನಗರ, ಬೆಳಗಾವಿ-590017. |
| 270. | ಶ್ರೀ ಬಸಪ್ಪಾ ರಾಮಪ್ಪ ಕಮತೆ | ಬಿ.ಎ, ಎಲ್, ಎಲ್ ಬಿ | ಟಿ.ಎಮ್.ಸಿ ನಂಬರ್2528. ಕೆ.ಸಿ ರೋಡ್, ಚಿಕ್ಕೋಡಿ, ಬೆಳಗಾವಿ-591201. |

22

| | | | |
|---|---|---|---|
| 271. | ಶ್ರೀ ಸುನೀಲ ತುಕಾರಾಮ ಬವಳೆ | ಬಿ.ಎ, ಎಲ್, ಎಲ್ ಬಿ | ಪ್ರಭುವಾಡಿ ಚಿಕ್ಕೋಡಿ ತಾ: ಚಿಕ್ಕೋಡಿ ಜಿ: ಬೆಳಗಾವಿ-591201. |
| 272. | ಶ್ರೀ ಪ್ರವೀಣ ದ ಸೋಮಣ್ಣವರ | ಬಿ.ಎ, ಎಲ್, ಎಲ್ ಬಿ | ತ್ರಿದಲ' ಪ್ಲಾಟ್ ನಂ. 27, ಸೆಕ್ಟರ್ ನಂ. 09, ಆಂಜನೇಯ ನಗರ, ಬೆಳಗಾವಿ-590016. |
| 273. | ಶ್ರೀ ಶ್ರೀಕಾಂತ ಚೆನಪ್ಪಾ ಬೋರಕನವರ | ಬಿ.ಎ, ಎಲ್, ಎಲ್ ಬಿ | 3ನೇ ಅಡ್ಡರಸ್ತೆ. ರಾಣಿಚನ್ನಮ್ಮ ನಗರ, ಬೈಲಹೊಂಗಲ.ಬೆಳಗಾವಿ. |
| 274. | ಶ್ರೀ ಸಂತೋಷ ಸಿದ್ದಯ್ಯ ಪೂಜಾರಿ | ಬಿ.ಎ, ಎಲ್, ಎಲ್ ಬಿ | ಸಂಗಮೇಶ್ವರ ಬಿಲ್ಡಿಂಗ್, ಸಿವಿಲ್ ನ್ಯಾಯಾಲಯದ ಎದುರುಗಡೆ, ಗೋಕಾಕ-591307. |
| 275. | ಶ್ರೀ ಈರಪ್ಪ ಬಸಪ್ಪ ಸಿದ್ದಣ್ಣವರ | ಬಿ.ಎಸ್.ಸಿ, ಎಲ್, ಎಲ್.ಬಿ | ಮು/ಪೊ: ಬೆಳವಡಿ ತಾ: ಬೈಲಹೊಂಗಲ ಜಿ: ಬೆಳಗಾವಿ-591104. |
| 276. | ಶ್ರೀ ವಿಠ್ಠಲ ರಾಮಪ್ಪ ಮುನ್ನೋಳ್ಳಿ | ಬಿ.ಎ, ಎಲ್, ಎಲ್ ಬಿ | ಸಾ: ಪರಕನಗಟ್ಟಿ ತಾ: ಹುಕ್ಕೇರಿ.ಬೆಳಗಾವಿ-591107 |
| 277. | ಶ್ರೀ ಇಮಾಮಸಾಬ ಮ ಗುಡುಮ್ಮನವರ | ಬಿ.ಎ, ಎಲ್, ಎಲ್ ಬಿ | ಪಟ್ಟಿಹಾಳ (ಕೆ.ಬಿ), ತಾ: ಬೈಲಹೊಂಗಲ ಜಿ: ಬೆಳಗಾವಿ-591104 |
| 278. | ಶ್ರೀಮತಿ ಸುಜಾತಾ ರುದ್ರನಾಯ್ಕರ | ಬಿ.ಎ, ಎಲ್, ಎಲ್ ಬಿ | 4370/ಎ1, ಕೋರ್ಟ ಕಂಪೌಂಡ ಹತ್ತಿರ, ಚವ್ಹಾಟ ಗಲ್ಲಿ, ಬೆಳಗಾವಿ-590001. |
| 279. | ಶ್ರೀ ಸಂದೀಪ ದತ್ತಾತ್ರೇಯ ಕಿಲ್ಲೇಕರ | ಬಿ.ಎಸ್.ಸಿ, ಎಲ್, ಎಲ್.ಬಿ | ಮನೆ ವಿಳಾಸ ಸಿ.ಸಿ.ಬಿ.ನಂ. 1015, ಶಾಹುನಗರ, ಬೆಳಗಾವಿ ತಾ/ಜಿ: ಬೆಳಗಾವಿ. |
| 280. | ಶ್ರೀ ಮಹಂತೇಶ ಬಿ. ಪಾಟೀಲ | ಬಿ.ಎ, ಎಲ್, ಎಲ್ ಬಿ | 1263, ರಾಮತೀರ್ಥ ನಗರ, ಬೆಳಗಾವಿ. |
| 281. | ಶ್ರೀ ರಝಿಯಾ ಮೈನೊದ್ದಿನ ಮಾಡಿವಾಲೆ | ಬಿ.ಎ, ಎಲ್, ಎಲ್ ಬಿ | ಮನೆ ನಂ. 3935/29, ಕ್ಲಬ್ ರೋಡ, ಬೆಳಗಾವಿ. |
| 282. | ಶ್ರೀ ಪ್ರವೀಣ ಆರ್ ಜೋಶಿ | ಎಂ.ಎ, ಎಲ್.ಎಲ್.ಬಿ | ಸಾ: ಕಲ್ಲೋಳ ತಾ: ಚಿಕ್ಕೋಡಿ. ಬೆಳಗಾವಿ ಪಿನ್: 591244. |
| 283. | ಶ್ರೀ ಗಂಗಾಧರ ರಾಮಗೌಡ ಪಾಟೀಲ | ಬಿ.ಕಾಂ, ಎಲ್, ಎಲ್ ಬಿ | ಮು/ಪೋ ಸಂಕೇಶ್ವರ ತಾ: ಹುಕ್ಕೇರಿ ಜಿ: ಬೆಳಗಾವಿ-591313. |
| 284. | ಶ್ರೀ ವೀರೇಶಕುಮಾರ ಮನೆದ | ಬಿ.ಕಾಂ, ಎಲ್, ಎಲ್ ಬಿ | ತಹಶಿಲ್ದಾರ ಗಲ್ಲಿ, ಬೆಳಗಾವಿ -590001. |
| 285. | ಶ್ರೀ ಶೇಷು ಬೀರಾ ಆಗೇರ | ಬಿ.ಎ, | ಅವರ್ಸಾ, ತಾ: ಅಂಕೋಲಾ ಜಿಲ್ಲೆ: ಉತ್ತರಕನ್ನಡ-581314. |

23

| | | | |
|---|---|---|---|
| 286. | ಶ್ರೀ ಶಂಕರ ಘೋಳಪ್ಪಾ [illegible] | ಬಿ.ಎ, ಜಿ.ಡಿ.ಸಿ | ಪ್ಲಾಟ್ ನಂ: 1074, ರಾಮತೀರ್ಥನಗರ, ಬೆಳಗಾವಿ-590016. |
| 287. | ಶ್ರೀ ರಾವಜಿ ವಸಂತರಾವ ಕುಲಕರ್ಣಿ | ಬಿ.ಎ, ಹೆಚ್.ಡಿ.ಸಿ | 2400 ಗಜಂತಲಕ್ಷ್ಮೀ ಅಪಾರ್ಟಮೆಂಟ್, ಕಛೇರಿಗಲ್ಲಿ, ಶಹಾಪೂರ ಬೆಳಗಾವಿ-590003. |
| 288. | ಚನ್ನಬಸವ ಅಶೋಕ ಇಂಚಗೇರಿ | ಬಿ.ಕಾಂ, ಎಲ್. ಎಲ್ ಬಿ | ವಿಜಯ ಹೌಸಿಂಗ್ ಕಾಲೋನಿ, ಪಿ.ಎಲ್.ಡಿ ರೋಡ್, ವಿಜಯಪುರ-586104. |

ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು.

# ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳು




**ಮಡಿಕೇರಿ :** ಕೊಡಗು ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿಮಿಟೆಡ್ ಇದರ 16ನೇ ವಾರ್ಷಿಕ ಮಹಾಸಭೆಯನ್ನು ಕೊಡವ ಸಮಾಜ ಮಡಿಕೇರಿ ಇದರ ಸಭಾಂಗಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಂಡುವಂಡ ಪಿ. ಮುತ್ತಪ್ಪ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.




**ಉಡುಪಿ :** ಜನರಹಿತ ಸೌಹಾರ್ದ ಸಹಕಾರಿ ನಿ., ಉಡುಪಿ ಇದರ 13ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 12.12.2020 ರಂದು ಉಡುಪಿ ಕೋರ್ಟ್ ರಸ್ತೆಯಲ್ಲಿರುವ ನೈವೇದ್ಯ ಹೋಟೇಲಿನ ಅನುಗ್ರಹ ಸಭಾಂಗಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಗೋಪಾಲ್ ಇವರು ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಕೃಷ್ಣ ಎಮ್ ಸಾಲಿಯಾನ್, ನಿರ್ದೇಶಕರಾದ ವೈ.ಎಸ್. ಮಡಿವಾಳ್, ಕೃಷ್ಣ ಯು.ವಿ. ಗೋಪಾಲ್ ಸಿ. ಮೂಲ್ಯ. ಉಪೇಂದ್ರ ನಾಯಕ್, ಸದಾನಂದ ಪ್ರಭು, ವಿಜಯ ಶೆಟ್ಟಿ, ವಸಂತ್ ನಾಯ್ಕ್, ಮಂಜುನಾಥ್ ನಾಯ್ಕ್, ಟಿ. ಶಶಿಧರನ್, ಶ್ರೀಮತಿ ಉಮಾ ಭಟ್ ಹಾಗೂ ಡಾ. ಅನುರೂಪ ಉಡುಪಿ ಉಪಸ್ಥಿತರಿದ್ದರು. ಪೇತ್ರಿ ಶಾಖಾ ವ್ಯವಸ್ಥಾಪಕರಾದ ಶಶಿಕಿರಣ್ ಸ್ವಾಗತಿಸಿ, ಮುಖ್ಯ ಕಾರ್ಯನಿರ್ವಾಹಣಾಧಿಕಾ–ರಿಯವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

**ಮಾಲೂರು :** ದಿನಾಂಕ: 22.12.2020ರಂದು ಶ್ರೀ ವಾಸವಿ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಮಾಲೂರು ಇದರ ಸಾಮಾನ್ಯ ಸಭೆಯು ಸಹಕಾರಿ ಕಛೇರಿಯಲ್ಲಿ ನಡೆಯಿತು.




**ಬೆಳಗಾವಿ:** ಶ್ರೀ ಕೃಷ್ಣಾ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಸಂಕೇಶ್ವರ ಸಹಕಾರಿಯ 9ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 28.11.2020 ರಂದು ಸಹಕಾರಿಯ ಕಛೇರಿ ಆವರಣದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕೋವೀಡ್–19 ಮಹಾಮಾರಿ ನಿಯಮಗಳ ಅನುಸಾರ ಅತ್ಯಂತ ಸರಳ ಹಾಗೂ ಸಭೆಯ ಕೋರಂ ನಿಗದಿಗೆ ಒಳ ಪಟ್ಟು ಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಕುಮಾರ ಅಪ್ಪಾಸಾಹೇಬ ಬಸ್ತವಾಡಿ ಇವರ ಘನ ಅಧ್ಯಕ್ಷತೆ ಹಾಗೂ ಆಡಳಿತ ಮಂಡಳಿ ಸದಸ್ಯರು ಹಾಗೂ ಸಹಕಾರಿಯ ಆತ್ಮೀಯ ಸದಸ್ಯ ಭಾಂದವರಿಂದ ಒಳಗೊಂಡು ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿ ಸಹಕಾರಿಯ ವಾರ್ಷಿಕ ವರದಿ ತಃಖ್ತೆಗಳನ್ನು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ಓದಿ ಪ್ರಚುರ ಪಡಿಸಿ ಸರ್ವಸದಸ್ಯರಲ್ಲಿ ವಿವರಿಸಿ ವಂದನಾರ್ಪಣೆ ಮೂಲಕ ಸಮಾಪ್ತಿಗೊಳಿಸಲಾಯಿತು. ಸ

ಸಹಕಾರಿಯ 2019–20 ನೇ ವಾರ್ಷಿಕ ವರದಿ : ಸದಸ್ಯರು 282, ನಿಧಿಗಳು 25,03,678/–, ಶೇರು ಬಂಡವಾಳ 3,84,100/–, ಠೇವಣಿಗಳು 4,66,53,900/– , ಸಾಲಗಳು 3,14,95,900/–, ಹೂಡಿಕೆಗಳು 1,50,82,300/–, ದುಡಿಯುವ ಬಂಡವಾಳ 5,02,09,000/– ಲಾಭಾಂಶ 6,66,599/–



**ದಾವಣಗೆರೆ :** ಜಂಗಮ ಸೌಹಾರ್ದ ಸಹಕಾರಿ ನಿ., ದಾವಣಗೆರೆ. ಈ ಸಹಕಾರಿಯ 10ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 15.12.2020ರಂದು ಬೆಳಗ್ಗೆ 11 ಗಂಟೆಗೆ ಸಹಕಾರಿಯ ವಿಶೇಷಾಧಿಕಾರಿಯಾದ ಶ್ರೀ ನಟರಾಜ ರವರ ಅಧ್ಯಕ್ಷತೆಯಲ್ಲಿ ನಡೆಯಿತು.




**ಬೆಳಗಾವಿ** : ಬೆಣಿವಾಡ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ.ಬೆಣಿವಾಡ, ಹುಕ್ಕೇರಿ ತಾಲ್ಲೂಕು, ಇದರ 2019–20ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯಲ್ಲಿ ಮುಖ್ಯ ಅತಿಥಿಯಾಗಿ ಶ್ರೀ ವೃಷಭನಾಥ ಪರಪ್ಪನವರ, ಜಿಲ್ಲಾ ಸಂಯೋಜಕರು ಭಾಗವಹಿಸಿ ಉದ್ಘಾಟನೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಅಶೋಕ ಪಾಟೀಲ ರವರು ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಇಓ ಶ್ರೀ ಭೀಮಶಿ ರವರು  ಹಾಜರಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಸದಸ್ಯರಿಗೆ ಅನುಕೂಲಕ್ಕಾಗಿ ನೀರಾವರಿ ಯೋಜನೆಗಳಿಗೆ, ಮನೆ ಕಟ್ಟಲು, ಕಾರ್ಮಿಕರಿಗೆ ಶೇಡ್ ಕಟ್ಟಲು ಹಾಗೂ ಸ್ವ–ಸಹಾಯ ಗುಂಪುಗಳಿಗೆ ಸಣ್ಣ ಬಳಕೆ ಸಾಲಗಳನ್ನು ಕನಿಷ್ಟ ಬಡ್ಡಿ ದರದಲ್ಲಿ ವಿತರಣೆ ಮಾಡುತ್ತಿದೆ ಅದರ ಉಪಯೋಗ ಪಡೆದುಕೊಳ್ಳಲು ಸಹಕಾರಿ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಅಶೋಕ ಪಾಟೀಲ ರವರು ಮಾತನಾಡಿದರು. ಮುಖ್ಯ ಅತಿಥಿಗಳ ಭಾಷಣದಲ್ಲಿ ಸಹಕಾರಿಯು ಸದಸ್ಯರಿಗೆ ನೀಡುತ್ತಿರುವ ಸೇವೆ ಮತ್ತು ಸಾಲಗಾರರು ಸಹಕಾರಿವತಿಯಿಂದ ಪಡೆದ ಸಾಲವನ್ನು ನಿಗದಿತ ಅವಧಿಯೊಳಗೆ ತುಂಬಿದರೆ ಸಹಕಾರಿಯು ಹೆಚ್ಚು ಪ್ರಗತಿ ಹೊಂದುವುದು ಎಂದು ಶ್ರೀ ವೃಷಭನಾಥ ಪರಪ್ಪನವರು ಸದಸ್ಯರನ್ನು ಉದ್ದೇಶಿಸಿ ಮಾತನಾಡಿದರು.




**ಮಾನ್ವಿ** : ಪಟ್ಟಣದ ನಾಗಲಾಂಬಿಕೆ ಪತ್ತಿನ ಸೌಹಾರ್ದ ಸಹಕಾರಿ ನಿ., 2019–20ನೇ ಸಾಲಿನಲ್ಲಿ 16 ಕೋಟಿ ವ್ಯವಹಾರ ಮಾಡಿ ರೂ. 51.34ಲಕ್ಷ ನಿವ್ವಳ ಲಾಭಗಳಿಸಿದೆ. ಎಂದು ಸಂಸ್ಥೆಯ ಅಧ್ಯಕ್ಷೆ ನಾಗರತ್ನಮ್ಮ ಬಿ. ಪಾಟೀಲ್ ಹೇಳಿದರು.

ಪಟ್ಟಣದಲ್ಲಿ ಈಚೆಗೆ ನಡೆದ ಸಂಸ್ಥೆಯ 6ನೇ ವಾರ್ಷಿಕ ಮಹಾಸಭೆಯಲ್ಲಿ ಅವರು ಮಾತನಾಡಿದರು. ಸಂಸ್ಥೆಯ ಬೆಳವಣಿಗೆಯ ಗ್ರಾಹಕರ ಸಹಕಾರ, ಆಡಳಿತ ಮಂಡಲಿಯ ಪ್ರೋತ್ಸಾಹ ಮತ್ತು ಸಿಬ್ಬಂದಿಯ ಪರಿಶ್ರಮ ಕಾರಣ. ಪ್ರಸಕ್ತ ಸಾಲಿನಲ್ಲಿ ಷೇರುದಾರರಿಗೆ ಶೇ.20 ರಷ್ಟು ಲಾಭಾಂಶ ವಿತರಿಸಲಾಗುವುದು ಎಂದರು.

ಸಹಕಾರ ರತ್ನ ಪ್ರಶಸ್ತಿ ಪುರಸ್ಕತರಾದ ಆರ್‌ಡಿಸಿಸಿ ಬ್ಯಾಂಕಿನ ನಿರ್ದೇಶಕ ವಿಶ್ವನಾಥ್ ಪಾಟೀಲ್ ತೋರಣದಿನ್ನಿ ಹಾಗೂ ಉತ್ತಮ ಗ್ರಾಹಕ ಶಂಕರಗೌಡ ಮುಷ್ಟೂರು ಅವರನ್ನು ಸನ್ಮಾನಿಸಲಾಯಿತು.

ಜಿಲ್ಲಾ ಕಸಾಪ ಅಧ್ಯಕ್ಷ ಡಾ. ಬಸವಪ್ರಭು ಪಾಟೀಲ್ ಬೆಟ್ಟದುರು. ಕಾನೂನು ಸಲಹೆಗಾರ ಗುಮ್ಮಾ ಬಸವರಾಜು, ಸಂಸ್ಥೆಯ ಮುಖ್ಯ ಸಲಹೆಗಾರ ಎಂ. ಮಲ್ಲಿಕಾರ್ಜುನಗೌಡ. ಉಪಾಧ್ಯಕ್ಷೆ ನೀಲಮ್ಮ ಎಂ.ಗೌಡ ನಿರ್ದೇಶಕರಾಧ ಲಿಂಗಮ್ಮ ಕರ್ಕಿಹಳ್ಳಿ, ಸರೋಜಾ ಗುಮ್ಮಾ, ಶಕುಂತಲಾ ಆಲ್ದಾಳ, ಶೈಲಜಾ ರೌಡೂರು. ಪರಿಮಾಳಾ ಹರವಿ, ಜ್ಯೋತಿ ದುರ್ಗದ, ಪುಷ್ಪಲತಾ ಕಲ್ಲೂರು, ಮಂಜುಳ ಹೀರಾ. ನಿರ್ಮಲಾ ಆಲ್ದಾಳ ಉಪಸ್ಥಿತರಿದ್ದರು.




**ಶಿವಮೊಗ್ಗ** : ದಿನಾಂಕ 13–12–2020ರಂದು ಸಾರಸ್ವತ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಅಧ್ಯಕ್ಷರಾದ ಎಂ.ಆರ್ ಗೋಪಾಲಕೃಷ್ಣರವರ ಅಧ್ಯಕ್ಷತೆಯಲ್ಲಿ 18ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ ಜರುಗಿತು. ಈ ಸಂದರ್ಭದಲ್ಲಿ ಅಧ್ಯಕ್ಷರು ತಮ್ಮ ಆಡಳಿತ ಅವಧಿಯಲ್ಲಿ ಈ ಮಹಾಸಭೆಯ ಸಹಿತ ನಿರಂತರ 10 ವರ್ಷದ 'ಎ' ವರ್ಗದ ಸಹಕಾರಿಯಾಗಿದೆ ನಿರಂತರವಾಗಿ 10 ವರ್ಷಗಳಿಂದಲೂ ದಾಖಲೆಯ ಶೇಕಡಾ 15% ಡಿವಿಡೆಂಡ್ ಘೋಷಿಸಲಾಗಿದೆ ಹಾಗೆಯೇ ಸಹಕಾರಿಯ ಆರ್ಥಿಕ ಪಕ್ಷಿನೋಟ ವಿವರಿಸುತ್ತಾ, ಸಹಕಾರಿಯ ಷೇರುದಾರರು 1018*ಬಂಡವಾಳ 72,50,000=00 ಕಾದಿರಿಸಿದ ನಿಧಿಗಳು 1,18,00,000=00 ದುಡಿಯುವ ಬಂಡವಾಳ 10,23,00,000=00 ಆಗಿದ್ದು ಇದು ಸಹಕಾರಿಯ ಉತ್ತಮ ಅಭಿವೃದ್ಧಿಯ ಕೈಗನ್ನಡಿ ಹಾಗೂ ದ್ಯೂತಕವಾಗಿರುತ್ತೆ ಎಂದರು, ಈ ಕಾರ್ಯಕ್ರಮವನ್ನು ಸಹಕಾರಿಯ ಮುಖ್ಯಕಾರ್ಯನಿರ್ವಹಕರು ನಿರೂಪಿಸಿದರು, ಈ ಮಹಾಸಭೆಯಲ್ಲಿ ಉಪಾಧ್ಯಕ್ಷರಾದ ಶ್ರೀಯುತ ಕೆ.ಸುಧೀರ್ ನಾಯಕ್‌ರವರು ಹಾಗೂ ಆಡಳಿತ ಮಂಡಳಿಯ ನಿರ್ದೇಶಕರುಗಳು, ಮಾನ್ಯ ಸದಸ್ಯರು, ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.



**ಮಂಗಳೂರು:** ಕರ್ನಾಟಕ ರಾಜ್ಯ ವಿದ್ಯುತ್ ಗುತ್ತಿಗೆದಾರರ ಸೌಹಾರ್ದ ಸಹಕಾರಿ ನಿ., ಕೊಡಿಯಾಲ್ ಬೈಲ್ ಮಂಗಳೂರು ಇದರ 2019-20ನೇ ಸಾಲಿನ ಸರ್ವ ಸದಸ್ಯರು ವಾರ್ಷಿಕ ಮಹಾಸಭೆ ದಿನಾಂಕ 12.12.2020 ರಂದು ಲಯನ್ಸ್ ಸೇವಾ ಮಂದಿರ ಮಲ್ಲಿಕಟ್ಟೆ ಮಂಗಳೂರಿನಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಉರ್ಬಾನ್ ಪಿಂಟೋ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಶ್ರೀ ಉರ್ಬಾನ್ ಪಿಂಟೋ ಇವರ ತಮ್ ಅಧ್ಯಕ್ಷ ಭಾಷಣದಲ್ಲಿ ಸಹಕಾರಿಯ ಬೆಳವಣಿಗೆಗಳ ಬಗ್ಗೆ ಹಾಗೂ ಸಹಕಾರಿಯ ಮುಂಬರುವ ಸಾಲಿನ ಗುರಿ ಸಾಧನೆಗಳ ಬಗ್ಗೆ ವಿವರಿಸಿ ಸದಸ್ಯರ ಸಹಕಾರವನ್ನು ಕೋರಿದರು. ಇದೇ ಸಂದರ್ಭದಲ್ಲಿ ಮೂಡಬಿದರೆಯ ಪುರಸಭೆ ಅಧ್ಯಕ್ಷರಾಗಿ ಆಯ್ಕೆಯಾದ ಸಹಕಾರಿಯ ಸದಸ್ಯರಾದ ಶ್ರೀ ಪ್ರಸಾದ್ ಕುಮಾರ್, ಪುತ್ತೂರು ಕಡಬ ವ್ಯಾಪ್ತಿಯ ಲ್ಯಾಂಪ್ಸ್ ನ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸಹಕಾರಿಯ ಮಾಜಿ ನಿರ್ದೇಶಕ ಶ್ರೀ ಪೂವಪ್ಪ ನಾಯಕ್, ಪರಂಗಿ ಪೇಟೆ ವ್ಯವಸಾಯ ಸಹಕಾರಿ ಬ್ಯಾಂಕ್ ನಿ., ಇದರ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸಹಕಾರಿಯ ಸದಸ್ಯರಾದ ಶ್ರೀ ಸುಬ್ರಹ್ಮಣ್ಯ ರಾವ್ ಹಾಗೂ ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿಯ ಜಿಲ್ಲಾ ಸಂಯೋಜಕರಾದ ಶ್ರೀ ಗುರುಪ್ರಸಾದ್ ಬಂಗೇರ ಇವರುಗಳನ್ನು ಸನ್ಮಾನಿಸಲಾಯಿತು.

ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಎಂ.ಜಿ ಇವರು ಸಹಕಾರಿಯ ವಾರ್ಷಿಕ ವರದಿ, ಲೆಕ್ಕಪರಿಶೋಧನಾ ವರದಿ ಮತ್ತು ಅಂದಾಜು ಆಯವ್ಯಯ ಗಳನ್ನು ಮಂಡಿಸಿದರು. ನಿರ್ದೇಶಕರಾದ ಶ್ರೀ ಶಿವಕುಮಾರ್ ಪೈಲೂರ್ ಇವರು ಸದಸ್ಯರನ್ನುದ್ದೇಶಿದಿ ಪ್ರಾಸ್ತಾವಿಕವಾಗಿ ಮಾತಾಡಿದರು. ಸಹಕಾರಿಯ ಉಪಾಧ್ಯಕ್ಷ ಶ್ರೀ ಸದಾಶಿವ ಬಂಗೇರ ಇವರು ಸ್ವಾಗತ ಭಾಷಣ ಮಾಡಿ. ಸಹಕಾರಿಯ ಇನ್ನೋರ್ವ ನಿರ್ದೇಶಕ ಶ್ರೀ ಎಡ್ವರ್ಡ್ ಸಿಕ್ವೇರಾ ಇವರು ವಂದಾನಾರ್ಪಣೆ ಸಲ್ಲಿಸಿದರು.

ಸಭೆಯಲ್ಲಿ ನಿರ್ದೇಶಕರುಗಳಾದ ಶೈಲೇಶ್ ಮಲ್ಯ, ಕುಶಲ ಪೂಜಾರಿ, ರವಿಪ್ರಸಾದ್ ಶೆಟ್ಟಿ, ಬಾಲಕೃಷ್ಣಾ ಕೋಳತ್ತಾಯ, ಮೋಹನ್ ಸಾಲಿಯಾನ್ ಅಶೋಕ್ ಕುಮಾರ್. ಆರ್.ಕೆ ಪುರುಷೋತ್ತಮ್, ಸರೇಖಾ ಪುರುಷೋತ್ತಮ್, ದಿನೇಶ್ ರಾವ್ ಹಾಗೂ ಚೇತನ್ ಮಲ್ಯ, ಶಾಖೆಗಳ ಸಲಹಾ ಮಂಡಲಿ ಸದಸ್ಯರು, ಸಹಕಾರಿಯ ಸಿಬ್ಬಂದಿ ವರ್ಗ, ಇವರುಗಳು ಅಲ್ಲದೇ ವಿಶೇಷ ಆಹ್ವಾನಿತರಾಗಿ ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿ ಇದರ ಜಿಲ್ಲಾ ಸಂಯೋಜಕರದ ಶ್ರೀ ಗುರುಪ್ರಸಾದ್ ಬಂಗೇರ ಉಪಸ್ಥಿತರಿದ್ದರು.




**ಬೆಂಗಳೂರು :** ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಯಲಹಂಕ ಉಪನಗರ ಇದರ 2019-20ನೇ ಸಾಲಿನ 11ನೇ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ದಿನಾಂಕ 04/12/2020ರಂದು ಶುಕ್ರವಾರ ಆನ್‌ಲೈನ್ ಮುಖಾಂತರ ವಿಶೇಷಾಧಿಕಾರಿಯಾದ ಶ್ರೀಯುತ ಎಂ ಅನಿಲ್‌ಕುಮಾರ್ ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಮಹತ್ವದ ಆನ್‌ಲೈನ್ ಸಭೆಗೆ 723 ಸದಸ್ಯರು ಪಾಲ್ಗೊಂಡು, ವಿವಿಧ ವಿಷಯಗಳನ್ನು ಮಂಡಿಸಿ, ಚರ್ಚಿಸಿದ ನಂತರ ಸದಸ್ಯರಿಂದ ಸರ್ವಾನುಮತದ ತೀರ್ಮಾನಗಳನ್ನು ತೆಗೆದುಕೊಂಡು ದಾಖಲು ಮಾಡಲಾಯಿತು. ಸಹಕಾರಿಯು 2019-20ನೇ ಸಾಲಿನಲ್ಲಿ ರೂ. 2,17,70,496/- (ಎರಡು ಕೋಟಿ ಹದಿನೇಳು ಲಕ್ಷದ ಎಪ್ಪತ್ತು ಸಾವಿರದ ನಾಲ್ಕು ನೂರ ತ್ತೋಂಭತ್ತ ಆರು ಮಾತ್ರ) ಗಳ ನಿವ್ವಳ ಲಾಭಾಂಶವನ್ನು ದಾಖಲಿಸಿದ್ದು, ಇದರಲ್ಲಿ ಶೇ.15% ರಂತೆ ಡಿವಿಡೆಂಡ್‌ನ್ನು ಘೋಷಿಸಲಾಯಿತು. ಹೆಚ್ಚಿನ ಸದಸ್ಯರು ಭಾಗವಹಿಸಿ ತಮ್ಮ ಅಮೂಲ್ಯವಾದ ಸಲಹೆ, ಸೂಚನೆಗಳನ್ನು ನೀಡುವುದರ ಮೂಲಕ 11ನೇ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಯಶಸ್ವಿಗೊಳಿಸಿದರು.



**ಚಾಮರಾಜನಗರ :** ಶ್ರೀ ಅಕ್ಷಯ ಶ್ರೀ ಸೌಹಾರ್ದ ಕ್ರೆಡಿಟ್ ಕೋ-ಆಪ್ ಲಿ., ಚಾಮರಾಜನಗರ ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ವೀರಭದ್ರ ಸ್ವಾಮಿ, ಸಹಕಾರಿಯ ಅಧ್ಯಕ್ಷರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ವೆಂಕಟರಮಣ(ಪಾಪು), ಶ್ರೀ ಬಂಗಾರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿಗಳು ಹಾಜರಿದ್ದರು.




**ಬಳ್ಳಾರಿ :** ನವಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿಮಿಟೆಡ್, ಪ್ರಧಾನ ಕಚೇರಿ, ಹೊಸಪೇಟೆ, ಇದರ 2019–20ನೇ ಸಾಲಿನ 18ನೇ ವಾರ್ಷಿಕ ಮಹಾಸಭೆಯು ದಿನಾಂಕ 19–12–2020 ನೇ ಶನಿವಾರ ಬೆಳಿಗ್ಗೆ 11.00 ಘಂಟೆಗೆ # 504, "ನವಕರ್ನಾಟಕ " ಬಿಲ್ಡಿಂಗ್, ಪಟೇಲ ನಗರ, 4ನೇ ವಾರ್ಡ, ಹೊಸಪೇಟೆಯಲ್ಲಿ ಶ್ರೀ ಕೆ. ವೀರಪ್ಪ, ಅಧ್ಯಕ್ಷರು, ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಮಹಾಸಭೆಯು ಕುಮಾರಿ ಕೀರ್ತಿ ಶಿವಪೂಜಿ ಮತ್ತು ಕುಮಾರಿ ಅನ್ನಪೂರ್ಣ ಮಠಪತಿ ಇವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಶ್ರೀ ಕಲ್ಲಯ್ಯಾ ಬ. ಶಿವಪೂಜಿ, ಪ್ರಧಾನ ವ್ಯವಸ್ಥಾಪಕರು, ಸ್ವಾಗತ ಭಾಷಣ ಮಾಡಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ. ವೀರಪ್ಪ, ಇವರು 2019–20 ನೇ ಸಾಲಿನ ಆಡಳಿತ ವರದಿಯನ್ನು ಓದಿ, ಸದರಿ ಸಹಕಾರಿಯು 2019–20 ನೇ ಸಾಲಿನಲ್ಲಿ ರೂ.24,08,383.59 ಲಾಭ ಗಳಿಸಿದ್ದು, ಸದಸ್ಯರಿಗೆ 9% ಲಾಭಾಂಶ ಘೋಷಿಸಲಾಗಿದೆ ಎಂದು ತಿಳಿಸಿದರು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದು ಉತ್ತೀರ್ಣರಾದ ಸದಸ್ಯರ ಮೂರು ಮಕ್ಕಳಿಗೆ ನಗದು ರೂಪದಲ್ಲಿ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು. ಶ್ರೀ ಬಾಪೂಗೌಡ ಬಿ. ಮದ್ದೂರ, ಶಾಖಾಧಿಕಾರಿ, ಬಳ್ಳಾರಿ, ಇವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.



**ಬಪ್ಪನಾಡು :** ಶ್ರೀ ಬಪ್ಪನಾಡು ಸೌಹಾರ್ದ ಸಹಕಾರಿ ನಿ., ಇದರ 2019–20ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ಶ್ರೀ ಅನ್ನಪೂರ್ಣೇಶ್ವರಿ ಸಭಾಗೃಹ, ಬಪ್ಪನಾಡು, ಮುಲ್ಕಿಯಲ್ಲಿ ಜರುಗಿತು.

ಸಹಕಾರಿಯ ಅಧ್ಯಕ್ಷರಾದ ಸಂಪತ್ ಕಾರ್ನಾಡ್ ಇವರು ಸ್ವಾಗತಿಸಿದರು. ಸಂಸ್ಥೆಯು ವರದಿ ವರ್ಷದಲ್ಲಿ ಮುಲ್ಕಿ ಮತ್ತು ಹಳೆಯಂಗಡಿ ಶಾಖೆಯನ್ನೊಳಗೊಂಡು ಒಟ್ಟು 1333 ಸದಸ್ಯರನ್ನೊಳಗೊಂಡು ರೂ.25.65 ಲಕ್ಷ ಪಾಲು ಬಂಡವಾಳದೊಂದಿಗೆ ರೂ.18.54 ಕೋಟಿ ವ್ಯವಹಾರ ನಡೆಸಿ ರೂ.4.80 ಕೋಟಿ ಠೇವಣಿ ಸಂಗ್ರಹಿಸಲಾಗಿದೆ. ವರದಿ ವರ್ಷದಲ್ಲಿ ತನ್ನ ಸದಸ್ಯರಿಗೆ ವಿವಿಧ ರೂಪದ ಸಾಲವಾಗಿ ರೂ.4.59ಕೋಟಿ ಸಾಲ ನೀಡಲಾಗಿದೆ. ಆರ್ಥಿಕ ವರ್ಷದಲ್ಲಿ ಸಹಕಾರಿಯು ರೂ.22.02ಲಕ್ಷ ಲಾಭಗಳಿಸಿದ್ದು ಅಧ್ಯಕ್ಷರಾದ ಸಂಪತ್ ಕಾರ್ನಾಡ್ ಇವರು ತನ್ನ ಸದಸ್ಯರಿಗೆ ಶೇ.10% ಡಿವಿಡೆಂಡ್ ಘೋಷಣೆ ಮಾಡಿದರು.

ಸಹಕಾರಿಯ ಮುಖ್ಯಕಾರ್ಯನಿರ್ವಹಣಾಧಿಕಾರಿ ನವೀನ್ ಕುಮಾರ್ ಇವರು ಸಹಕಾರಿಯ ವಾರ್ಷಿಕ ವರದಿ, ಪರಿಶೋಧಿತ ಲೆಕ್ಕಪತ್ರಗಳು ಹಾಗೂ 2020–21ರ ವಾರ್ಷಿಕ ಆಯ–ವ್ಯಯ ವನ್ನು ಮಂಡಿಸಿದರು. ವರದಿ ವರ್ಷದಲ್ಲಿ ಕ್ರಮಬದ್ಧವಾಗಿ ಉಳಿತಾಯ, ಆಂತರಿಕ ಸಾಲ ನಿರ್ವಹಣೆ, ಬ್ಯಾಂಕ್ ಸಾಲ ಮತ್ತು ಕ್ರಮಬದ್ಧವಾದ ಸಾಲ ಮರುಪಾವತಿಯಲ್ಲಿ ಸಾಧನೆಗೈದ ಸ್ವ–ಸಹಾಯ ಗುಂಪುಗಳಾದ ದುರ್ಗಾಪರಮೇಶ್ವರಿ ಸ್ವ–ಸಹಾಯ ಸಂಘ–ವನಭೋಜನ, ಮುಲ್ಕಿ ಮತ್ತು ಶ್ರೀ ಶನೀಶ್ವರ ಸ್ವ–ಸಹಾಯ ಸಂಘ– ಕ್ಯೊಕುಡೆ ಇವರನ್ನು ಸಭೆಯಲ್ಲಿ ಗೌರವಿಸಲಾಯಿತು.

ಕಳೆದ ವರ್ಷದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಪದವಿಯಲ್ಲಿ ಶೇ.60%ಕ್ಕಿಂತ ಹೆಚ್ಚು ಅಂಕ ಗಳಿಸಿದ ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಿ ಗೌರವಿಸಲಾಯಿತು. ಕೋರೋನಾ ಸಮಯದಲ್ಲಿ ಕೋರೋನಾ ವಾರಿಯರ್ಸ್ ಆಗಿ ಕಾರ್ಯನಿರ್ವಹಿಸಿದ ಸಹಕಾರಿ ಸದಸ್ಯರು ಆದ ಆಶಾಕಾರ್ಯಕರ್ತೆ ಶ್ರೀಮತಿ ಲತಾ ಇವರನ್ನು ಗೌರವಿಸಲಾಯಿತು.

ಆಡಳಿತಮಂಡಲಿ ಸದಸ್ಯರಾದ ಉಮೇಶ್ ಪಂಜ, ಜಯಾನಂದ ಎ. ರಾವ್, ಕಸ್ತೂರಿ ಪಂಜ, ಸತೀಶ್ ಅಂಚನ್, ರಾಮಚಂದ್ರ ಶೆಣೈ, ರಮಾನಾಥ ಪೈ, ಶ್ಯಾಮ್ ಪ್ರಸಾದ್, ಸುನಿಲ್ ಆಳ್ವ, ಅರುಣ್ ಭಂಡಾರಿ, ಶೈಲೇಶ್ ಕುಮಾರ್, ಶಕುಂತಳಾ ವಿ.ಬಂಗೇರ, ಉಪಸ್ಥಿತರಿದ್ದರು. ಮುಖ್ಯಕಾರ್ಯನಿರ್ವಹಣಾಧಿಕಾರಿ ನವೀನ್ ಕುಮಾರ್ ಕಾರ್ಯಕ್ರಮ ನಿರೂಪಿದರು. ಉಪಾಧ್ಯಕ್ಷರಾದ ಉಮೇಶ್ ಪಂಜ ವಂದಿಸಿದರು.



**ಮಂಡ್ಯ :** ಮಂಡ್ಯ ವರ್ತಕರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ 2019–20ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯ ಉದ್ಘಾಟನೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಮಹೇಂದ್ರಬಾಬು ಎಂ ಪಿ ರವರು ನೆರವೇರಿಸಿದರು. ಹಾಗೂ ವೇದಿಕೆ ಮೇಲೆ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಲುವಿಸ್ ಎ.ಇ ಹಾಗೂ ಆಡಳಿತ ಮಂಡಳಿ ನಿರ್ದೇಶಕರು ಹಾಜರಿದ್ದರು.



**ಕೋಡಿಕಲ್ಯಾಣ** : ಶ್ರೀ ರಾಮಾಂಜನೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ ಇದರ ವಾರ್ಷಿಕ ಮಹಾಸಭೆಯು ದಿನಾಂಕ 29.11.2020 ರ ಭಾನುವಾರ ಪೂರ್ವಾಹ್ನ 9.30 ಕ್ಕೆ ಸರಿಯಾಗಿ ಸಹಕಾರಿಯ "ಸೌಭಾಗ್ಯಧಾಮ" ಸಭಾಭವನದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶಂಭು ಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ವಾರ್ಷಿಕ ಮಹಾಸಭೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ಆಗಮಿಸಿ ಸಂಸ್ಥೆಯ ಈ ರೀತಿ ಬೆಳವಣಿಗೆಗೆ ಸಿಬ್ಬಂದಿಗಳ ಸೇವೆ ಹಾಗೂ ಆಡಳಿತ ಮಂಡಳಿಯ ಯೋಜನೆಗಳು ಮುಖ್ಯ ಕಾರಣವಾಗಿದೆ. ಮುಂದಿನ ದಿನಗಳಲ್ಲಿ ಈ ಸಂಸ್ಥೆಯು ಕರ್ನಾಟಕ ರಾಜ್ಯದಲ್ಲಿ ಅತ್ಯುತ್ತಮ ಸಹಕಾರಿ ಸಂಸ್ಥೆಯಾಗಿ ಮೂಡಿ ಬರಲಿ ಎಂಬುದಾಗಿ ಮೆಚ್ಚುಗೆಯ ಮಾತುಗಳನ್ನಾಡಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಶಂಭು ಪೂಜಾರಿ ಸದಸ್ಯರನ್ನು ಉದ್ದೇಶಿಸಿ ಮಾತನಾಡಿ ನಮ್ಮ ಸಂಸ್ಥೆಯ ಬೆಳವಣಿಗೆಗೆ ಬಹು ಮುಖ್ಯ ಕಾರಣ ಸದಸ್ಯರು, ನಿಮಗೆ ಸದಾ ಕಾಲ ಸೇವೆ ನೀಡುವುದಕ್ಕೆ ನಾವು ಕಾತರರಾಗಿದ್ದೇವೆ. ಮುಂದಿನ ದಿನಗಳಲ್ಲಿ ಗ್ರಾಮ ಸ್ವಚ್ಛತೆ, ಆರೋಗ್ಯ ತಪಾಸಣೆ ಹಾಗೂ ಸಹಕಾರಿಯ ಸ್ವಂತ ಕಟ್ಟಡದ ರಚನೆಯ ಬಗ್ಗೆ ಕಾರ್ಯಯೋಜನೆಯನ್ನು ಹಾಕಿಕೊಂಡಿದ್ದೇವೆ. ಅಷ್ಟೇ ಅಲ್ಲದೇ ಸಹಕಾರಿಯು ಇನ್ನು ಮುಂದೆ ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡುವುದರೊಂದಿಗೆ ಕ್ಯಾನ್ಸರ್ ನಂತಹ ಮಾರಕ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ ನಮ್ಮ ಸಂಸ್ಥೆಯು ಹೆಚ್ಚು ಸಹಕಾರಿಯಾಗಲು ಹಲವು ಕಾರ್ಯ ಯೋಜನೆಗಳನ್ನು ಈಗಾಗಲೇ ಆಡಳಿತ ಮಂಡಳಿ ಹಮ್ಮಿಕೊಂಡಿರುತ್ತದೆ ಎಂದು ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ತಿಳಿಸಿದರು.

ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿ.ಯು.ಸಿಯಲ್ಲಿ ಶೇ.80% ಕ್ಕಿಂತ ಹೆಚ್ಚು ಅಂಕ ಗಳಿಸಿದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಲಾಯಿತು ಹಾಗೂ ಸದಸ್ಯರಿಗೆ ಶೇ 13% ಡಿವಿಡೆಂಡ್ ಘೋಷಣೆ ಮಾಡಲಾಯಿತು.

ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಮಹಾಬಲ ಕುಂದರ್ ಆಗಮಿಸಿದವರನ್ನು ಸ್ವಾಗತಿಸಿದರು. ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ರಾಘವೇಂದ್ರ ಕರ್ಕೇರ 2019-20 ನೇ ಸಾಲಿನ ವಾರ್ಷಿಕ ವರದಿಯನ್ನು ವಾಚಿಸಿದರು. ವ್ಯವಸ್ಥಾಪಕರಾದ ಪ್ರತಿಮಾ ಕೆ ವಂದಿಸಿದರು.

---



**ಕಾರಟಗಿ** : ದಿನಾಂಕ 28-11-2020 ರಂದು ಶ್ರೀ ಬಸವಭಾನು ಪತ್ತಿನ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ಸಹಕಾರಿಯ ಅಧ್ಯಕ್ಷರಾದ ಬಸವರಾಜ ಕೂಡ್ಲುರವರ ಅಧ್ಯಕ್ಷತೆಯಲ್ಲಿ ಸಹಕಾರಿ ಆವರಣದಲ್ಲಿ ಜರುಗಿತು ಸಭೆಯ ಗೌರವ ಅಧ್ಯಕ್ಷರಾಗಿ ಗುಂಡಪ್ಪ ಕುಳಗಿ ಹಾಗೂ ಕರ್ನಾಟಕ ರಾಜ್ಯ ಸಂಯುಕ್ತ ಸೌಹಾರ್ದ ಸಹಕಾರಿ ಒಕ್ಕೂಟ ಕೊಪ್ಪಳ ಜಿಲ್ಲಾ ನಿರ್ದೇಶಕರಾದ ಶ್ರೀ ಶ್ರೀಧರ ಕೆಸರಟ್ಟಿ ಮತ್ತು ಕೊಪ್ಪಳ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರಾದ ಅಮರೇಶ ಕುಳಗಿ ಹಾಗೂ ಸೌಹಾರ್ದ ಸಂಯೋಜಕರಾದ ಪವನಕುಮಾರ ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ರಮೇಶ್ ಮಾವಿನಮಡ್ಗ ಹಾಗು ಶ್ರೀ ಲಕ್ಷ್ಮೀ ವೆಂಕಟೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಉಪಾಧ್ಯಕ್ಷರಾದ ಸಿ.ಹೆಚ್. ಶರಣಪ್ಪ ಶ್ರೀ ಬಸವ ಭಾನು ಸಹಕಾರಿ ಉಪಾಧ್ಯಕ್ಷ ಬಸವರಾಜ ಕುಳಗಿ ನಿರ್ದೇಶಕ ರಾದ ಮೌನೇಶ್, ವಿ ರಾಜಶೇಖರ ಶ್ರೇಷ್ಠಿ ಭಾಗವಹಿಸಿದ್ದರು ಹಾಗೂ ಸಹಕಾರಿ ಸದಸ್ಯರ ಮಕ್ಕಳಿಗೆ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿಯಲ್ಲಿ ಹಚ್ಚಿನ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸನ್ಮಾನ ಹಾಗೂ ಸಹಕಾರಿಯಲ್ಲಿ ಪಡೆದ ಹಣವನ್ನು ಸಕಾಲಕ್ಕೆ ಮರುಪಾವತಿಸಿದ ಮತ್ತು ಪಿಗ್ಮಿ ಠೇವಣಿದಾರರಿಗೆ "ಸಹಕಾರಿ ಬಂಧು" ಪ್ರಶಸ್ತಿ ಪ್ರಧಾನ ಮಾಡಲಾಯಿತು ಸಮಾರಂಭದಲ್ಲಿ ಸಹಕಾರಿಯ ನಿರ್ದೇಶಕರು ಹಾಗು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಸಹಕಾರಿಯ ವ್ಯವಸ್ಥಾಪಕ ಸಂಗಪ್ಪ ಕೂಡ್ಲುರ ನಿರೂಪಿಸಿದರು ಶಿಲ್ಪಾ ಹಾಗೂ ಸುಶ್ಮೀತಾ ಪ್ರಾರ್ಥನೆ ಗೀತೆ ನೆರವೇರಿಸಿದರು

---



**ಕೋಲಾರ** : ದಿನಾಂಕ 12.12.2020ರಂದು ಶ್ರೀ ಸಾಯಿ ಸೌಹಾರ್ದ ಸಹಕಾರಿ ನಿ., ಕೋಲಾರ ಇದರ ಸಾಮಾನ್ಯ ಸಭೆಯು ನಡೆಯಿತು.



**ಚಾಮರಾಜನಗರ :** ಮಹರ್ಷಿ ಶ್ರೀ ವಾಲ್ಮೀಕಿ ನೌಕರರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ಉದ್ಘಾಟನೆ & ಪ್ರಥಮ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಉದ್ಘಾಟನೆಯನ್ನು ಶ್ರೀ ಚಂದ್ರಶೇಖರ್, ಜಿಲ್ಲಾ ಅಧ್ಯಕ್ಷರು, ಕರಾಸನೌಸಂ., ಚಾಮರಾಜನಗರ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ವಿಜಯಕುಮಾರ್ .ಡಿ, ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿ., ಚಾಮರಾಜನಗರ, ಶ್ರೀ ಬಂಗಾರನಾಯಕ, ಪ್ರಾಂಶುಪಾಲರು, ಸ.ಪ.ಪೂ.ಕಾಲೇಜು, ಯಳಂದೂರು, ಶ್ರೀ ಸತ್ಯಪ್ರಕಾಶ್, ಸಾಮಾಜಿಕ ಕಾರ್ಯಕರ್ತರು, ಶ್ರೀ ರಾಜೇಂದ್ರ ಕುಮಾರ್, ಅಧ್ಯಕ್ಷರು, ಮೈಸೂರು ಜಿಲ್ಲಾ ಛಾಯಾಸ್ನೇಹ ಸೌಹಾರ್ದ ಸಹಕಾರಿ ನಿ., ಮೈಸೂರು ಮತ್ತು ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಶ್ರೀ ಮಹೇಶ್ ಎಸ್.ಎಂ, ಮುಖ್ಯ ಪ್ರವರ್ತಕರು ವಹಿಸಿದ್ದರು. ಇದೇ ಸಂದರ್ಭದಲ್ಲಿ ವೇದಿಕೆ ಮೇಲೆ ಇದ್ದ ಗಣ್ಯರು ಮಹರ್ಷಿ ಶ್ರೀ ವಾಲ್ಮೀಕಿ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.



**ಚಾಮರಾಜನಗರ :** ಶ್ರೀ ಮುರಘರಾಜೇಂದ್ರಸ್ವಾಮಿ ಸೌಹಾರ್ದ ಸಹಕಾರಿ ನಿ., ಮರಿಯಾಲ ಇದರ 2019-20ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ದಿವ್ಯ ಸಾನಿಧ್ಯವನ್ನು ಶ್ರೀ ಇಮ್ಮಡಿ ರಾಜೇಂದ್ರಸ್ವಾಮಿಗಳು ವಹಿಸಿ ಉದ್ಘಾಟನೆ ಮಾಡಿ ಅಶೀರ್ವಚನ ನೀಡಿದರು. ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಶ್ರೀ ಶಿವಕುಮಾರ ಸ್ವಾಮಿಗಳು, ಕಾಳನಹುಂಡಿ & ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ನಂಜುಂಡಸ್ವಾಮಿ ವಹಿಸಿದ್ದರು. ಸಹಕಾರಿಯ ಆಡಳಿತ ಮಂಡಳಿ ಸದಸ್ಯರು & ಸಿಇಓ ಹಾಜರಿದ್ದರು.



**ಚಾಮರಾಜನಗರ :** ಶ್ರೀ ಪಾರ್ವತಿ ಸೌಹಾರ್ದ ಸಹಕಾರಿ ನಿ., ಕುದೇರು ಇದರ 2019-20ನೇ ವರ್ಷದ ಸರ್ವ ಸದಸ್ಯರ ಮಹಾ ಸಭೆಯ ಉದ್ಘಾಟನೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಮಹಾದೇವಸ್ವಾಮಿ ನೆರವೇರಿಸಿದರು. ಮುಖ್ಯ ಅತಿಥಿಯಾಗಿ ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ನಿರ್ದೇಶಕರು ಮತ್ತು ಸಿಇಓ ಶ್ರೀಮತಿ ಸುಷ್ಮಾ ಹಾಜರಿದ್ದರು.



**ಚಾಮರಾಜನಗರ :** ಶ್ರೀ ಮದ್ದಾನೇಶ್ವರ ಮಹಿಳಾ ಸೌಹಾರ್ದ ಸಹಕಾರಿ ನಿ., ಗುಂಡ್ಲುಪೇಟೆ ಇದರ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಹಿರಿಯ ಸಹಕಾರಿಗಳಾದ ಶ್ರೀ ನಟರಾಜ ಕಲ್ಮಳ್ಳಿ ಉದ್ಘಾಟನೆ ಮಾಡಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ರೇಣುಕಾ ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಭಾಗವಹಿಸಿದ್ದರು. ವೇದಿಕೆ ಮೇಲೆ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಇಓ ಕು. ಮಾನಸ ಹಾಜರಿದ್ದರು. ಇದೇ ಸಮಯದಲ್ಲಿ ಆಡಳಿತ ಮಂಡಳಿ ಸದಸ್ಯರನ್ನು ಗೌರವಿಸಲಾಯಿತು.



**ಮಂಡ್ಯ :** ಶ್ರೀ ಶ್ರೀ ಕ್ರಾಂತಿ ಯೋಗಿ ಬಸವೇಶ್ವರ ನೌಕರರ ಪತ್ತಿನ ಸಹಕಾರಿ ನಿ., ಮಂಡ್ಯ ಇದರ ವಾರ್ಷಿಕ ಮಹಾಸಭೆಯ ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಉಪಸ್ಥಿತಿಯಲ್ಲಿ ನಡೆಯಿತು.



**ಹುಲ್ಲೋಳಿ :** ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಹುಲ್ಲೋಳಿ ಸಹಕಾರಿಯಲ್ಲಿ 21ನೇ ಮಹಾಸಭೆಯು ರವಿವಾರ ದಿನಾಂಕ 06.12.2020 ರಂದು ಬೆಳಿಗ್ಗೆ 10.00 ಗಂಟೆಗೆ ಸಹಕಾರಿಯ ಕಛೇರಿಯಲ್ಲಿ ಅಧ್ಯಕ್ಷರಾದ ಶ್ರೀ ರಾಮಾಣ್ಣಾ ಗೋಟರಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿಯಲ್ಲಿ 90% ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಮತ್ತು ಹಿರಿಯ ಸಹಕಾರಿಗಳನ್ನು ಸನ್ಮಾನಿಸಲಾಯಿತು. ಉತ್ತಮ ಶಾಖೆ, ಪ್ರಶಸ್ತಿಯನ್ನು ಉಗಾರ ಬಿ.ಕೆ ಶಾಖೆಗೆ ನೀಡಿ ಅವರನ್ನು ಸತ್ಕಾರಿಸಲಾಯಿತು. ಪ್ರಧಾನ ಕಾರ್ಯದರ್ಶಿಯಾದ ಆನಂದ ಚೆಗಲಾ ಇವರು ಸಹಕಾರಿ 2019-20ನೇ ಸಾಲಿನ 3 ಪತ್ರಿಕೆಗಳನ್ನು ಓದಿ ಸಹಕಾರಿಯು ಈ ಕೊರೋನಾ ಸಂದರ್ಭದಲ್ಲಿಯೂ ಸಾಲ ವಸೂಲಾತಿಯನ್ನು 98% ಮಾಡಿ ರೂ. 2.78 ಕೋಟಿ ಲಾಭ ಗಳಿಸಿದೆ ಮತ್ತು ಸದಸ್ಯರಿಗೆ 25% ಲಾಭಾಂಶ ಘೋಷಿಸಿದರು. ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾಧ ಶ್ರೀ ರವೀಂದ್ರ ಚೇಗಲಾ ಮಾತನಾಡಿ ಕೋರೋನಾ ಸಂದರ್ಭದಲ್ಲಿ ಮುಖ್ಯಮಂತ್ರಿ ಪರಿಹಾರ ನಿಧಿಗೆ ಸಹಕಾರಿಯಿಂದ 1 ಲಕ್ಷ ರೂ ನೀಡಲಾಗಿದೆ. 1% ಹಾಗೂ 0.50% ಸಾಲಗಳ ಬಡ್ಡಿ ದರ ಕಡಿಮೆ ಮಾಡಿದೆ ಎಂದರು. ಸಹಕಾರಿಯ ಉಪಾಧ್ಯಕ್ಷರು ಆಡಳಿತ ಮಂಡಲಿ ಹಾಗೂ ಸಿಬ್ಬಂದಿ ವರ್ಗ ಮತ್ತು ಸರ್ವಸದಸ್ಯರು ಉಪಸ್ಥಿತರಿದ್ದರು.



**ಚಾಮರಾಜನಗರ :** ಸ್ನೇಹ ಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ 2019-20ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ಮುಖ್ಯ ಅತಿಥಿಯಾಗಿ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಭಾಗವಹಿಸಿ ಉದ್ಘಾಟನೆ ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ನಾಗರತ್ನಮ್ಮ .ಎಂ ರವರು ವಹಿಸಿದ್ದರು. ವೇದಿಕೆ ಮೇಲೆ ಉಪಾಧ್ಯಕ್ಷರು ಮತ್ತು ಸಿಇಒ ಉಪಸ್ಥಿತಿ ಇದ್ದರು. ಆಡಳಿತ ಮಂಡಳಿ ಸದಸ್ಯರು ಮತ್ತು ಷೇರುದಾರರು ಸಭೆಯಲ್ಲಿ ಹಾಜರಿದ್ದು ಯಶಸ್ವಿಯಾಗಿ ಜರುಗಿತು. ಇದೇ ಸಂದರ್ಭದಲ್ಲಿ ಸಹಕಾರಿಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ನಿರ್ದೇಶಕರನ್ನು ಸನ್ಮಾನಿಸಲಾಯಿತು.

## ಶಾಖೆ ಉದ್ಘಾಟನೆ



**ಮೂಡಲಗಿ :** ಮೂಡಲಗಿ ತಾಲ್ಲೂಕಿನ ನಾಗನೂರ ಪಟ್ಟಣದ ನಾಗನೂರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯ 7ನೇ ಶಾಖೆಯನ್ನು ರಾಮದುರ್ಗ ತಾಲ್ಲೂಕಿನ ಹಲಕುಂದ ಗ್ರಾಮದಲ್ಲಿ ಉದ್ಘಾಟಿಸಲಾಯಿತು. ಸುಣಧೋಲಿಯ ಶ್ರೀ ಶಿವಾನಂದ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದರು. ರಾಜ್ಯಸಭಾ ಸದಸ್ಯರಾದ ಶ್ರೀ ಈರಣ್ಣಾ ಕಡಾಡಿ ಹಾಗೂ ರಾಮದುರ್ಗ ಶಾಸಕ ಶ್ರೀ ಮಹಾದೇವಪ್ಪ ಯಾದವಾಡ ಶಾಖೆಯನ್ನು ಉದ್ಘಾಟಿಸಿದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಸನಗೌಡ ಪಾಟೀಲ ಜ್ಯೋತಿ ಬೆಳಗಿಸಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸವರಾಜು ತಡಸನವರ ಅಧ್ಯಕ್ಷತೆ ವಹಿಸಿದರು. ಲೆಕ್ಕಪರಿಶೋಧಕರಾದ ಸೈದಪ್ಪ ಗದಾಡಿ ಹಾಗೂ ಯಲ್ಲಪ್ಪ ಮುಂಬರಡ್ಡಿ, ರಮೇಶ ಅಣ್ಣಿಗೇರಿ, ಹಲಕುಂದ ಶಾಖಾ ಅಧ್ಯಕ್ಷರಾದ ಶ್ರೀ ತಮ್ಮಣ್ಣ ಹುಂಡೇಕಾರ, ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಮಹೇಶ ಕಲಕರ್ಣಿ ಉಪಸ್ಥಿತರಿದ್ದರು. ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಮತ್ತು ಎಲ್ಲಾ ಶಾಖೆಗಳ ಸಲಹಾ ಸಮಿತಿ ಸದಸ್ಯರು, ಸಿಬ್ಬಂದಿ ವರ್ಗ ನಾಗನೂರ ಮತ್ತು ಹಲುಕುಂದ ಗ್ರಾಮದ ಸರ್ವಸದಸ್ಯರು ಉಪಸ್ಥಿತರಿದ್ದರು. ಸಹಕಾರಿಯ ಮೂಡಲಗಿ ಶಾಖಾ ವ್ಯವಸ್ಥಾಪಕ ಪ್ರಕಾಶ ಅಂಗಡಿ ಸ್ವಾಗತಿಸಿ ಕುಲಕೋಡ ಶಾಖಾ ವ್ಯವಸ್ಥಾಪಕ ಶಿವಾನಂದ ಕರಿಹೋಳಿ ವಂದಿಸಿದರು.



**ಉಡುಪಿ:** ಯು.ಕೆ. ಸೌಹಾರ್ದ ಪತ್ತಿನ ಸಹಕಾರಿ ನಿ., ಉಡುಪಿ ಸಹಕಾರಿಯ ಸಮಾಜದ ಏಳಿಗೆಯ ಬಗ್ಗೆ ಹೆಚ್ಚಿನ ಕಳಕಳಿಯನ್ನು ಹೊಂದಿದ್ದು, ಈ ಹಿನ್ನಲೆಯಲ್ಲಿ ನಮ್ಮ ಸಹಕಾರಿಗೆ ಟಿ.ಎಸ್.ಎಸ್. ಶ್ರೀಪಾದ ಹೆಗಡೆ ಕಡವೆ ವೈದ್ಯಕೀಯ ವಿಜ್ಞಾನ ಸಂಸ್ಥೆ, ಕಾಲೇಕು ರಸ್ತೆ, ಶಿರಿ. ಇವರು ಹೃದಯರೋಗ ಚಿಕಿತ್ಸೆ ಕುರಿತಾಗಿ ಕ್ಯಾಥ್-ಲ್ಯಾಬ್ ಅಳವಡಿಸುವ ನಿಮಿತ್ತ ಸಹಾಯಧನ ನೀಡಲು ವಿನಂತಿಸಿದಂತೆ ದಿನಾಂಕ 05.12.2020 ರಂದು ಸದರಿ ಚೆಕ್‌ನ್ನು ಟಿ.ಎಸ್.ಎಸ್ ಶ್ರೀಪಾದ ಹೆಗಡೆ ಕಡವೆ ವೈದ್ಯಕೀಯ ವಿಜ್ಞಾನ ಸಂಸ್ಥೆ, ಇವರಿಗೆ ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಟಿ.ಎಸ್.ಎಸ್ ಉಪಾಧ್ಯಕ್ಷರಾದ ಶ್ರೀಪಾದ ಹೆಗಡೆ ಕಡವೆ ಹಾಗೂ ಯು.ಕೆ ಸೌಹಾರ್ದ ಕ್ರೆಡಿಟ್ ಕೋ-ಆಪ್ ಲಿ., ಸಹಕಾರಿಯ ನಿರ್ದೇಶಕರಾದ ಶ್ರೀ ದೀಪಕ ಆರ್ ಹೆಗಡೆ, ಟಿ.ಎಸ್.ಎಸ್ ಪ್ರಧಾನ ವ್ಯವಸ್ಥಾಪಕರಾದ ಎನ್.ಜಿ.ಕಿರಣ ಶಾಖಾ ವ್ಯವಸ್ಥಾಪಕರಾದ ತ್ರಯಂಬಕ ಎನ್. ಭಟ್ಟ ಹಾಗೂ ಪ್ರಸನ್ನ ವಿ. ಹೆಗಡೆ ಇವರು ಈ ಸಮಯದಲ್ಲಿ ಹಾಜರಿದ್ದರು.



**ಕೊಪ್ಪಳ :** ಶುಕಮುರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಿಣಿಗೇರಿ ದಿನಾಂಕ 01–12–2020 ರಂದು ಬೇಂದ್ರೇ ಪಬ್ಲಿಕ್ ಸ್ಕೂಲ್ ಗಿಣಿಗೇರಿಯಲ್ಲಿ 5ನೇ ವಾರ್ಷಿಕೋತ್ಸವವನ್ನು ಸಹಕಾರಿ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಗಳಾಗಿ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಶ್ರೀ ತೋಟಪ್ಪ ಕಾಮನೂರ, ಮಲ್ಲಿಖರ್ಜುನ ವಿ ಪಾಟಿಲ ಜಿಲ್ಲಾ ಒಕ್ಕೂಟ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ರಾಷ್ಟ್ರ ಮಟ್ಟದ ವಾಲಿಬಾಲ್ ಪುಟಕ್ಕೆ ಆಯ್ಕೆಯಾದ ಕುಮಾರಿ ನಂದಿನಿ ಮಂಜುನಾಥ ಮೇದರಳ್ಳಿ, ಮಂಜುನಾಥ ತೊಂಟಿಗೇರ, ಹಾಗೂ ಕೊಪ್ಪಳ ಭಾಗದ ಸಹಕಾರಿಯ ಅಧ್ಯಕ್ಷರು ಕಾರ್ಯದರ್ಶಿಗಳು ಆಗಮಿಸಿದ್ದರು. ಮುಖ್ಯ ಕಾರ್ಯನಿರ್ವಾಹಕರ ನಿರೂಪಣೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಉಪಾಧ್ಯಕ್ಷರಾದ ಶ್ರೀ ಪುಟ್ಟಪ್ಪ ಅತಿಥಿಗಳಿಗೆ ಸ್ವಾಗತ ಕೋರಿದರು. ಸಹಕಾರಿ ನಿರ್ದೇಶಕರಾದ ಡಾ॥ ಬಸವರಾಜ ಪಿ ಎಮ್ ಸಹಕಾರಿಯ ಪ್ರಸ್ತಾವಿಕವಾಗಿ ಮಾತನಾಡಿದರು ಸಹಕಾರಿ ನಿರ್ದೇಶಕರಾದ ಕರಿಬಸವರಾಜ ಗದ್ದಿ, ಯಮನೂರಪ್ಪ ಗಂಟಿ ದ್ರಾಕ್ಷಣಿಯಮ್ಮ ಹ್ಯಾಟಿ ಬಸಲಿಂಗಮ್ಮ ಗಂಟಿ ಲಕ್ಷ್ಮಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮನೋರಂಜನೆಗಾಗಿ ವಿವಿದ ಕಾರ್ಯಕ್ರಮಗಳು ಹಮ್ಮಿಕ್ಕೊಳ್ಳಲಾಯಿತು 01 ಚಿಕ್ಕ ಮಕ್ಕಳಿಗೆ ಕುರ್ಚಿ ಆಟ ಮಹಿಳೆಯರಿಗೆ ರಿಂಗ್ ಎಸೆತ ಹಾಗೂ ಸಹಕಾರಿ ಬಂಧುಗಳಿಗೆ ಆಶು ಭಾಷಣ ಸ್ಪರ್ಧೆ ನಡೆಸಲಾಯಿತು ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

## ಕನಕದಾಸರ ಜಯಂತಿ



**ಕೊಪ್ಪಳ :** ಶ್ರೀ ಗುರು ಸೃಷ್ಠಿಕರ್ತ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಗಿಣಿಗೇರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಶ್ರೀ ಸುರೇಶ್ ರಾವ್ ಕುಲಕರ್ಣಿ ದಾಸ ಸಾಹಿತ್ಯಕ್ಕೆ ವೈಶಿಷ್ಟಪೂರ್ಣವಾದ ಮೆರುಗನ್ನು ತಂದಿರುವ ಪಾಂಡಿತ್ಯಪೂರ್ಣ ಕವಿ ಶ್ರೀ. ಕನಕದಾಸರು. ಸಹಜ ಬದುಕಿನಿಂದ ಕೀರ್ತನಕಾರರಾಗಿ, ತತ್ವಜ್ಞಾನಿಯಾಗಿ, ಸಂತರಾಗಿ, ದಾರ್ಶನಿಕರಾಗಿ ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಗೆ ಕನಕದಾಸರು ಅಪಾರ ಕೊಡುಗೆ ನೀಡಿದ್ದಾರೆ. ಕನಕದಾಸರು ದಂಡನಾಯಕರಾಗಿದ್ದು, ಯುದ್ಧದಲ್ಲಿ ಸೋತ ನಂತರ ಅವರಿಗೆ ವೈರಾಗ್ಯ ಉಂಟಾಗಿ ಹರಿಭಕ್ತ ದಾಸರಾದರು ಎಂಬ ಮಾತಿದೆ. ಅಂತಹ ಶ್ರೇಷ್ಠ ಹರಿದಾಸರಲ್ಲಿ ಒಬ್ಬರಾದ ಶ್ರೀ ಕನಕದಾಸರ ಜಯಂತಿಯಂದು ನಾಡಿನ ಜನತೆಗೆ ಹಾರ್ದಿಕ ಶುಭಾಶಯಗಳನ್ನು ಕೋರಿದರು.



**ಬೆಂಗಳೂರು :** ದಿನಾಂಕ 23.12.2020 ರಂದು ಬಸವ ಸಮಾಜ ಸೌಹಾರ್ದ ಪತ್ತಿನ ಸಹಕಾರಿ ನಿ., ಇದರ ವಾರ್ಷಿಕ ಸಾಮಾನ್ಯ ಸಭೆಗೆ ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಂ ರವರು ಭಾಗವಹಿಸಿದರು.



**ಬೆಂಗಳೂರು :** ದಿನಾಂಕ 20.12.2020 ರಂದು ನಿರ್ವಾಣೇಶ್ವರ ಸೌಹಾರ್ದ ಸಹಕಾರಿಯ 14ನೇ ವರ್ಷದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಂ ರವರು ಭಾಗವಹಿಸಿದರು.



**ಶಿವಮೊಗ್ಗ :** ಅಂಜನೇಯ ವಿವಿದೋದ್ದೇಶ ಸೌಹಾರ್ದ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಆವರಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ಬಿ ಚಂದ್ರಶೇಖರಪ್ಪ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.



**ಬಳ್ಳಾರಿ :** ನಿತ್ಯಶ್ರೀ ಸೌಹಾರ್ದ ಕ್ರೆಡಿಟ್ ಕೋಆಪರೇಟಿವ್ ಹೂವಿನಹಡಗಲಿಯ ಪ್ರಧಾನ ಕಛೇರಿಯಲ್ಲಿ ಹೊಸವರ್ಷದ ಕ್ಯಾಲೆಂಡರ್ ಬಿಡುಗಡೆ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯವನ್ನು ಹಮ್ಮಿಕೊಳ್ಳಲಾಗಿತ್ತು. ಹೂವಿನಹಡಗಲಿ ಗವಿಮಠದ ಡಾ.ಹಿರಿಶಾಂತವೀರ ಶ್ರೀಗಳು ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಈ ವೇಳೆ ಶ್ರೀಗಳು ಮಾತನಾಡಿ ಕೇವಲ ಲಾಭವನ್ನು ನಿರೀಕ್ಷಿಸದೆ ಧಾರ್ಮಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸಹಾಯ ಸಹಕಾರ ನೀಡುವುದರ ಜೊತೆಗೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ರಂಗದಲ್ಲಿ ಸಾಧನೆಮಾಡಿದ ಸಾಧಕರನ್ನು ಗುರುತಿಸಿ ಅವರನ್ನು ಗೌರವಿಸಿ ಬೆನ್ನುತಟ್ಟುವ ಕಾರ್ಯ ಮಾಡುತ್ತಿರುವ ಸಹಕಾರಿಯ ಸಂಸ್ಥಾಪಕರಾದ ಕೆ. ಸಂತೋಷ ಅವರ ಕಾರ್ಯ ಶ್ಲಾಘನೀಯವಾದುದು ಎಂದು ಸ್ಮರಿಸಿದರಲ್ಲದೆ 2016ರಲ್ಲಿ ಹೂವಿನಹಡಗಲಿ ಪಟ್ಟಣದಲ್ಲಿ ಪ್ರಾರಂಭಗೊಂಡ ನಿತ್ಯಶ್ರೀ ಸೌಹಾರ್ದ ಸಹಕಾ–ರಿಯು ಜನರಲ್ಲಿ ವಿಶ್ವಾಸ ಗಳಿಸಿ, ಅವರ ಜೊತೆ ಉತ್ತಮ ಬಾಂದವ್ಯ ಹೊಂದಿ, ಉತ್ತಮ ಸಾಲ ಸೌಲಭ್ಯ ನೀಡುವ ಮೂಲಕ ಸಣ್ಣ ಉದ್ಯಮಿ ಹಾಗೂ ರೈತರು ಮತ್ತು ವ್ಯಾಪರಸ್ಥರ ಬಾಳಿಗೆ ಬೆಳಕು ನೀಡುವುದರ ಜೊತೆಗೆ ಕೆಲವೇ ವರ್ಷದಲ್ಲಿ ತಾಲೂಕಿನ ಹೊಳಲು ಹಾಗೂ ಮಾಗಳ ಗ್ರಾಮದಲ್ಲಿ ಶಾಖೆಗಳನ್ನು ತೆರೆದು ಅನೇಕ ಯುವಕರಿಗೆ ಉದ್ಯೋಗ ನೀಡುವಲ್ಲಿ ಯಶಸ್ವಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಈಚೆಗೆ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಶಿಕ್ಷಕರಿಗೆ ಗೌರವಿಸಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷ ಕೆ. ಸಂತೋಷ, ಗೌರವ ಅಧ್ಯಕ್ಷ ಡಾ. ಫಣಿರಾಜ, ಸಿಬ್ಬಂದಿ ಹಾಜರಿದ್ದರು.



**ಸಾಲಿಗ್ರಾಮ :** ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಸಾಲಿಗ್ರಾಮ ಇದರ ಹತ್ತನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷ ಆನಂದ ಸಿ.ಕುಂದರ್ ಇವರ ಅಧ್ಯಕ್ಷತೆಯಲ್ಲಿ ಇತ್ತೀಚಿಗೆ ಜರಗಿತು. ಎಂಟೂವರೆ ಕೋಟಿಗೂ ಅಧಿಕ ಠೇವಣಿ ಸಂಗ್ರಹಿಸಿ ಏಳು ಕೋಟಿಗೂ ಮಿಕ್ಕಿ ವಿವಿಧ ಬಗೆಯ ಸಾಲ ವಿತರಿಸಿದೆ. ಕರೋನಾ ಮಹಾಮಾ–ರಿಯ ಆಪತ್ತಿನಿಂದ ದೇಶದ ಅರ್ಥವ್ಯವಸ್ಥೆಯೇ ಅಡಿಮೇಲಾಗಿದ್ದರೂ ಸಹಕಾರಿಯ ಪ್ರಜ್ಞಾವಂತ ಸದಸ್ಯರು ಪಡೆದಂತಹ ಸಾಲವನ್ನು ಪ್ರಾಮಾಣಿಕವಾಗಿ ಕ್ಲಪ್ತ ಸಮಯದಲ್ಲಿ ಮರುಪಾವತಿಸುವುದರೊಂದಿಗೆ ಕಳೆದ ಸಾಲಿನಲ್ಲಿ ಶೇ. 99.04 ರಷ್ಟರ ಸಾಲ ವಸೂಲಿ ಮಾಡಿರುವುದು ಸದಸ್ಯರ ಪಾಲ್ಗೊಳ್ಳುವಿಕೆಯ ದ್ಯೋತಕವಾಗಿದೆ. ಕೇವಲ ಅಲ್ಪ ಕಾಲಾವಧಿಯಲ್ಲಿ ಪ್ರಜ್ಞಾವಂತ ಸದಸ್ಯರ ಪಾಲ್ಗೊಳ್ಳುವಿಕೆ, ದಕ್ಷ ಆಡಳಿತ ಮಂಡಳಿಯ ಮಾರ್ಗದರ್ಶನ, ನಿಷ್ಠಾವಂತ ಶಿಬಂಧಿಯ ಅವಿಶ್ರಾಂತ ದುಡಿಮೆಯ ಫಲವಾಗಿ ಕಳೆದ ಸಾಲಿನಲ್ಲಿ ಸಹಕಾ–ರಿಯು ರೂ. 22.00 ಲಕ್ಷಕ್ಕೂ ಅಧಿಕ ನಿವ್ವಳ ಲಾಭ ಗಳಿಸಿದೆ. ಪಾರದರ್ಶಕ ಆಡಳಿತ, ಖರ್ಚು ವೆಚ್ಚಗಳ ಮೇಲೆ ಕಡಿವಾಣ, ಸ್ವಯಂ ವಿವರಣಾತ್ಮಕವಾದ ಲೆಕ್ಕ ಪತ್ರಗಳು ಮತ್ತು ಕಡತಗಳ ನಿರ್ವಹಣೆಯನ್ನು ಲೆಕ್ಕ ಪರಿಶೋಧಕರು ಪ್ರಶಂಸಿ "ಅ" ವರ್ಗದ ಆಡಿಟ್ ವರ್ಗೀಕರಣಗೊಳಿಸಿರುವುದು ಉಲ್ಲೇಖಾರ್ಹ ಎಂದರು. ಕಳೆದ ಸಾಲಿನಲ್ಲಿ ಗಳಿಸಿದ ನಿವ್ವಳ ಲಾಭವನ್ನು ನಿಯಮಾನುಸಾರ ವಿಂಗಡಿಸಿ ಸದಸ್ಯರಿಗೆ ಶೇ. 25ರ ಡಿವಿಡೆಂಡ್ ಘೋಷಿಸಲಾಯ್ತು. ಕಳೆದ ಸತತ ಐದು ವರ್ಷಗಳಿಂದ ಸಹಕಾರಿಯು ಶೇ. 25ರ ಡಿವಿಡೆಂಡ್ ವಿತರಿಸುತ್ತಿರುವುದು ಸೌಹಾರ್ದ ಸಹಕಾರಿ ರಂಗದಲ್ಲಿ ಮೊತ್ತ ಮೊದಲಿಗ ಸಹಕಾರಿ ಎನ್ನುವ ಹೆಮ್ಮೆ ಗಳಿಸಿದೆ. ಅಂದಿನ ಸಭೆಯಲ್ಲಿ ಹಾಜರಿದ್ದ ಎಲಾ ಸದಸ್ಯರಿಗೆ ಡಿವಿಡೆಂಡ್ ವಿತರಿಸಲಾಯಿತು.

ಕಳೆದ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ. ಯು.ಸಿ ಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಸದಸ್ಯರ ಮಕ್ಕಳು ಮತ್ತು ಪುರಸ್ಕೃತರಿಗೆ ನಗದು ಬಹುಮಾನ ನೀಡಿ ಪುರಸ್ಕರಿಸಲಾಯಿತು. ಕಳೆದ ಶೈಕ್ಷಣಿಕ ಸಾಲಿನಲ್ಲಿ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಪುರಸ್ಕೃತರಾದ ವಿವೇಕ ಬಾಲಕರ ಪ್ರೌಢ ಶಾಲೆಯ ಅಧ್ಯಾಪಕರೂ ಸಹಕಾರಿಯ ಸ್ಥಾಪಕ ಸದಸ್ಯರೂ ಆದ ಶ್ರೀ ಪ್ರೇಮಾನಂದ ಮತ್ತು ಸಾಹಿತ್ಯ ಕ್ಷೇತ್ರ ಮತ್ತು ರಂಗಭೂಮಿಯಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ನಿವೃತ್ತ ಶಿಕ್ಷಕ ಸಹಕಾರಿಯ ಸದಸ್ಯ ಪಾರಂಪಳ್ಳಿ ನರಸಿಂಹ ಐತಾಳರನ್ನು ಗೌರವಿಸಿ ಅಭಿನಂದಿಸಲಾಯಿತು.

ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕ ಶ್ರೀ. ಜಿ.ಎಸ್. ಸೋಮಯಾ–ಜಿಯವರು ಕಳೆದ ಸಾಲಿನ ವರದಿಯನ್ನು ಮಂಡಿಸಿದರು. ಅಧ್ಯಕ್ಷರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸಹಕಾರಿಯು ಕೇವಲ ಅಲ್ಪ ಕಾಲಾವಧಿಯಲ್ಲಿ ಗಣನೀಯ ಪ್ರಗತಿಗೆ ಕಾರಣರಾದ ಸದಸ್ಯರನ್ನು ಅಭಿನಂದಿಸಿದರು. ಸಹಕಾರಿಗೆ ಸ್ವಂತ ಕಟ್ಟಡ ಹೊಂದುವ ನಿಟ್ಟಿನಲ್ಲಿ ಈಗಾಗಲೇ ನಿವೇಶನ ಖರೀದಿಗೆ ಕಾರ್ಯಪ್ರವತ್ತರಾಗಿದ್ದು ಸದ್ಯದಲ್ಲಿಯೇ ಖರೀದಿಸಿ ಶೀಘ್ರ ಸುಸಜ್ಜಿತ ಕಟ್ಟಡವನ್ನು ಹೊಂದುವ ಆಶಯ ವ್ಯಕ್ತ ಪಡಿಸಿದರು. ಕೊರೋನ ಮಹಾಮಾರಿಯ ಲಾಕ್–ಡೌನ್ ಅವಧಿಯಲ್ಲಿ ಸಾಲಗಳ ಮೇಲಣ ದಂಡನೆ ಬಡ್ಡಿ ಮತ್ತು ಪ್ರಚಲಿತ ವರ್ಷದ ತಗಾದೆಯನ್ನು ಕ್ಲಪ್ತ ಸಮಯದಲ್ಲಿ ಮರುಪಾವತಿಸಿದ ಸಾಲಗಾರರಿಗೆ ಶೇ.2ರಷ್ಟರ ಬಡ್ಡಿ ರಿಯಾಯಿತಿಯನ್ನು ಲಾಕ್–ಡೌನ್ ಹಿಂತೆಗೆದುಕೊಳ್ಳುವ ತನಕ ವಿಸ್ತರಿಸಿದೆ. ಶೇ.99ಕ್ಕೂ ಅಧಿಕ ಸದಸ್ಯರು ಈ ಸವತ್ತನ್ನು ಅನುಭವಿಸಿರುತ್ತಾರೆ.

ಎಲ್ಲಕ್ಕೂ ಮಿಗಿಲಾಗಿ ಸರಕಾರ ಹಾಗೂ ರಾಜ್ಯಮಟ್ಟದ ಸಂಸ್ಥೆಗಳು ಇಂತಹ ಸವಲತ್ತನ್ನು ವಿಸ್ತರಿಸುವುದಕ್ಕೆ ಮುನ್ನ ಸಹಕಾರಿಯು ವಿಸ್ತರಿಸಿರುವುದು ದಾಖಲಾರ್ಹವೆಂದರು. ಒಂದೇ ಸೂರಿನಡಿಯ ವೈವಿದ್ಯಮಯ ಸೇವೆಯನ್ನು ಎಲ್ಲಾ ಸದಸ್ಯರು ಹೊಂದುವಂತೆ ಅಧ್ಯಕ್ಷರು ಕರೆ ನೀಡಿದರು.

ಅಂದಿನ ಸಭೆಯಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಸಂಜೀವ ಜಿ. ನಿರ್ದೇಶಕರುಗಳಾದ ಸರ್ವಶ್ರೀ ಡಾ. ಕೆ. ಕೃಷ್ಣ ಕಾಂಚನ್, ಮಂಜುನಾಥ ಎಸ್. ಕೆ., ವಸಂತ ಶೆಟ್ಟಿ, ಶಂಕರ ಬಂಗೇರ, ಎಚ್. ಮಧುಸೂದನ ಐತಾಳ, ಡಾ.ಸತೀಶ ಪೂಜಾರಿ, ವೈ. ಕೃಷ್ಣಮೂರ್ತಿ ಐತಾಳ, ಶ್ರೀಮತಿ ಶಾಂತಾ ಭಟ್ ಮತ್ತು ಶ್ರೀಮತಿ ನಾಗರತ್ನ ಬ್ಯಾರಿಯವರು ಉಪಸ್ಥಿತರಿದ್ದರು. ನಿರ್ದೇಶಕರಾದ ಶ್ರೀಮತಿ ಶಾಂತಾ ಭಟ್ಟ ವಂದಿಸಿದರು.




**ಬೆಂಗಳೂರು :** ಶ್ರೀ ಯಶಸ್ವಿನಿ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಇದರ 6ನೇ ವಾರ್ಷಿಕ ಸಾಮಾನ್ಯ ಸಭೆಯು ಆಡಳಿತ ಮಂಡಳಿ ಸದಸ್ಯರ ಉಪಸ್ಥಿತಿಯಲ್ಲಿ ನಡೆಯಿತು.



**ಶಿವಮೊಗ್ಗ :** ಕಾಯಕಜ್ಯೋತಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಶಿವಮೊಗ್ಗ ಇದರ ಎರಡನೇ ವಾರ್ಷಿಕ ಮಹಾಸಭೆಯು ಶ್ರೀ ಮತಿ ಚಂದ್ರಕಲಾ ಟಿ. ಈ ಇವರ ಅಧ್ಯಕ್ಷತೆಯಲ್ಲಿ ಸರ್ಕಾರಿ ನೌಕರರ ಸಭಾಭವನದಲ್ಲಿ ನಡೆಯಿತು.



**ಮೈಸೂರು :** ಮೈಸೂರು, ಮಂಡ್ಯ ಮತ್ತು ಕೊಡಗು ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಉಪಸ್ಥಿತಿಯಲ್ಲಿ ನಡೆಯಿತು.



**ಮೈಸೂರು :** ಮೈಸೂರು ಪತ್ತಿನ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಉಪಸ್ಥಿತಿಯಲ್ಲಿ ನಡೆಯಿತು.



**ಮೈಸೂರು :** ಶ್ರೀ ಭುವನೇಶ್ವರಿ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಉಪಸ್ಥಿತಿಯಲ್ಲಿ ನಡೆಯಿತು.



**ಮೈಸೂರು :** ತುಳುಶಿವಳ್ಳಿ ಮಾದಬ್ರಾಹ್ಮಣ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಉಪಸ್ಥಿತಿಯಲ್ಲಿ ನಡೆಯಿತು ಹಾಗೂ ಸಹಕಾರಿಯ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.



**ತುಮಕೂರಿನ :** ತಿಪಟೂರಿನ ಶ್ರೀ ಉದಯರವಿ ಸೌಹಾರ್ದ ಪತ್ತಿನ ಸಹಕಾರಿಯ 20ನೇ ವಾರ್ಷಿಕ ಮಹಾಸಭೆ ದಿನಾಂಕ 20–12–2020ನೇ ಭಾನುವಾರ ಒಕ್ಕಲಿಗರ ಸಮುದಾಯ ಭವನದಲ್ಲಿ ಕೋವಿಡ್ ನಿಯಮಾನುಸಾರ ಸಹಕಾರಿ ಸಂಸ್ಥಾಪಕ ಹಾಗು ಗೌರವಾಧ್ಯಕ್ಷರಾದ ಶ್ರೀ ಸೋಮಣ್ಣನವರೊಡನೆ ಅಧ್ಯಕ್ಷರಾದ ಶ್ರೀ ರಾಜಣ್ಣನವರು ಉದ್ಘಾಟಿಸಿದರು. ಸಹಕಾರಿಯ ನಿರ್ದೇಶಕರು ಹಾಗೂ ಸದಸ್ಯರು ಹಾಜರಿದ್ದರು.



**ಶಿವಮೊಗ್ಗ :** ದಿನಾಂಕ 23–12–2020 ರಂದು ಶ್ರೀ ಭ್ರಾಂತೇಶ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ, ಶಿಕಾರಿಪುರ ತಾ. ಶಿವಮೊಗ್ಗ ಜಿ. ಇದರ 2019–20 ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ಜಿ ಶಿವಮೂರ್ತಿ ಗುಡ್ಡಳ್ಳಿ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು.



**ಶಿವಮೊಗ್ಗ :** ಕೈವಾರ ಶ್ರೀ ಗುರು ಯೋಗಿ ನಾರಾಯಣ ಸೌಹಾರ್ದ ಸಹಕಾರಿ ನಿ. ಬಸವೇಶ್ವರ ವೃತ್ತ ಹಳೆ ನಗರ ಭದ್ರಾವತಿ ಇದರ 6ನೇ ಸಾಮಾನ್ಯ ಸಭೆಯು ಸಹಕಾರಿಯ ಆಡಳಿತ ಮಂಡಳಿ ಸದಸ್ಯರ ಉಪಸ್ಥಿತಿಯಲ್ಲಿ ನಡೆಯಿತು.



**ಕೋಣಂದೂರು :** ದಿನಾಂಕ 20.12.2020 ರಂದು ಮಲೆನಾಡು ವಿವಿದೋದ್ದೇಶ ಸೌಹಾರ್ದ ಸಹಕಾರಿ ನಇ., ಕೋಣಂದುರು ಇದರ 10ನೇ ವಾರ್ಷಿಕ ಸಾಮಾನ್ಯ ಸಭೆಯು ಶ್ರೀ ಸೇವಾ ಮಂದಿರದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರಸಾದ್ ಕೆ.ಆರ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸದರಿ ಸಾಲಿನಲ್ಲಿ ರೂ. 16,87,049/– ನಿವ್ವಳ ಲಾಭ ಗಳಿಸಿದ್ದು ಶೇ.10ರಷ್ಟು ಡಿವಿಡೆಂಟ್ ಘೋಷಿಸಲಾಯಿತು.



**ದಾವಣಗೆರೆ :** ದಿನಾಂಕ 25.12.2020 ರಂದು ಬಣಜಿಗ ಮಹಿಳಾ ಕ್ಷೇಮಾಭಿವೃದ್ಧಿ ಬಹು ಉದ್ದೇಶಿತ ಸೌಹಾರ್ದ ಸಹಕಾರಿ ನಿ., ನ್ಯಾಮತಿ ತಾ, ದಾವಣಗೆರೆ ಜಿಲ್ಲೆ, ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಭಾಗವಹಿಸಿದ್ದರು.



**ಕೋಣಂದೂರು :** ದಿನಾಂಕ 20.12.2020 ರಂದು ಮಲೆನಾಡು ವಿವಿದೋದ್ದೇಶ ಸೌಹಾರ್ದ ಸಹಕಾರಿ ನಇ., ಕೋಣಂದುರು ಇದರ 10ನೇ ವಾರ್ಷಿಕ ಸಾಮಾನ್ಯ ಸಭೆಯು ಶ್ರೀ ಸೇವಾ ಮಂದಿರದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರಸಾದ್ ಕೆ.ಆರ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸದರಿ ಸಾಲಿನಲ್ಲಿ ರೂ. 16,87,049/– ನಿವ್ವಳ ಲಾಭ ಗಳಿಸಿದ್ದು ಶೇ.10ರಷ್ಟು ಡಿವಿಡೆಂಟ್ ಘೋಷಿಸಲಾಯಿತು.



**ದಾವಣಗೆರೆ :** ದಿನಾಂಕ 25.12.2020 ರಂದು ಬಣಜಿಗ ಮಹಿಳಾ ಕ್ಷೇಮಾಭಿವೃದ್ಧಿ ಬಹು ಉದ್ದೇಶಿತ ಸೌಹಾರ್ದ ಸಹಕಾರಿ ನಿ., ನ್ಯಾಮತಿ ತಾ, ದಾವಣಗೆರೆ ಜಿಲ್ಲೆ, ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾ–ರಿಯ ಪ್ರತಿನಿಧಿಯಾಗಿ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಭಾಗವಹಿಸಿದ್ದರು.



ದಿನಾಂಕ 29.12.2020 ರಂದು ದಾವಣಗೆರೆ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜು ರವರು ವೆಜಿಟೆಬಲ್ ಪ್ಲಾಂಟ್ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಭಾಗವಹಿಸಿ ಸಹಕಾರಿಯ ಅಭಿವೃದ್ಧಿಗೆ ಪೂರಕವಾದ ಸಲಹೆ ನೀಡಿದರು.




ಬಾಂಧವ್ಯ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಸಹಕಾರಿಯ ಎಂಟನೇ ವಾರ್ಷಿಕ ಸರ್ವಸದಸ್ಯರ ಸಭೆಯು ದಿನಾಂಕ 13.12.2020ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಸಹಕಾರಿಯ ಆವರಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಮೋಹನದಾಸ ಭಂಡಾರಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಉಪಾಧ್ಯಕ್ಷರಾದ ಶಂಕರ್ ರಾವ್ ಹಾಗೂ ಎಲ್ಲಾ ನಿರ್ದೇಶಕರುಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಸದಸ್ಯರುಗಳನ್ನು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ವಾಸುದೇವರಾವ್ ಅವರು ಸ್ವಾಗತಿಸಿದರು. ಸಭೆಯಲ್ಲಿ ನಿಧನ ಹೊಂದಿಸ ಸದಸ್ಯರುಗಳಿಗೆ ಶ್ರದ್ಧಾಂದಲಿ ಅರ್ಪಿಸಿ ಅವರ ಕುಟುಂಬಸ್ಥರಿಗೆ ಮರಣನಿಧಿಯನ್ನು ವಿತರಿಸಲಾಯಿತು. ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಬಹುಮಾನ ವಿತರಿಸಿ ಸನ್ಮಾನಿಸಲಾಯಿತು. 8 ವರ್ಷಗಳಿಂದ ಲಾಭಾಂಶ ಪಡೆದಿದ್ದಕ್ಕೆ ಸಭೆಯಲ್ಲಿ ವ್ಯಾಪಕ ಪ್ರಶಂಸೆ ವ್ಯಕ್ತಪಡಿಸಿದರು.

## ಕ್ಯಾಲೆಂಡರ್ ಬಿಡುಗಡೆ



**ಬೀದರ :** ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ್ ಇದರ 2021ನೇ ಸಾಲಿನ ಕ್ಯಾಲೆಂಡರ್ ಚಿದಂಬರ ಆಶ್ರಮ ಸಿದ್ದರೋಢ್ ಮಠ್ ಬೀದರ್ ಶ್ರೀಗಳಾದ ಶ್ರೀ ಶ್ರೀ ಶಿವಕುಮಾರ್ ಸ್ವಾಮಿ ಇವರಿಂದ ಬಿಡುಗಡೆ ಗೊಳಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ್ ಶ್ರೀ ಗುರುನಾಥ ಜ್ಯಾಂತಿಕರ್. ಹಿರಿಯ ಸಹಕಾರಿಗಳು ಮುಖ್ಯ ಕಾರ್ಯನಿರ್ವಾಹಕರು ಸಹಕಾರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಚಾಮರಾಜನಗರ :** ದಿನಾಂಕ 24–12–20ರಂದು ನಡೆದ ಶ್ರೀ ಸಿದ್ದಮಲ್ಲೇಶ್ವರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಪೂಜ್ಯ ಶ್ರೀ ಶ್ರೀ ಚನ್ನ ಬಸವ ಸ್ವಾಮೀಜಿಗಳು, ವಿರಕ್ತ ಮಠ ಚಾಮರಾಜನಗರ ಇವರು ವಹಿಸಿದ್ದು, ಸಹಕಾರಿಯ ಕ್ಯಾಲೆಂಡರ್ ಬಿಡುಗಡೆಯನ್ನು ಪೂಜ್ಯ ಶ್ರೀ ಶ್ರೀ ಸರ್ಪಭೂಷಣ ಸ್ವಾಮೀಜಿಗಳು, ಹರವೆ ಮಠ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಹಿರಿಯ ಸಹಕಾರಿ ಧುರೀಣರಾದ ಶ್ರೀ ರಾಜಶೇಖರ ಕೋಡಿಮೋಳೆ ರವರು, ಅ.ಭಾ.ವೀ.ಲಿಂ. ಮಹಾಸಭಾ ಅಧ್ಯಕ್ಷರಾದ ಶ್ರೀ ನಟೇಶ್ ರವರು, ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷರು ಪುಟ್ಟಮಲ್ಲಪ್ಪ, ರೈತ ಸಂಘದ ಸಿದ್ದರಾಜು, ಕ್ಯಾಲೆಂಡರ್ ಪ್ರಯೋಜಕರು ಮಹೇಶ್ MRF, ಅಕ್ಷಯ ಸೌಹಾರ್ದ ಸಹಕಾರಿ ನಿ., ಅಧ್ಯಕ್ಷರಾದ ಶ್ರೀ ವೀರಭದ್ರ ಸ್ವಾಮಿ, ನವ್ಯಕರ್ನಾಟಕ ಸೌಹಾರ್ದ ಸಹಕಾರಿ ನಿ., ಅಧ್ಯಕ್ಷರಾದ ಶ್ರೀ ನಂಜುಂಡ ಸ್ವಾಮಿ ಭಾಗವಹಿಸಿದ್ದರು.ಅಧ್ಯಕ್ಷತೆಯನ್ನು ಸಹಕಾರಿ ಅಧ್ಯಕ್ಷರಾದ ಶ್ರೀ ಬಾಬು, ರಾಮಸಮುದ್ರ ವಹಿಸಿದ್ದರು. ಸಹಕಾರಿ ಉಪಾಧ್ಯಕ್ಷರು, ನಿರ್ದೇಶಕರು ಮತ್ತು ಸಿಇಓ ಹಾಜರಿದ್ದರು.



**ಶಿವಮೊಗ್ಗ:** ತೀರ್ಥಹಳ್ಳಿ ತಾಲ್ಲೂಕು ಶ್ರೀ ವಿಶ್ವಕರ್ಮ ಸೌಹಾರ್ದ ಸಹಕಾರಿ ನಿಯಮಿತ ಈ ಸಹಕಾರಿಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ದಿನಾಂಕ 21-12-2020ರ ಸೋಮವಾರದಂದು ಉದ್ಘಾಟನಾ ಸಮಾರಂಭ ನೆರವೇರಿತು. ತೀರ್ಥಹಳ್ಳಿಯ ಸನ್ಮಾನ್ಯ ಶಾಸಕರು ಹಾಗೂ ಕರ್ನಾಟಕ ರಾಜ್ಯ ಗೃಹಮಂಡಳಿ ಅಧ್ಯಕ್ಷರು ಶ್ರೀ ಆರಗ ಜ್ಞಾನೇಂದ್ರ ನೂತನ ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಿದರು ಹಾಗೂ ಸಂಯುಕ್ತ ಸಹಕಾರಿ ಜಿಲ್ಲಾ ನಿರ್ದೇಶಕರು ಶ್ರೀ ಪ್ರಸನ್ನಕುಮಾರ್ ಕಾರ್ಯಾಲಯದ ಉದ್ಘಾಟನೆಯನ್ನು, ಶ್ರೀ ಬಸವಾನಿ ವಿಜಯದೇವ್ ಸಹಕಾರಿ ರತ್ನ ಪುರಸ್ಕೃತರು ಹಾಗೂ ಅಫೆಕ್ಸ್ ಬ್ಯಾಂಕ್ ನಿರ್ದೇಶಕರು ಭದ್ರತಾ ಕೊಠಡಿ ಉದ್ಘಾಟನೆಯನ್ನು ಶ್ರೀ ಬಾಳೆಬೈಲು ರಾಘವೇಂದ್ರ ಅಧ್ಯಕ್ಷರು ಸರಸ್ವತಿ ಸೌಹಾರ್ದ ಸಹಕಾರಿ ನಿ ತೀರ್ಥಹಳ್ಳಿ ಸಭಾಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದರು. ಸಹಕಾರಿಯ ಅಧ್ಯಕ್ಷರು ಶ್ರೀ ಉಪೇಂದ್ರ ಮೇಲಿನಕುರುವಳ್ಳಿ ಇವರು ಅಧ್ಯಕ್ಷತೆಯನ್ನು ವಹಿಸಿದರು ಹಾಗೂ ಸಹಕಾರಿಯ ನಿರ್ದೇಶಕರಾದ ಶ್ರೀ ನಾಗೇಶ್ ಸಂಕದಹೊಳೆ ಇವರು ಸ್ವಾಗತ ಭಾಷಣ ಮಾಡಿದರು ಹಾಗೂ ಶ್ರೀ ಉಮಾಪತಿ ಎಲ್.ಜಿ ಯವರು ಸಹಕಾರಿಯು ನಡೆದು ಬಂದ ಹಾದಿಯ ಬಗ್ಗೆ ಪ್ರಾಸ್ತವಿಕವಾಗಿ ಮಾತನಾಡಿದರು ಶ್ರೀ ಪ್ರಸನ್ನಕುಮಾರ್ ಸಂಯುಕ್ತ ಸಹಕಾರಿಯ ನಿರ್ದೇಶಕರು ಸಹಕಾರಿಯ ಬೆಳವಣಿಗೆ ಮತ್ತು ಪ್ರಗತಿಯ ಬಗ್ಗೆ ಶ್ಲಾಘಿಸಿದರು ಸಹಕಾರಿಯ ನಿರ್ದೇಶಕರು ಶ್ರೀ ನಾಗಪ್ಪಾಚಾರ್ ಎನ್.ಎಸ್ ಇವರು ವಂದನಾರ್ಪಣೆಯನ್ನು ನೆರವೇರಿಸಿದರು. ಹಾಗೂ ಸಹಕಾರಿಯ ಎಲ್ಲಾ ನಿರ್ದೇಶಕರು ಸಭೆಯಲ್ಲಿ ಹಾಜರಿದ್ದು ಸಭೆಯನ್ನು ಯಶಸ್ವಿಯಾಗಿ ನೆರವೇರಿಸಿದರು.




**ಶಿವಮೊಗ್ಗ** : ಸಾಗರದ ಮಯೂರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನ 18ನೇ ವರ್ಷದ ವಾರ್ಷಿಕ ಮಹಾಸಭೆಯಲ್ಲಿ ಸಂಸ್ಥೆಯ ಅಧ್ಯಕ್ಷರಾದ ಎಂ.ವಿ.ಮೋಹನ ಇವರು ಮಾತನಾಡುತ್ತಾ ಲಾಭವೆಂದರೆ ನಮ್ಮ ಸದಸ್ಯರು ಬೆಳೆಯುವುದೇ ದೊಡ್ಡ ಲಾಭ ಎಂದರು.

ಕೊರೋನ ಪರಿಣಾಮದಿಂದ ವ್ಯವಹಾರ ಕಷ್ಟದಲ್ಲಿದೆ. ಆದರೆ ಹೆದರಬೇಕಾಗಿಲ್ಲ. ಸದಸ್ಯರಲ್ಲಿ ನಂಬಿಕೆ, ಗಟ್ಟಿತನ ಮೊದಲು ಉಳಿಸಿಕೊಂಡು ನಂತರ ಲಾಭದತ್ತ ಯೋಚನೆ ಮಾಡಬೇಕು ಎಂದರು.

2019-20ನೇ ಸಾಲಿನಲ್ಲಿ ಸಂಸ್ಥೆಯು 3144 ಶೇರುದಾರರನ್ನು ಹೊಂದಿದ್ದು ರೂ. 2.65 ಕೋಟಿ ಶೇರು ಬಂಡವಾಳ, ರೂ.6.08 ಕೋಟಿ ನಿಧಿಗಳು, ರೂ.18.57 ಕೋಟಿ ಠೇವಣಿಗಳು, ರೂ.29 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು, ರೂ.23 ಕೋಟಿ ಸಾಲ ವಿತರಿಸಲಾಗಿದೆ. ರೂ. 67.55 ಲಕ್ಷ ನಿವ್ವಳ ಲಾಭ ಗಳಿಸಿರುತ್ತದೆ ಎಂದು ವಿವರಿಸಿದರು. 7% ಡಿವಿಡೆಂಡ್ ಘೋಷಿಸಲಾಯಿತು.

ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀನಿವಾಸಮೂರ್ತಿ ಎಂ.ಎನ್. ಮಾತನಾಡಿ, ಲಾಕ್‌ಡೌನ್ ಸಮಯದಲ್ಲಿ ಅತೀ ಉತ್ತಮ ಗುಣಮಟ್ಟದ ಕಿಟ್‌ಗಳನ್ನು ವಿತರಿಸಲಾಗಿದ್ದು, ಹಿಂದಿನಿಂದಲೂ ನಮ್ಮಲ್ಲಿ ಪ್ರಾಮಾಣಿಕವಾಗಿ ವ್ಯವಹಾರ ನಡೆಸಿದವರಿಗೆ ಈ ಸಂಕಷ್ಟದ ಸಮಯದಲ್ಲಿ ಅನುಚಿತವಾಗಿ ವರ್ತಿಸದೆ ನಿಮ್ಮೊಂದಿಗೆ ನಾವಿದ್ದೇವೆ ಎಂಬ ಧೈರ್ಯ ನೀಡಲಾಗಿದೆ ಎಂದರು.

ವೇದಿಕೆಯಲ್ಲಿ ಲೆಕ್ಕಪರಿಶೋಧಕ ಬಿ.ವಿ.ರವೀಂದ್ರನಾಥ್, ಉಪಾಧ್ಯಕ್ಷ ಶ್ರೀಪಾದ ರಾವ್ ಎಂ, ಅಧ್ಯಕ್ಷ ಎಂ.ವಿ ಮೋಹನ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀನಿವಾಸಮೂರ್ತಿ ಎಂ.ಎನ್. ಉಪಸ್ಥಿತರಿದ್ದರು.

ಸಭೆಯಲ್ಲಿ ಸಂಸ್ಥೆಯ ಎಲ್ಲಾ ನಿರ್ದೇಶಕರು, ಸಲಹಾ ಸಮಿತಿ ಸದಸ್ಯರು, ಸಿಬ್ಬಂದಿ ವರ್ಗದವರು ಹಾಜರಿದ್ದರು.

ಎಂ.ಬಿ.ಸುರೇಶ ಸ್ವಾಗತ, ನಿರೂಪಣೆ ಮಾಡಿ, ಕು.ರಚನಾ ಮತ್ತು ಕು. ಕೀರ್ತನಾರಿಂದ ಪ್ರಾರ್ಥಿಸಿ, ಸುಧೀಂದ್ರ ಕೆ ಹೆಚ್. ಇವರು ಸರ್ವರಿಗೂ ವಂದಿಸಿದರು.



**ಕೊಪ್ಪಳ** : ದಿನಾಂಕ 31.12.2020 ರಂದು ಕನಕದಾಸ ಪತ್ತಿನ ಸೌಹಾರ್ದ ಸಹಕಾರಿ ನಿ, ಹನಮಸಾಗರ 2020-21 ರಿಂದ ಮುಂದಿನ ಐದು ವರ್ಷಗಳ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಶ್ರೀ ಹನಮಂತಪ್ಪ ನೀಲಪ್ಪ ಬಿಂಗಿ, ಉಪಾಧ್ಯಕ್ಷರಾಗಿ ನಾಗರಾಜ ಸೋಮಣ್ಣ ಹಕ್ಕಿ ಇವರನ್ನು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.



**ಬೆಳಗಾವಿ :** ಪ್ಯಾಟಸನ್ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಇದರ 6ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 19.12.2020 ರಂದು ಸಹಕಾರಿಯ ಪ್ರಧಾನ ಕರ್ಛೇರಿಯಲ್ಲಿ ಅಧ್ಯಕ್ಷರಾದ ಶ್ರೀ ಅನೀಲ ಪಾಟೀಲ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ವಾರ್ಷಿಕ ಸಾಮಾನ್ಯ ಸಭೆಯ ನಿಮಿತ್ಯ ರಕ್ತದಾನ ಶಿಬಿರವನ್ನು ಏರ್ಪಡಿಸಲಾಯಿತು. ರಕ್ತದಾನ ಶಿಬಿರದಲ್ಲಿ ಸುಮಾರು 150 ಕ್ಕೂ ಹೆಚ್ಚು ಜನ ಪಾಲ್ಗೊಂಡು ಸುಮಾರು 65 ಜನ ರಕ್ತದಾನ ಮಾಡಿದರು. ರಕ್ತದಾನ ಮಾಡಿದ ಶಿಬಿರಾರ್ಥಿಗಳಿಗೆ ಪ್ರಮಾನ ಪತ್ರ ನೀಡಲಾಯಿತು. ಈ ಸಂದರ್ಭದಲ್ಲಿ ಸಹಕಾ–ರಿಯ ನಿರ್ದೇಸಕರು, ಸರ್ವಸದಸ್ಯರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಶಶಿಕಾಂತ ಎಂ ಕಬ್ಬೂರಿಯವರು ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡು ಸರ್ವಸದಸ್ಯರಿಗೆ ಹಾಗೂ ಸಿಬ್ಬಂದಿಯವರಿಗೆ ಮತ್ತು ಕೆ.ಎಲ್.ಇ ವೈದ್ಯರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.




**ಮೈಸೂರು :** ಮೈಸೂರು ಕುರುಹಿನಶೆಟ್ಟಿ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಆಡಳಿತ ಮಂಡಳಿ ಸದಸ್ಯರ ಉಪಸ್ಥಿತಿಯಲ್ಲಿ ನಡೆಯಿತು.




**ಮೈಸೂರು :** ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ವಾಹನ ಮಾಲೀಕರ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಆಡಳಿತ ಮಂಡಳಿ ಸದಸ್ಯರ ಉಪಸ್ಥಿತಿಯಲ್ಲಿ ನಡೆಯಿತು.



**ಕೊಪ್ಪಳ :** ಸನ್ 2019–20 ನೇ ಸಾಲಿನ 8ನೇ ವಾರ್ಷಿಕ ಮಹಾಸಭೆಯು ದಿನಾಂಕ 29–11–2020 ರಂದು ರವಿವಾರ ಬೆಳಗ್ಗೆ 10:30 ಗಂಟೆಗೆ ಸೌಭಾಗ್ಯಲಕ್ಷ್ಮೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,ಕೊಪ್ಪಳ ಸಹಕಾರಿಯ ನೂತನ ಕಟ್ಟಡದ " ಸೌಭಾಗ್ಯಲಕ್ಷ್ಮೀ ಸಂಕೀರ್ಣದಲ್ಲಿ " ನೆರವೇರಿಸಲಾಯಿತು. ಮೊದಲಿಗೆ ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರನ್ನು ಸಹಕಾರಿಯ ಉಪಾಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಸುಂಕದ ರವರು ಹೃತಪೂರ್ವಕವಾಗಿ ಸ್ವಾಗತಿಸಿದರು.ನಂತರ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಪ್ರಾಣೇಶರಾವ್ ಎಲ್ ದೇಸಾಯಿರವರು ಸುಧೀರ್ಘವಾಗಿ ವಾರ್ಷಿಕ ವರದಿಯನ್ನು ಮಂಡಿಸಿ ವಿಷಯ ಸೂಚಿಗನುಗುಣವಾಗಿ ವಿಷಯ ಪ್ರಸ್ತಾಪಿಸಿ ಸದಸ್ಯರಿಂದ ಅನುಮೋದನೆಯನ್ನು ಪಡೆಯಲಾಯಿತು.ಕೊನೆಯದಾಗಿ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಶಿಲ್ಪಾ ಸಿ ತಾಲೇಡಾ ರವರು ಮಹಾ ಸಭೆಯನ್ನು ಯಶ್ವಸಿಗೊಳಿಸಿದ ಎಲ್ಲಾ ಸದಸ್ಯರಿಗೂ, ಸಿಬ್ಬಂದಿ ವರ್ಗದವರಿಗೂ ಮತ್ತು ಪಿಗ್ಮಿ ಸಂಗ್ರಾಹಕರಿಗೆ ವಂದಿಸಿದರು.



**ಕೊಪ್ಪಳ :** ಶ್ರೀ ಸುವರ್ಣಗಿರಿ ಸೌಹಾರ್ದ ಪತ್ತಿನ ಸಹಕಾರಿ ನಿ.,ಕನಕಗಿರಿ ಸಹಕಾರಿಯ ಹೊಸ ವರ್ಷದ 2021 ಸಹಕಾರಿ ಕ್ಯಾಲೆಂಡರ್ ಅನ್ನು ಸಹಕಾ–ರಿಯ ಅಧ್ಯಕ್ಷರಾದ ಶ್ರೀ ಬಸವರಾಜ ಗುಗ್ಗಳಶೆಟ್ಟರ್ ಅನಾರವಣಗೊಳಿಸಿದರು. ಈ ಸಂದರ್ಭದಲ್ಲಿ ಊರಿನ ಮುಖಂಡರಾದ ಶ್ರೀ ಕೆ.ಗಂಗಾಧರಸ್ವಾಮಿ, ನಿರ್ದೇಶಕರಾದ ಶ್ರೀ ವಿರೇಶ ಸಮಗಂಡಿ, ಶ್ರೀ ಬಿ.ವಿ.ಜೋಷಿ, ಶ್ರೀ ಕೆ.ಹೆಚ್ ಕುಲಕರ್ಣಿ, ಶ್ರೀ ಕೀರ್ತಿಕುಮಾರ ಸೋನಿ,ಶ್ರೀ ಹನುಮಂತಪ್ಪ ಹುನಗುಂದ, ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವೀರಭದ್ರಗೌಡ ಮಾಲಿಪಾಟೀಲ್ ಹಾಗು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಕೊಪ್ಪಳ** : ದಿನಾಂಕ 25-12-2020 ರಂದು ಬೆಳಗ್ಗೆ 11:00 ಗಂಟೆಗೆ ಸೌಭಾಗ್ಯಲಕ್ಷ್ಮೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯ ವತಿಯಿಂದ "ಕೊಪ್ಪಳ ತಾಲೂಕು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರಿಗಾಗಿ ತರಬೇತಿ ಕಾರ್ಯಗಾರ, ಸಾಧಕರಿಗೆ ಸನ್ಮಾನ ಮತ್ತು ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿತ್ತು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಪ್ರಾಣೇಶರಾವ್ ದೇಸಾಯಿ ರವರು ವಹಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಸಕರಾದ ಶ್ರೀ ಜಿ.ಶ್ರೀಧರ ರವರು ವಹಿಸಿದರು. ಸಹಕಾರಿಯ ನೂತನ ವರ್ಷ 2021 ಸಾಲಿನ ಕ್ಯಾಲೆಂಡರ್ ಅನ್ನು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ರವರು ಅನಾವರಣಗೊಳಿಸಿದರು.ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ.ಎಲ್.ಹೆಚ್, ಸೌಭಾಗ್ಯಲಕ್ಷ್ಮೀ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಸುಂಕದ್, ಕಲಬುರಗಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ॥ ಶ್ರೀ ಶಶಿಶೇಖರ ರೆಡ್ಡಿ, ಗಂಗಾವತಿ ಸಮೃದ್ಧಿ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಘವೇಂದ್ರ ರಾವ್ ಮಂಗಳೂರು,ಶ್ರೀ ಚನ್ನಬಸವ ಸ್ವಾಮಿ ಸೌಹಾರ್ದ ಸಹಕಾರಿ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸಿ.ಜಿ.ಜವಳಿ, ಅಣ್ಣ ಬಸವಣ್ಣ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಎ.ಕೆ.ಮಹೇಶಕುಮಾರ, ಕರ್ನಾಟಕ ಗ್ರಾಮೀಣ ಬ್ಯಾಂಕಿನ ಹಿರಿಯ ವ್ಯವಸ್ಥಾಪಕರಾದ ಶ್ರೀ ಬೊಮ್ಮಣ್ಣ ಅಕ್ಕಸಾಲಿ, ಪಿ.ಎಲ್.ಡಿ ಬ್ಯಾಂಕಿನ ಮಾಜಿ ಅಧ್ಯಕ್ಷರು ಹಾಗು ಕರ್ನಾಟಕ ತೋಟಗಾರಿಕೆ ಒಕ್ಕೂಟದ ನಿರ್ದೇಶಕರಾದ ಶ್ರೀ ಎಂ.ವಿ.ಪಾಟೀಲ, "2020-21 ನೇ ಸಾಲಿನ ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃರು ಮತ್ತು ಜಿಲ್ಲಾ ಸಹಕಾರಿ ಯುನಿಯನ್‌ನ ಉಪಾಧ್ಯಕ್ಷರಾದ ಶ್ರೀ ತೋಟಪ್ಪ ಹೆಚ್ ಕಾಮನೂರು, ಶ್ರೀ ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ವಿರೇಶ ಎನ್ ಹತ್ತಿ, ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿ, ಜಿಲ್ಲಾ ಸಂಯೋಜಕರಾದ ಪವನ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಾಧಕರಾದ ಶ್ರೀ ಜಿ.ಶ್ರೀಧರ್, ಶ್ರೀ ಎಂ.ವಿ.ಪಾಟೀಲ್, ಶ್ರೀ ತೋಟಪ್ಪ ಹೆಚ್ ಕಾಮನೂರು, ಶ್ರೀ ವಿರೇಶ ಎನ್ ಹತ್ತಿ ರವರನ್ನು ಸನ್ಮಾನಿಸಲಾಯಿತು,ಕಾರ್ಯಕ್ರಮದಲ್ಲಿ ಶ್ರೀ ಮಾತೋಶ್ರೀ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಮುದ್ದಪ್ಪ.ಜಿ, ಗಂಗಾ ಯಮುನಾ ಪತ್ತಿನ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಶಶಿಧರ್, ಶ್ರೀ ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಹನುಮರೆಡ್ಡಿ, ಕೋಪಣ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಗುರುಪ್ರಸಾದ, ಶ್ರೀ ಗುರುಸೃಷ್ಟಿಕರ್ತ ಪತ್ತಿನ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಶಿವಕುಮಾರ ಏಣಗಿ, ತತ್ವಮಸಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ದೇವರಾಜ, ಶ್ರೀ ಗುರುಸಾಯಿ ಕರುಣಾಮಯಿ ಪತ್ತಿನ ಸೌಹಾರ್ದ ಸಹಕಾರಿ,ಶ್ರೀ ಉದಯೋನ್ಮುಖ ಪತ್ತಿನ ಸೌಹಾರ್ದ ಸಹಕಾರಿ, ಶ್ರೀ ಗಾನಯೋಗಿ ಪತ್ತಿನ ಸೌಹಾರ್ದ ಸಹಕಾರಿ ಮತ್ತು ಇನ್ನು ಅನೇಕ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶ್ವಸಿಗೊಳಿಸಿದರು.



**ಉಡುಪಿ** : ಕೋವಿಡ್ 19 ಸಂದರ್ಭದಲ್ಲಿ ಕರಾವಳಿಯ ಮಹಿಳಾ ಮೀನುಮಾರಾಟಗಾರರು ಒಂದೆಡೆ ಮೀನು ವ್ಯಾಪಾರ ವಹಿವಾಟಿಲ್ಲದೆ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದು, ಮತ್ತೊಂದೆಡೆ ಕೋವಿಡ್ 19 ಕಾರಣದಿಂದ ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಇನ್ನಿತರ ಆರ್ಥಿಕ ಸಂಸ್ಥೆಗಳು ಮಹಿಳೆಯರಿಗೆ ಮೀನುವ್ಯಾಪಾರಕ್ಕೆ ಸಾಲಸೌಲಭ್ಯ ಒದಗಿಸದ ಹಿನ್ನಲೆಯಲ್ಲಿ ಉಡುಪಿ ಮೀನುಮಾರಾಟಗಾರರ ವಿವಿಧೋದ್ದೇಶ ಸೌಹಾರ್ದ ಸಹಕಾರಿ (ನಿ) ಸಂಸ್ಥೆಯು ರಾಜ್ಯದಲ್ಲೇ ವಿನೂತನ ನೇರ ಸಾಲ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಮೀನು ವ್ಯಾಪಾರ ನಿರತ ಮಹಿಳಾ ಸದಸ್ಯರಿಗೆ ಕನಿಷ್ಠ ರೂ.25 ಸಾವಿರದಿಂದ ಗರಿಷ್ಠ ರೂ.50ಸಾವಿರ ತನಕ ನೇರ ಸಾಲ ಮಂಜೂರು ಮಾಡಿದೆ. ವ್ಯಾಪಾರ ನಿರತ ಮಹಿಳೆಯರು ಮೀಟರ್ ಬಡ್ಡಿಗಳಲ್ಲಿ ಸಾಲ ಪಡೆದು ಸಾಲದ ಶೂಲಕ್ಕೆ ಬೀಳುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಉಡುಪಿ ಜಿಲ್ಲೆಯ 30ಕ್ಕೂ ಅಧಿಕ ಮೀನು ಮಾರುಕಟ್ಟೆಗಳಿಗೆ ಸಹಕಾರಿಯ ಸಿಬಂದಿಗಳು ತೆರಳಿ ನೇರ ಸಾಲ ವಿತರಣೆ ಮಾಡಲಾಗುತ್ತಿದೆ. 400ಕ್ಕೂ ಅಧಿಕ ಸದಸ್ಯರಿಗೆ ಒಟ್ಟು 1.50ಕೋಟಿ ಸಾಲವನ್ನು ನೇರವಾಗಿ ವ್ಯಾಪಾರ ಸ್ಥಳಕ್ಕೆ ಹೋಗಿ ವಿತರಿಸುವ ಈ ವಿನೂತನ ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಉಡುಪಿ ನಗರ ಮೀನುಮಾರುಕಟ್ಟೆ, ಬ್ರಹ್ಮಾವರ ಮೀನುಮಾರುಕಟ್ಟೆ, ಶಿರ್ವ ಮೀನು ಮಾರುಕಟ್ಟೆ, ಕಟಪಾಡಿ ಮೀನು

ಮಾರುಕಟ್ಟೆ, ಕಾಪು ಮೀನುಮಾರುಕಟ್ಟೆ, ಮಲ್ಪೆ ಬಂದರು, ಸಾಸ್ತಾನ ಮೀನುಮಾರುಕಟ್ಟೆ, ಆದಿ ಉಡುಪಿ ಮೀನುಮಾರುಕಟ್ಟೆ, ಕೆಮ್ಮಣ್ಣು ಮೀನುಮಾರುಕಟ್ಟೆ, ದೊಡ್ಡಣಗುಡ್ಡೆ, ಕುತ್ಪಾಡಿ ಮೀನು ಮಾರುಕಟ್ಟೆ ಸೇರಿದಂತೆ ವಿವಿಧ ಮಾರುಕಟ್ಟೆಗಳಿಗೆ ತೆರಳಿ ನೇರ ಸಾಲ ವಿತರಣೆಗೆ ಕ್ರಮ ಕೈಗೊಳ್ಳಲಾಗಿದೆ. ವಿವಿಧ ಮೀನುಮಾರುಕಟ್ಟೆಯ ಮಹಿಳಾ ಸದಸ್ಯರಿಗೆ ಉಡುಪಿ ಮೀನುಮಾರಾಟಗಾರರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಿಂದ ಕಡಿಮೆ ಬಡ್ಡಿಯಲ್ಲಿ ನೇರಸಾಲ ವಿತರಣೆ ಮಾಡಿ ಪ್ರೋತ್ಸಾಹಿಸಲಾಗುತ್ತಿದೆ. ಕೋವಿಡ್ 19 ಸಂಕಷ್ಟ ಸಂದರ್ಭದಲ್ಲಿ ಮೀನುಗಾರ ಮಹಿಳೆಯರಿಗೆ ಈ ಹೊಸ ಯೋಜನೆ ವರದಾನವೆನಿಸಿದೆ.

ಯಾರಿಗೆ ಈ ಯೋಜನೆ: ಈ ಯೋಜನೆಯಡಿ ಸಾಲ ಪಡೆಯುವವರು ಸಹಕಾರಿ ಸಂಘದ ಎ–ದರ್ಜೆ ಸದಸ್ಯರಾಗಿದ್ದು,ದಿನನಿಧಿ ಅಥವಾ ಮಾಸಿಕ ನಿಧಿ ಖಾತೆ ಹೊಂದಿರಬೇಕು. ಉಡುಪಿ ಜಿಲ್ಲೆಯ ಮೀನುಮಾರುಕಟ್ಟೆಗಳಲ್ಲಿ ಮೀನುವ್ಯಾಪಾರ ನಿರತರಾಗಿರುವುದು ಕಡ್ಡಾಯವಾಗಿದ್ದು, ಬೇಡಿಕೆ ಸಲ್ಲಿಸಿದ ಎಲ್ಲಾ ಸದಸ್ಯರಿಗೆ ಆಡಳಿತಮಂಡಳಿ ಅನುಮತಿ ಮೇರೆಗೆ ಕನಿಷ್ಠ ದಾಖಲೆಗಳನ್ನು ಪಡೆದು ಸಾಲ ವಿತರಿಸಲಾಗುತ್ತದೆ. ವ್ಯಾಪಾರಸ್ಥಳಕ್ಕೆ ಬಂದು ಸಾಲ ವಿತರಣೆ: ಸಹಕಾರಿಯ ಸಿಬಂದಿಗಳು ಮಹಿಳೆಯರು ಮೀನುವ್ಯಾಪಾರ ನಡೆಸುವ ಸ್ಥಳದಲ್ಲಿ ನೇರವಾಗಿ ಬಂದು ಸಾಲದ ಅರ್ಜಿಯನ್ನು ಸ್ವೀಕರಿಸಿ, ಜಾಮೀನು ಪಡೆದು ನಿಗದಿತ ಸೇವಾ ಶುಲ್ಕದೊಂದಿಗೆ ಅಲ್ಲೇ ಸಾಲದ ಹಣವನ್ನು ಬಟವಾಡೆ ಮಾಡುವರು.

ಪ್ರತೀವಾರ ಕಂತು ಪಾವತಿ: ಸಾಲ ಪಡೆದುಕೊಂಡ ಸದಸ್ಯರು ಪ್ರತೀ ವಾರಕ್ಕೆ ರೂ.1000ರಂತೆ ಒಟ್ಟು 54 ವಾರಗಳ ಕಾಲ ಕಂತುಗಳನ್ನು ಪಾವತಿಸುವುದು. ವಾರಕ್ಕೊಮ್ಮೆ ನಿಗದಿ ಪಡಿಸಿದ ದಿನಾಂಕದಂದು ವ್ಯಾಪಾರ ಸ್ಥಳಕ್ಕೆ ಸಹಕಾರಿಯ ಸಿಬಂದಿಗಳು ಬಂದು ಸಾಲದ ಕಂತು ವಸೂಲಿ ಮಾಡುವರು.

ಮೆಷಿನ್ ಮೂಲಕ ರಶೀದಿ: ಸಾಲದ ಕಂತು ವಸೂಲಿ ಮಾಡಿದ ಸಿಬಂದಿಗಳು ಮೆಷಿನ್ ಮೂಲಕ ಪಾವತಿ ಸ್ಥಳದಲ್ಲೇ ರಶೀದಿ ನೀಡುವರು.

ಪಾಸ್ ಪುಸ್ತಕ: ಸಾಲ ಪಡೆಕೊಂಡ ಸದಸ್ಯರಿಗೆ ಸಾಲದ ಖಾತೆಯ ಚಿಕ್ಕ ಪುಸ್ತಕವನ್ನೂ ನೀಡಲಾಗುವುದು. ಯಾವುದೇ ಸಂದರ್ಭದಲ್ಲಿ ಸಾಲಗಾರ ಸದಸ್ಯರು ಸಹಕಾರಿಯ ಕಛೇರಿಗೆ ಬಂದು ಸಾಲಕಟ್ಟಬೇಕಾದ ಅವಶ್ಯಕತೆ ಇರುವುದಿಲ್ಲ. ನೇರಸಾಲವನ್ನು ಪಡೆದವರು 54ವಾರಗಳಲ್ಲಿ ಸಾಲವನ್ನು ಯಥಾವತ್ತಾಗಿ ಮರುಪಾವತಿಸಿದ್ದಲ್ಲಿ ಮತ್ತೊಮ್ಮೆ ಸಾಲ ಪಡೆಯುವ ಅವಕಾಶವಿದೆ. ನೇರವಾಗಿ ವ್ಯಾಪಾರ ಸ್ಥಳದಲ್ಲೇ ಕನಿಷ್ಠ ದಾಖಲಾತಿಯೊಂದಿಗೆ ಸಾಲ ವಿತರಣೆ ಮಾಡುವುದರಿಂದ ಸದಸ್ಯರಿಗೂ ಅನುಕೂಲಕರವಾಗಿದೆ. ಸಹಕಾರಿಯ ಹೆಚ್ಚಿನ ಸದಸ್ಯರು ನೇರ ಸಾಲ ಯೋಜನೆಗೆ ಪ್ರತಿನಿತ್ಯ ಬೇಡಿಕೆ ಸಲ್ಲಿಸುತ್ತಿರುವುದು ಈ ಯೋಜನೆಯ ಯಶಸ್ವಿಗೆ ಕಾರಣವಾಗಿದೆ.




**ಹಾನಗಲ್ಲ** : ದಿನಾಂಕ 21/12/2020 ನೇ ಸೋಮವಾರ ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿಯ 18ನೇ ವಾರ್ಷಿಕ ಸಾಮಾನ್ಯ ಸಭೆಯು ಹಾನಗಲ್ಲಿನ ಅಂಬೇಡ್ಕರ ಭವನದ "ಗ್ರಾಮದೇವಿ ಸಭಾಭವನ" ದಲ್ಲಿ ಸಂಜೆ 4.00 ಘಂಟೆಗೆ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ: ಎಂ.ಬಿ.ಕಲಾಲ್ ಇವರ ಅಧ್ಯಕ್ಷತೆಯಲ್ಲಿ ಜರುಗಿರುತ್ತದೆ. ಸಂಸ್ಥೆಯು ಸನ್ 2019–20 ನೇ ಸಾಲಿನಲ್ಲಿ ರೂ. 18,29,987/– ಗಳ ನಿವ್ವಳ ಲಾಭ ಗಳಿಸಿರುತ್ತದೆ.

ಇದೆ ವೇಳೆ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ವಿಭಾಗದಲ್ಲಿ ಹೆಚ್ಚಿನ ಅಂಕ ಪಡೆದಂತಹ ಸದಸ್ಯರ ಮಕ್ಕಳಿಗೆ ಪ್ರಥಮ, ದ್ವಿತಿಯ ಹಾಗೂ ತೃತೀಯ ಪ್ರತಿಭಾ ಪುರಸ್ಕಾರಗಳನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಬಿ.ಕಲಾಲ್ ಮತ್ತು ಉಪಾಧ್ಯಕ್ಷರಾದ ಶ್ರೀ ಬಿ.ಎಸ್.ಅಕ್ಕಿವಳ್ಳಿ ಇವರ ಮೂಲಕ ವಿತರಿಸಲಾಯಿತು.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ,



ಶ್ರೀ ಭಾಸ್ಕರ್ ಕಾಮತ್
ಅಧ್ಯಕ್ಷರು



ಶ್ರೀ ಮಧುಸೂದನ ನಾಯಕ್
ಉಪಾಧ್ಯಕ್ಷರು

### ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು



ಶ್ರೀ. ಟಿ.ಹೆಚ್.ಕರಿಯಪ್ಪ
ಅಧ್ಯಕ್ಷರು



ಶ್ರೀ. ಎಸ್.ಟಿ.ಶ್ರೀನಿವಾಸನ್
ಉಪಾಧ್ಯಕ್ಷರು

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ




**ಚಾಮರಾಜನಗರ :** ಜನಪರ ಸೌಹಾರ್ದ ಕ್ರೆಡಿಟ್ ಕೋ–ಆಪ್ ಲಿ., ಚಾಮರಾಜನಗರ ಸಹಕಾರಿಯ ಅಧ್ಯಕ್ಷರಾದ ಶ್ರೀ ಪಿ. ರಂಗಸ್ವಾಮಿ ಕಛೇರಿಯಲ್ಲಿ "ಸಹಕಾರಿ ದಿನಾಚರಣೆ" ಅಂಗವಾಗಿ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ಎಲ್. ಉಪೇಂದ್ರ ರವರು ಮತ್ತು ಸಿಇಓ ಶ್ರೀ ಲಿಂಗರಾಜು ಹಾಜರಿದ್ದರು.



**ಚಾಮರಾಜನಗರ :** ಸಂಗಮ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ .ಸಿ.ಆರ್ ರವರು ಕಛೇರಿಯ ಆವರಣದಲ್ಲಿ "ಸಹಕಾರಿ ದಿನಾಚರಣೆ" ಅಂಗವಾಗಿ ಧ್ವಜಾರೋಹಣ ನೆರವೇರಿಸಿ ನೂತನ ವರ್ಷದ ಸಹಕಾರಿ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು. ಆಡಳಿತ ಮಂಡಳಿ ಸದಸ್ಯರು ಮತ್ತು ಸಿಇಓ ಕು ರಮ್ಯ, ಸಿಬ್ಬಂದಿಗಳು ಹಾಜರಿದ್ದರು.



**ಮಂಡ್ಯ :** ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ 2019–20ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಉದ್ಘಾಟನೆಯನ್ನು ಅಧ್ಯಕ್ಷರಾದ ಶ್ರೀ ನಾಗರಾಜ ರವರು ನೆರವೇರಿಸಿದರು. ಇದೇ ಸಂದರ್ಭದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಸಲಾಯಿತು. ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಇಓ ಹಾಜರಿದ್ದರು.



**ಚಾಮರಾಜನಗರ :** ನವ್ಯ ಕರ್ನಾಟಕ ವಿವಿದ್ದೊದ್ದೇಶ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ದಂತ ವೈದ್ಯರಾದ ಶ್ರೀ ಅನಿಲ್ ಕುಮಾರ್ ರವರು ಕಛೇರಿಯ ಆವರಣದಲ್ಲಿ "ಸಹಕಾರಿ ದಿನಾಚರಣೆ" ಅಂಗವಾಗಿ ಧ್ವಜಾರೋಹಣ ನೆರವೇರಿಸಿ ನೂತನ ವರ್ಷದ ಸಹಕಾರಿ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ನಂಜುಂಡಸ್ವಾಮಿರವರು ಉಪಾಧ್ಯಕ್ಷರಾದ ಶ್ರೀ ಮಂಜು, ಹರವೆ ರವರು ಮತ್ತು ಆಡಳಿತ ಮಂಡಳಿ ಸದಸ್ಯರು ಮತ್ತು ಸಿಇಓ ಶ್ರೀ ಶಿವಕುಮಾರ್, ಸಿಬ್ಬಂದಿಗಳು ಹಾಗೂ ಪಿಗ್ಮಿ ಸಂಗ್ರಹಕಾರರು ಹಾಜರಿದ್ದರು.




**ಚಾಮರಾಜನಗರ :** ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ಅಧ್ಯಕ್ಷರಾದ ಶ್ರೀ ಎಸ್. ಬಾಲಸುಬ್ರಹ್ಮಣ್ಯ ರವರು ಕಛೇರಿಯಲ್ಲಿ "ಸಹಕಾರಿ ದಿನಾಚರಣೆ" ಅಂಗವಾಗಿ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಮತ್ತು ಸಿಇಓ ಶ್ರೀ ಸಂಕೀರ್ತನ್ ಹಾಜರಿದ್ದರು.




**ಮಂಡ್ಯ :** ಶ್ರೀ ಎಸ್.ಡಿ ಮಾಸ್ತಮ್ಮ ಸೌಹಾರ್ದ ಸಹಕಾರಿ ನಿ., ಮದ್ದೂರು ಇದರ 2019–20ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಉದ್ಘಾಟನೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಸ್ವಾಮಿ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಇಓ ಶ್ರೀಮತಿ ಲಕ್ಷ್ಮೀ ಹಾಜರಿದ್ದರು.



**ಚಾಮರಾಜನಗರ :** ಶ್ರೀ ಮದ್ದಾನೇಶ್ವರ ಮಹಿಳಾ ಸೌಹಾರ್ದ ಸಹಕಾರಿ ನಿ., ಗುಂಡ್ಲುಪೇಟೆ ಇದರ ಅಧ್ಯಕ್ಷರು ಕಛೇರಿಯಲ್ಲಿ "ಸಹಕಾರಿ ದಿನಾಚರಣೆ" ಅಂಗವಾಗಿ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಇಓ ಕು. ಮಾನಸ ಹಾಜರಿದ್ದರು.



**ಚಾಮರಾಜನಗರ :** ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ-ಆಪ್ ಲಿ., ಚಾಮರಾಜನಗರ ಇದರ ಅಧ್ಯಕ್ಷರಾದ ಶ್ರೀ ಮಹೇಶ್ ರವರು ಕಛೇರಿ ಆವರಣದಲ್ಲಿ "ಸಹಕಾರಿ ದಿನಾಚರಣೆ" ಅಂಗವಾಗಿ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ಮುರಳಿ ರವರು ಮತ್ತು ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಇಓ ಕು. ರಶ್ಮಿ ಮತ್ತು ಸಿಬ್ಬಂದಿ ಮಂದಾರ ಹಾಜರಿದ್ದರು.



**ಚಾಮರಾಜನಗರ :** ರೇಣಾ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ಅಧ್ಯಕ್ಷರಾದ ಶ್ರೀ ಪ್ರಕಾಶ್ ಕೆ.ಜೆ ರವರು ಕಛೇರಿಯಲ್ಲಿ "ಸಹಕಾರಿ ದಿನಾಚರಣೆ" ಅಂಗವಾಗಿ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ರಾಜಣ್ಣ ರವರು ಮತ್ತು ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಇಓ ಶ್ರೀ ಪದ್ಮನಾಭ್ ಹಾಜರಿದ್ದರು.

**ಮಂಡ್ಯ :** ಮಂಡ್ಯ ವರ್ತಕರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಕಛೇರಿಯಲ್ಲಿ "ಸಹಕಾರಿ ದಿನಾಚರಣೆ" ಅಂಗವಾಗಿ ಧ್ವಜಾರೋಹಣ ನೆರವೇರಿಸಲಾಯಿತು. ಆಡಳಿತ ಮಂಡಳಿ ಸದಸ್ಯರು ಮತ್ತು ಸಿಇಓ ಶ್ರೀ ನಾಗರಾಜು ಹಾಜರಿದ್ದರು.



**ತುಮಕೂರು :** ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಅಂಗವಾಗಿ ತುಮಕೂರು ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರು ಹಾಗೂ ನಿರ್ದೇಶಕರು ಮತ್ತು ಶಿವಾಜಿ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರೊಂದಿಗೆ ಧ್ವಜಾರೋಹಣ ನೆರವೇರಿಸಲಾಯಿತು.



**ಕೋಲಾರ :** ಕೋಲಾರ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಅಂಗವಾಗಿ ಧ್ವಜಾರೋಹಣ ನೆರವೇರಿಸಲಾಯಿತು.



**ಕೊಪ್ಪಳ :** ಶ್ರೀ ಗುರು ಸೃಷ್ಟಿಕರ್ತ ಪತ್ತಿನ ಸೌಹಾರ್ದ ಸಹಕಾರಿ ನಿ., ಗಿಣಿಗೇರಾ, ಕೊಪ್ಪಳ ಸಹಕಾರಿಯ ವತಿಯಿಂದ ಸಹಕಾರಿ ದಿನಾಚರಣೆಯನ್ನು ಧ್ವಜಾರೋಹಣದ ಮೂಲಕ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶರಾವ ಕುಲಕರ್ಣಿ, ಸಹಕಾರಿಯ ಉಪಾಧ್ಯಕ್ಷರು, ಆಡಳಿತ ಮಂಡಳಿಯ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಶಿವಕುಮಾರ ಏಣಗಿ, ಸಿಬ್ಬಂದಿ ವರ್ಗದವರು ಮತ್ತು ಪಿಗ್ಮಿ ಏಜೆಂಟರು ಉಪಸ್ಥಿತರಿದ್ದರು.




**ಹುಲ್ಲೋಳಿ :** ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಹುಲ್ಲೋಳಿ ಸಹಕಾರಿಯಲ್ಲಿ ದಿನಾಂಕ 01.01.2021 ರಂದು ಬೆಳಿಗ್ಗೆ 10.30ಕ್ಕೆ ಸೌಹಾರ್ದ ಸಹಕಾರಿಗಳ ದಿನಾಚರಣೆಯ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ರಾವಾಣ್ಣಾ ನಾ. ಗೋಟುರಿ ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಪ್ರಧಾನ ಕಾರ್ಯದರ್ಶಿಯಾದ ಆನಾದ ಚೇಗಲಾ ಸೌಹಾರ್ದ ಕಾಯ್ದೆಗಳ ಬಗ್ಗೆ ತಿಳುವಳಿಕೆ ನೀಡಿದರು. ನಿರ್ದೇಶಕರಾದ ಶ್ರೀ ಜಯಪಾಲ ಚೇಗಲಾ, ಬಾಲಪ್ಪಾ ಸಂಕೇಶ್ವರಿ ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು. ಶ್ರೀ ಮಹಾವೀರ ಚೇಗಲಾ ಸ್ವಾಗತಿಸಿ ವಂದಿಸಿದರು.



**ಕೊಡಗು :** ಕೊಡಗು ವಿದ್ಯಾ ಇಲಾಖೆ ನೌಕರರ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು.



**ರಾಯಚೂರು :** ವಿವೇಕ್ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿರವಾರ ವತಿಯಿಂದ "ಸಹಕಾರಿ ದಿನಾಚರಣೆ ಆಚರಿಸಲಾಯಿತು" ಸಹಕಾರಿ ಪಿತಮಹಾ ಶ್ರೀ ಸಿದ್ದನಗೌಡ ಸಣ್ಣರಾಮಣ್ಣ ರವರ ಭಾವಚಿತ್ರಕ್ಕೆ ಪುಷ್ಪಾರ್ಚಣೆ ಹಾಗೂ ಧ್ವಜಾರೋಹಣ ನೇರವೇರಿಸುವ ಮುಖಾಂತರ ಕಾರ್ಯಕ್ರಮವನ್ನು ಆಚರಿಸಲಾಯಿತು. ಸಹಕಾರಿಯ ಆಡಳಿತಮಂಡಳಿಯವರು ಮಹೇಶ ಕೊಳ್ಳಿ, ಗಂಗಾಧರ ಜೆ. ವಿಜಯ ಮಹಾಂತೇಶ ಬಿ, ಗಿರಿಶ್.ಬಿ. ಅಮರೇಶ, ಪ್ರೇಮಕುಮಾರ, ಗೋಪಾಲಕೃಷ್ಣ ನಾಯಕ, ಹಾಗೂ ಸಿಬ್ಬಂದಿವರ್ಗದವರು, ಸದಸ್ಯರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗಳಿಸಿದರು.



**ಶಿವಮೊಗ್ಗ :** ದಿನಾಂಕ 01–01–2021 ರಂದು ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ., ಶಿವಮೊಗ್ಗ ವತಿಯಿಂದ ಸೌಹಾರ್ದ ಸಹಕಾರಿ ದಿನಾಚಾರಣೆಯನ್ನು ಧ್ವಜಾರೋಹಣವನ್ನು ಮಾಡುವುದರ ಮೂಲಕ ಆಚರಿಸಲಾಯಿತು. ಅಧ್ಯಕ್ಷರಾದ ಶ್ರೀ ಎಸ್.ಎ ನಾರಾಯಣಮೂರ್ತಿ, ಉಪಾಧ್ಯಕ್ಷರಾದ ಶ್ರೀ ಗೋಪಾಲ ಎಸ್.ಜಿ ರವರು ಧ್ವಜಾರೋಹಣವನ್ನು ನೆರವೇರಿಸಿದರು. ನಂತರ ಸಹಕಾರಿಯ ಸದಸ್ಯರಿಗೆ, ಆಡಳಿತ ಮಂಡಳಿಯ ಸದಸ್ಯರಿಗೆ ಹಾಗೂ ಸಿಬ್ಬಂದಿಗಳಿಗೆ ಸೌಹಾರ್ದ ಸಹಕಾರಿಯ ಶುಭಾಶಯಗಳನ್ನು ತಿಳಿಸಿದರು. ನಿರ್ದೇಶಕರಾದ ಶ್ರೀ ಕುಲಕರ್ಣಿ ಸಿ.ಎಂ, ಮತ್ತು ಶ್ರೀನಿವಾಸಮೂರ್ತಿ ಎಂ.ಜಿ. ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀಮತಿ ಮಾಲತಿ ಎಂ.ಪಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಮೈಸೂರು :** ಮೈಸೂರು ಜಿಲ್ಲಾ ಛಾಯ ಸ್ನೇಹ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಆಡಳಿತ ಮಂಡಲಿ ಸದಸ್ಯರ ಅಧ್ಯಕ್ಷತೆಯಲ್ಲಿ ನಡೆಯಿತು.



**ಚಾಮರಾಜನಗರ :** ಶ್ರೀ ಅಕ್ಷಯಶ್ರೀ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ನೂತನ ವರ್ಷದ ಕ್ಯಾಲೆಂಡರ್ ಅನ್ನು ವಾಟಾಳು ಶ್ರೀಗಳು ಬಿಡುಗಡೆ ಗೊಳಿಸುವುದರ ಮೂಲಕ ಸಹಕಾರಿ ದಿನಾಚರಣೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ಶ್ರೀ ವೀರಭದ್ರ ಸ್ವಾಮಿ ರವರು ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಇಓ ಹಾಜರಿದ್ದರು.



**ಉತ್ತರ ಕನ್ನಡ :** ಜನವರಿ 1, ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ನಿಯಮಿತ, ಶಿರಸಿ ಇದರ ವತಿಯಿಂದ ಶಿರಸಿಯ ಸುಯೋಗ ವೃದ್ದಾಶ್ರಮ 42 ನಿವಾಸಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು. ನಂತರ ಕಛೇರಿಯ ಆವರಣದಲ್ಲಿ ಸಹಕಾರಿ ಧ್ವಜ ಹಾರಿಸಿ ಸಹಕಾರಿ ದಿನಾಚರಣೆಯನ್ನು ಹೊಸ ವರ್ಷ 2021 ರ ಸ್ವಾಗತದೊಂದಿಗೆ ಆಚರಿಸಲಾಯಿತು.

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿಯಮಿತ ಬೆಂಗಳೂರು ಇದರ ನಿರ್ದೇಶಕರು, ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ನಿಯಮಿತದ ಅಧ್ಯಕ್ಷರು ಆದ ಶ್ರೀಮತಿ ಸರಸ್ವತಿ ಎನ್ ರವಿ ಇವರು ಆಶ್ರಮ ನಿವಾಸಿಗಳಿಗೆ ಹಣ್ಣು ವಿತರಿಸಿ ಸಹಕಾರಿ ದಿನಾಚರಣೆ ಮತ್ತು ಹೊಸ ವರ್ಷದ ಶುಭಾಷಯಗಳನ್ನು ತಿಳಿಸಿದರು.ನಂತರ ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿಯ ಆವರಣದಲ್ಲಿ ಸಹಕಾರಿ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀಮತಿ ಹೇಮಲತಾ ಚೌಗಲೆ, ನಿರ್ದೇಶಕರಾದ ಶ್ರೀಮತಿ ಭಾಗೀರಥಿ ನಾಯ್ಕ, ಶ್ರೀಮತಿ ಶೃತಿ ಇಳಿಗೇರ, ಶ್ರೀಮತಿ ಸ್ವಾತಿ ಶೆಟ್ಟಿ ಮತ್ತು ಮುಖ್ಯಕಾರ್ಯ ನಿರ್ವಾಹಕರಾದ ಶ್ರೀ ಗಣಪತಿ ನಾಯ್ಕ ಉಪಸ್ಥಿತರಿದ್ದರು.ಕಾರ್ಯಕ್ರಮದಲ್ಲಿ ಸಿಬ್ಬಂದಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದು ಸಹಕಾರಿ ದಿನಾಚರಣೆಯನ್ನು ಆಚರಿಸಿದರು.



**ಬಳ್ಳಾರಿ :** ವಿವೇಕ್ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿರವಾರ. ವತಿಯಿಂದ "ಸಹಕಾರಿ ದಿನಾಚರಣೆ ಆಚರಿಸಲಾಯಿತು" ಸಹಕಾರಿ ಪಿತಮಹಾ ಶ್ರೀ ಸಿದ್ದನಗೌಡ ಸಣ್ಣರಾಮಣ್ಣ ರವರ ಭಾವಚಿತ್ರಕ್ಕೆ ಪುಷ್ಪಾರ್ಚಣೆ ಹಾಗೂ ಧ್ವಜಾರೋಹಣ ನೇರವೇರಿಸುವ ಮುಖಾಂತರ ಕಾರ್ಯಕ್ರಮವನ್ನು ಆಚರಿಸಲಾಯಿತು, ಸಹಕಾರಿಯ ಆಡಳಿತಮಂಡಳಿಯವರು ಮಹೇಶ ಕೊಳ್ಳಿ, ಗಂಗಾಧರ ಜೆ. ವಿಜಯಮಹಾಂತೇಶ ಬಿ, ಗಿರಿಶ್.ಬಿ. ಅಮರೇಶ, ಪ್ರೇಮಕುಮಾರ, ಗೋಪಾಲಕೃಷ್ಣ ನಾಯಕ, ಹಾಗೂ ಸಿಬ್ಬಂದಿವರ್ಗದವರು, ಸದಸ್ಯರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗಳಿಸಿದರು.

ಪಾಳು ಬಿದ್ದ ಭೂಮಿಯಲ್ಲಿ ಸಾವಯವ ಕೃಷಿ ಕೈಗೊಳ್ಳುವ ಮೂಲಕ ಸಲಹೆಯಂತಹ ಗಂಬೀರ ಸಮಸ್ಯೆಗೆ ಸಹಕಾರ ಸಂಘಗಳು ಪರಿಹಾರ ದೊರಕಿಸಿಕೊಡಬೇಕು ಎಂದು ಕುಕ್ಕೆ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಪಾದರು ಸಲಹೆ ನೀಡಿದರು.

ಕೋಣಂದೂರು ಸಮಿಪದ ಹಾದಿಗಲ್ಲಿನ ಆಭಯಲಕ್ಷ್ಮೀ ನೃಸಿಂಹ ದೇವಸ್ಥಾನದಲ್ಲಿ ನಡೆದ ಅಭಯಮ್ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ನೂತನ ಕಛೇರಿಯನ್ನು ಉದ್ಘಾಟಿಸಿ ಮಾತನಾಡಿದರು. ಸೌಹಾರ್ದ ಸಹಕಾರ ಬಾರತ ಮೂಲದ ತತ್ವ, ವೇದಗಳಲ್ಲಿಯೂ ಸಹಕಾರದ ಉಲ್ಲೇಖವಿದೆ. ಪರಸ್ಪರರಿಗಾಗಿ ಬದುಕಬೇಕು. ಪರಸ್ಪರದಲ್ಲಿ ಪಾರದರ್ಶಕತೆ, ನಂಬಿಕೆ ಮುಖ್ಯ. ಕೃಷಿಗೆ ಸೂಕ್ತ ಬೆಲೆ ಸಿಗದೆ ಪಾರಂಪರಿಕ ಕೃಷಿಗೆ ಹಾನಿಯಾಗಿದೆ. ಕೇವಲ ವೃದ್ದರು ಜ್ರುಷಿಯಲ್ಲಿ ತೊಡಗುವ ಅನಿವಾರ್ಯತೆ ಒದಗಿದೆ. ಗೋವಿನ ಮೂಲಕ ಪಾರಂಪರಿಕ ಕೃಷಿಗೆ  ಸಹಕಾರ ಸಂಘಗಳು ಸಾಲ ಸೌಲಭ್ಯ ನೀಡುವ ಮೂಲಕ ಕೃಷಿಯನ್ನು ಉತ್ತೇಜಿಸುವ ಅಗತ್ಯ ಇದೆ ಎಂದು ಕಿವಿಮಾತು ಹೇಳಿದರು.



**ಚಾಮರಾಜನಗರ:** ಶ್ರೀ ಮುಪ್ಪಿನ ಷಡಕ್ಷರದೇವ ಸೌಹಾರ್ದ ಸಹಕಾರಿ ನಿ., ಯಳಂದೂರು ಇದರ ಅಧ್ಯಕ್ಷರಾದ ಶ್ರೀ ಮಹೇಂದ್ರ ರವರು ಕಛೇರಿಯಲ್ಲಿ "ಸಹಕಾರಿ ದಿನಾಚರಣೆ" ಅಂಗವಾಗಿ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಇಓ ಕು. ನಾಗಪೂಜಾ ಹಾಜರಿದ್ದರು.



**ಕೋಲಾರ :** ಸ್ವರ್ಣ ವಿಲಾಸ್ ಸೌಹಾರ್ದ ಪತ್ತಿನ ಸಹಕಾರಿ ನಿ., ಕೆ.ಜಿ.ಎಫ್ ವತಿಯಿಂದ ಸೌಹಾರ್ದ ದಿನಾಚರಣೆಯನ್ನು ಧ್ವಜಾರೋಹಣ ಮಾಡುವ ಮೂಲಕ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಡಾ. ಅಶೋಕ್ ವರ್ಧನ್, ಉಪಾಧ್ಯಕ್ಷರಾದ ರಮೇಶ್ ಶರ್ಮ, ಸಿಇಓ ಬಸವರಾಜು, ನಿರ್ದೇಶಕರಾದ ವಿವೇಕ್ ಚಂದ್ರು, ರಾಮಕೃಷ್ಣ, ರಘುಪತಿ, ಪ್ರಸಾದ್, ರಂಗಮ ನಾಯ್ಡು, ವಿಜಯ ಹಾಗೂ ಸಹಕಾರಿಯ ಸಿಬ್ಬಂದಿ ಹಾಜರಿದ್ದರು.



**ಮಂಡ್ಯ:** ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಅಧ್ಯಕ್ಷರಾದ ಶ್ರೀ ನಾಗರಾಜು .ಎಸ್ ರವರು ಕಛೇರಿಯಲ್ಲಿ "ಸಹಕಾರಿ ದಿನಾಚರಣೆ" ಅಂಗವಾಗಿ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಇಓ ಶ್ರೀ ಮಹೇಶ್ ಹಾಜರಿದ್ದರು.



**ಚಾಮರಾಜನಗರ :** ಶ್ರೀ ಸಿದ್ದಮಲ್ಲೇಶ್ವರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಕಛೇರಿಯ ಆವರಣದಲ್ಲಿ ಶ್ರೀ ಚನ್ನಬಸವ ಸ್ವಾಮಿಗಳು ಧ್ವಜಾರೋಹಣ ಮೂಲಕ ಸಹಕಾರಿ ದಿನಾಚರಣೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಅಧ್ಯಕ್ಷರು ಬಾಬು ರಾಮಸಮುದ್ರ ರವರು ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಇಓ ಕು. ಸೋನಾಕ್ಷಿ ಹಾಜರಿದ್ದರು.



**ಚಾಮರಾಜನಗರ :** ಪಾರ್ವತಿ ಸೌಹಾರ್ದ ಸಹಕಾರಿ ನಿ., ಕುದೇರು, ಇದರ ಅಧ್ಯಕ್ಷರಾದ ಶ್ರೀ ಮಹದೇವ ಸ್ವಾಮಿ ರವರು ಕಛೇರಿಯಲ್ಲಿ "ಸಹಕಾರಿ ದಿನಾಚರಣೆ" ಅಂಗವಾಗಿ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸಿಇಓ ಮತ್ತು ಸಿಬ್ಬಂದಿ ಹಾಜರಿದ್ದರು.



**ಮಂಡ್ಯ :** ಶ್ರೀ ಎಸ್.ಡಿ ಮಾಸ್ತಮ್ಮ ಸೌಹಾರ್ದ ಸಹಕಾರಿ ನಿ., ಮದ್ದೂರು, ಇದರ ಅಧ್ಯಕ್ಷರಾದ ಶ್ರೀ ಸ್ವಾಮಿ ರವರು ಕಛೇರಿಯಲ್ಲಿ "ಸಹಕಾರಿ ದಿನಾಚರಣೆ" ಅಂಗವಾಗಿ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಆಡಳಿತ ಮಂಡಲಿ ಸದಸ್ಯರು, ಸಿಇಓ ಶ್ರೀಮತಿ ಲಕ್ಷ್ಮೀ ಮತ್ತು ಸಿಬ್ಬಂದಿ ಹಾಜರಿದ್ದರು.




ಮಂಡ್ಯ : ಶ್ರೀ ಮಹದೇಶ್ವರ ಸೌಹಾರ್ದ ಪತ್ತಿನ ಸೌಹಾರ್ದ ಸಹಕಾರಿ ನಿ., ಹಲಗೂರು ಇದರ ಅಧ್ಯಕ್ಷರಾದ ಶ್ರೀ ಎನ್. ಮಹದೇವಸ್ವಾಮಿ ರವರು ಕಛೇರಿಯಲ್ಲಿ "ಸಹಕಾರಿ ದಿನಾಚರಣೆ" ಅಂಗವಾಗಿ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಇಓ ಶ್ರೀಮತಿ ಸುಶೀಲಾ ಹಾಜರಿದ್ದರು.



**ರಾಯಚೂರು :** ದಿನಾಂಕ 01.01.2021 ರಂದು ಆದಿಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವರಾಜು ಪಾಟೀಲು, ಉಪಾಧ್ಯಕ್ಷರಾದ ಶ್ರೀ ವೀರಭದ್ರಪ್ಪ, ನಿರ್ದೇಶಕರಾದ ಶರ್ಗೀ ವರಮುನೀಂದ್ರ ಹಾಗೂ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಮಲ್ಲಣ್ಣ ಇತರರು ಸೇರಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿ ದಿನಾಂಕ ನಿಮಿತ್ತಯ ಸ್ವಚ್ಛತಾ ಕಾರ್ಯ ಮಾಡಲಾಯಿತು.




**ದಕ್ಷಿಣ ಕನ್ನಡ :** ಸೌಹಾರ್ದ ದಿನಾಚರಣೆಯ ಅಂಗವಾಗಿ ದಿನಾಂಕ: 01.01.2021ರಂದು ದ.ಕ ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿಯ ಆಶ್ರಯದಲ್ಲಿ ನಡೆದ "ಸೌಹಾರ್ದ ಸಹಕಾರಿ ದಿನಾಚರಣೆ–2021" ಕಾರ್ಯಕ್ರಮವನ್ನು ಸಹಕಾರಿಗಳ ಸಹಾಯಕ ನಿಬಂಧಕರಾದ ಶ್ರೀ ಜೆ.ಸುಧೀರ್ ಕುಮಾರ್ ಇವರು ಉದ್ಘಾಟಿಸಿ ಮಾತನಾಡಿದರು. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಜಾರಿಗೆ ಬಂದ ದಿನವಾದ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ದ.ಕ ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿಯ ವತಿಯಿಂದ ಬಹಳ ಅರ್ಥಪೂರ್ಣವಾಗಿ ಆಚರಿಸಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮಾಹಿತಿಯನ್ನು ಒಳಗೊಂಡಿರುವ "ಸೌಹಾರ್ದ ಶರಧಿ" ಸ್ಮರಣ ಸಂಚಿಕೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರ ಇವರು ಉದ್ಘಾಟಿಸಿದರು. ನಂತರ ಮಾತನಾಡಿದ ಶ್ರೀ ಎಸ್.ಆರ್.ಸತೀಶ್ಚಂದ್ರ ಇವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಅಧಿನಿಯಮದ ಜಾರಿಯಾದ ಹಿನ್ನೆಲೆ ಮತ್ತು ಉದ್ದೇಶ. ಪ್ರಸ್ತುತ ಪರಿಸ್ಥಿತಿಯಲ್ಲಿ ಸೌಹಾರ್ದ ಸಹಕಾರಿಗಳು ಒಗ್ಗಟ್ಟಾಗಿ ಕೆಲಸ ಮಾಡಬೇಕಾದ ಅನಿವಾರ್ಯತೆಯ ಕುರಿತು ತಿಳಿಸಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ಇವರು ದ.ಕ ಜಿಲ್ಲೆಯಲ್ಲಿ ಉತ್ತಮ ಸೌಹಾರ್ದ ಸಹಕಾರಿಯಾಗಿ ಆಯ್ಕೆಯಾದ ಶ್ರೀ ಪಂಚಶಕ್ತಿ ವಿವಿದ್ಧೋದ್ಧೇಶ ಸೌಹಾರ್ದ ಸಹಕಾರಿ ನಿ., ಮೂಡಬಿದಿರೆ ಇದರ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರುಗಳನ್ನು ಸಮ್ಮಾನಿಸಿದರು.

ನಂತರದಲ್ಲಿ ರಾಜ್ಯ ಸರ್ಕಾರದ ಪ್ರತಿಷ್ಠಿತ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಶ್ರೀ ಎಸ್.ಆರ್.ಸತೀಶ್ಚಂದ್ರ ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾಗಿ ಆಯ್ಕೆಯಾದ ಶ್ರೀ ಬೋಳ ಸದಾಶಿವ ಶೆಟ್ಟಿ ಇವರನ್ನು ಸನ್ಮಾನಿಸಿದರು.

ನಂತರದಲ್ಲಿ ಮಾತನಾಡಿದ ಶ್ರೀ ಬೋಳ ಸದಾಶಿವ ಶೆಟ್ಟಿ ಇವರು ಜಿಲ್ಲೆಯ ಸೌಹಾರ್ದ ಸಹಕಾರಿಗಳು ಸಹಕಾರ ಕ್ಷೇತ್ರದ ಬೆಳವಣಿಗೆಯಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡುತ್ತಿವೆ. ಸೌಹಾರ್ದ ಸಹಕಾರ ಕ್ಷೇತ್ರದ ಸಮಸ್ಯೆಗಳಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ದಕ್ಷಿಣ ಕನ್ನಡ ಒಕ್ಕೂಟ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎ.ಸುರೇಶ್ ರೈ ಇವರು ಒಕ್ಕೂಟದ ವತಿಯಿಂದ ಕೋ–ಸಿಬಿಲ್ ವ್ಯವಸ್ಥೆಯು ಜಾರಿಗೆ ಬಂದಿರುತ್ತದೆ. ಮುಂದಿನ ದಿನಗಳಲ್ಲಿ ಸೌಹಾರ್ದ ಸಹಕಾರಿಯ ಇತರ ಉದ್ದೇಶವನ್ನು ಜಾರಿಗೊಳಿಸಲು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಹಕಾರವನ್ನು ಕೋರಿದರು.

ಕಾರ್ಯಕ್ರಮದ ನಂತರದಲ್ಲಿ ಆರ್ಥಿಕ ಸೇರ್ಪಡೆ ಮತ್ತು ಬಲವರ್ಧನೆ ಕಾಲಘಟ್ಟದಲ್ಲಿ ಸಹಕಾರಿ ಕ್ಷೇತ್ರದ ಪ್ರಸ್ತುತತೆ ಎಂಬ ವಿಷಯವನ್ನು ಶ್ರೀ ಮಂಜಿನಾಥ್ ಎಸ್.ಕೆ ಇವರು ಮಂಡಿಸಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ದ.ಕ ಜಿಲ್ಲಾ ಸಂಯೋಜಕರಾದ ಶ್ರೀ ಗುರುಪ್ರಸಾದ್ ಬಂಗೇರ, ಉಡುಪಿ ಜಿಲ್ಲಾ ಸಂಂ–ಯೋಜಕರಾದ ಶ್ರೀ ವಿಜಯ್ ಬಿ.ಎಸ್., ಪ್ರಭಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಎಂ.ಉಗ್ಗಪ್ಪ ಶೆಟ್ಟಿ, ನಿರ್ದೇಶಕರಾದ ಶ್ರೀ ಲ್ಯಾನ್ಸಿ ಎ.ಪಿರೇರ, ಶ್ರೀ ಮೋಹನ ಪ್ರಭು, ಶ್ರೀ ನವೀನ್ ಶೆಟ್ಟಿ, ಶ್ರೀಮತಿ ಭಾರತಿ ಜಿ.ಭಟ್, ಶ್ರೀ ದೇವಿಪ್ರಸಾದ್ ಕೆ, ಶ್ರೀ ನಾರಾಯಣ ಕೆ.ಆರ್, ಶ್ರೀ ವಲ್ಸರಾಜ್, ಶ್ರೀ ಎಂ, ವಾಸುದೇವ ಭಟ್, ಶ್ರೀಮತಿ ರೇವತಿ ಅಶೋಕ್, ಶ್ರೀ ಭಾಸ್ಕರ ದೇವಸ್ಯ ಉಪಸ್ಥಿತರಿದ್ದರು. ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಸುಮನಾ ಶರಣ್ ಇವರು ಸ್ವಾಗತಿಸಿದರು. ಉಪಾಧ್ಯಕ್ಷರಾದ ಶ್ರೀ ಜಿ.ಆರ್.ಪ್ರಸಾದ್ ಪ್ರಸ್ತಾವನೆಗೈದರು. ನಿರ್ದೇಶಕರಾದ ಶ್ರೀ ಗಣೇಶ್ ಶೆಣೈ ವಂದನಾರ್ಪಣೆಗೈದರು. ಶ್ರೀ ಉಮೇಶ್ ದಂಡಕೇರಿ ಇವರು ಕಾರ್ಯಕ್ರಮ ನಿರೂಪಿಸಿದರು.



ಮಿಲತ್ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು.



**ಮೈಸೂರು :** ಮೈಸೂರು ಜಿಲ್ಲಾ ಛಾಯ ಸ್ನೇಹ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು.

ಲೇಖನ

# ರೈತರ ಆರ್ಥಿಕ ಅಭಿವೃದ್ಧಿಯಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳು ಜವಾಬ್ದಾರಿಯುತ ಕಾರ್ಯ ನಿರ್ವಹಿಸುತ್ತವೆ.



– ಶ್ರೀ ಶಶಿಧರ ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ), ಬೆಂಗಳೂರು

ಮಾನವನ ನಾಗರೀಕತೆಯ ಬೆಳವಣಿಗೆಯ ಭಾಗವಾಗಿ ತನ್ನ ಆಹಾರದ ಅಗತ್ಯತೆಗಾಗಿ ಕಂಡುಕೊಂಡ ಮಾರ್ಗ 'ಕೃಷಿ'. ಪ್ರಾಕೃತಿಕವಾಗಿ ಲಭ್ಯವಿದ್ದ ಸಸ್ಯಗಳನ್ನು 'ಬೆಳೆ'ಯಾಗಿ ರೂಡಿಗೆ ತಂದದ್ದು. ಜನಸಂಖ್ಯಾ ಸ್ಫೋಟದ ಅಗತ್ಯತೆ ಪೂರೈಕೆಗಾಗಿ ಆಧುನಿಕ ಕೃಷಿ ಪದ್ಧತಿಗಳನ್ನು ರೂಢಿಗೆತರಲಾಗಿದೆ. ಆರಂಭಿಕ ದಿನ ಮಾನಗಳಲ್ಲಿ ಕೇವಲ ಸಾವಯವಗೊಬ್ಬರ ಉಪಯೋಗವಿದ್ದದ್ದು ರಸಾಯನಿಕ ಗೊಬ್ಬರಗಳ ಉಪಯೋಗರೂಢಿಗೆ ಬಂದಿದ್ದರ ಫಲವಾಗಿ 'ಮಣ್ಣಿನ ಸಂರಕ್ಷಣೆ' ಈ ದಿನಮಾನದ ಆಧ್ಯತೆಯಾಗಿ ಪರಿಗಣಿಸುವ ಅಗತ್ಯತೆ ಇದೆ. ವಾಂಡೆರ್‌ಬೆರ್ರಿ ಎಂಬ ತಜ್ಞನ ನುಡಿ"ಕೃಷಿ ಫಲಪ್ರದಾಯಕವಾಗಿ ಉಳಿಯಬೇಕೆಂದರೆ, ಅದು ಭೂಮಿಯ ಫಲವತ್ತತೆಯನ್ನು ಸಂರಕ್ಷಿಸಬೇಕು ಮತ್ತು ಭೂಮಿಯ ಆರ್ಥಿಕ ಆರೋಗ್ಯವನ್ನು ಕಾಪಾಡಬೇಕು. ಭೂಮಿಯನ್ನು ಉತ್ತಮವಾಗಿ ಬಳಸಬೇಕು. ಉತ್ತಮವಾಗಿ ಬಳಸಬೇಕೆಂದರೆ ಅದನ್ನು ಉಪಯೋಗಿಸುವವರು ಅದರ ಬಗ್ಗೆ ತಿಳಿದವರಾಗಬೇಕು(ಜ್ಞಾನ). ಅದನ್ನು ಹೇಗೆ ಉತ್ತಮವಾಗಿಉಪಯೋಗಿಸಬೇಕು (ನೈಪುಣ್ಯ) ಮತ್ತು ಅದಕ್ಕೆ ಪ್ರೇರೇಪಿಸಬೇಕು (ಪ್ರೋತ್ಸಾಹ, ಉತ್ತೇಜನ). ಅದರಂತೆಉಪಯೋಗಿಸಲು ಸಮಯ ಮತ್ತು ಸಶಕ್ತತೆಯನ್ನು (ಸಂಪನ್ಮೂಲ) ಹೊಂದಿರಬೇಕು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಕೃಷಿಕರ ಜೀವನದ ಭಾಗವಾಗಿದ್ದು, ಕೃಷಿ ಉತ್ಪನ್ನವನ್ನು ಹೆಚ್ಚಿಸುವುದಲ್ಲದೇ ಅವರ ಆಧಾಯವನ್ನೂ ಹೆಚ್ಚಳಗೊಳಿಸುವುದಾಗಿದೆ ಎಂಬುದು ಮರೆಯಲಾಗದ ಅಂಶ.

ಭಾರತದಲ್ಲಿ ಸ್ವಾತಂತ್ರ್ಯಾನಂತರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಇದರ ಭಾಂದವ್ಯ ಹೊಂದಿದ ಇತರೆ ಸಹಕಾರ ವಲಯವು ಈ ಕೆಳಕಂಡ ಕೃಷಿ ಕ್ರಾಂತಿಗೆ ಕಾರಣವಾಗಿದೆ ಎಂದರೆ ತಪ್ಪಾಗಲಾರದು.

| ಕ್ರ. ಸಂ. | ಹೆಸರು | ಉತ್ಪನ್ನಗಳು |
|---|---|---|
| 1 | ಹಸಿರು ಕ್ರಾಂತಿ | ಆಹಾರ ಬೆಳೆಗಳು, ದ್ವಿದಳ ಧಾನ್ಯಗಳು ಎಣ್ಣೆ ಕಾಳುಗಳು |
| 2 | ಶ್ವೇತಕ್ರಾಂತಿ | ಹಾಲು ಮತ್ತು ಹೈನು ಉತ್ಪನ್ನಗಳು |
| 3 | ನೀಲಿ ಕ್ರಾಂತಿ | ಮೀನುಗಾರಿಕೆ |
| 4 | ಹಳದಿ ಕ್ರಾಂತಿ | ಖಾದ್ಯತೈಲ |
| 5 | ಬೆಳ್ಳಿ ಕ್ರಾಂತಿ | ಮೊಟ್ಟೆ ಮತ್ತು ಕೋಳಿ |
| 6 | ನಸುಗೆಂಪು ಕ್ರಾಂತಿ | ಸೀಗಡಿ |
| 7 | ಸುವರ್ಣಕ್ರಾಂತಿ | ಹಣ್ಣು ಮತ್ತುಜೇನು |
| 8 | ಸುವರ್ಣ ನಾರುಕ್ರಾಂತಿ | ಸೆಣಬು |
| 9 | ಬೆಳ್ಳಿ ನಾರುಕ್ರಾಂತಿ | ಹತ್ತಿ |

**ಕಾಮನ ಬಿಲ್ಲಿನಕ್ರಾಂತಿ :** ಮೇಲಿನಂತೆ ಅನೇಕ ಸಾಧನೆಗಳಾಗಿದ್ದರೂ ಈ ದಿನದ ಅವಶ್ಯಕತೆ ಅತಿ ಕಡಿಮೆ ಪ್ರದೇಶದಲ್ಲಿ ಭೂಮಿಯ ಆರೋಗ್ಯ, ಮಣ್ಣಿನ ಆರೋಗ್ಯವನ್ನು ಕಾಪಾಡಿಕೊಂಡು ಹೆಚ್ಚು ವೈವಿಧ್ಯಮಯ ಉತ್ಪನ್ನಗಳನ್ನು ಪಡೆಯುವ ಸಮಗ್ರ ಕೃಷಿ. ಕೇವಲ ಒಂದು ಬೆಳೆ ಬೆಳೆಯದೇ ವಿವಿಧ ಋತುಗಳಲ್ಲಿ ಅದೇಭಾಗದಲ್ಲಿ ವಿವಿಧ ಕೃಷಿ ಬೆಳೆ ಬೆಳೆಯುವುದು ಮತ್ತು ವಿಶೇಷವಾಗಿ ದ್ವಿದಳ ದಾನ್ಯಗಳು, ತೋಟಗಾರಿಕೆ, ಸಾಮಾಜಿಕ ಅರಣ್ಯ, ಮೀನುಗಾರಿಕೆ, ಕೋಳಿಸಾಕಾಣಿಕೆ, ಪಶುಸಂಗೋಪನೆ ಮತ್ತು ಆಹಾರ ಸಂಸ್ಕರಣೆಯನ್ನು ಕೈಗೊಳ್ಳುವುದಾಗಿದೆ.

**ರೈತರ ಆದಾಯ ದ್ವಿಗುಣ ಗೊಳಿಸುವ ಗುರಿ :** ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡಲ್ಲಿ ಸಾಂಭವ್ಯ ನಷ್ಟ ಕಡಿತಗೊಳಿಸುವುದಲ್ಲದೇ ಆದಾಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಈ ದಿಸೆಯಲ್ಲಿ ಭಾರತ ಸರ್ಕಾರವು ಕೆಳಗಿನ ಏಳು ಅಂಶಗಳ ತಂತ್ರಗಾರಿಕೆಯನ್ನು ರೂಪಿಸಿದೆ.

1) ನೀರಾವರಿಗೆ ಆದ್ಯತೆ. ಅದರಲ್ಲಿ ಯೂಕಿರು ನೀರಾವರಿ, (ಹನಿ ನೀರಾವರಿ, ತುಂತುರು ನೀರಾವರಿ) "ಪ್ರತಿ ಹನಿಗೆ ಹೆಚ್ಚು ಬೆಳೆ".
2) ಪ್ರತಿ ಪ್ರದೇಶದ ಮಣ್ಣಿನ ಆರೋಗ್ಯಕ್ಕೆ ಅನುಗುಣವಾಗಿ ಗುಣಮಟ್ಟದ ಬಿತ್ತನೆ ಬೀಜ ಮತ್ತು ಪೋಷಕಾಂಶಗಳನ್ನು ಒದಗಿಸುವುದು.
3) ಕೊಯ್ಲು ನಂತರದ ನಷ್ಟಗಳನ್ನು ತಡೆಯಲು ಉಗ್ರಾಣ ಮತ್ತು ಶೀಥಲ ಗೃಹಗಳ ಸರಪಳಿ ನಿರ್ಮಾಣಕ್ಕಾಗಿಅತಿ ಹೆಚ್ಚಿನ ಹೂಡಿಕೆ.
4) ಆಹಾರ ಸಂಸ್ಕರಣೆ ಮೂಲಕ ಮೌಲ್ಯ ವರ್ಧನೆಗೆಅತಿ ಹೆಚ್ಚಿನ ಪ್ರೋತ್ಸಾಹ.
5) 585 ಕೇಂದ್ರಗಳ ಮೂಲಕ ರಾಷ್ಟ್ರೀಯ ಕೃಷಿ ಮಾರುಕಟ್ಟೆಗಳನ್ನು ಸೃಷ್ಟಿಸುವುದು. ಲೋಪದೋಷಗಳನ್ನು ಸರಿಪಡಿಸಿ ವಿದ್ಯುನ್ಮಾನ ವೇದಿಕೆ ನಿರ್ಮಾಣ.
6) ನ್ಯಾಯಯುತ ವೆಚ್ಚದಲ್ಲಿ ಬೆಳೆ ವಿಮೆ ಜಾರಿಗೆ ತರುವುದು.
7) ಕೋಳಿ ಸಾಕಾಣೆ, ಜೇನು ಸಾಕಾಣೆ, ಮೀನುಗಾರಿಕೆ, ಹೈನುಗಾರಿಕೆ ತರಹೆಯ ಕೃಷಿ ಪೂರಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದು.

ಭಾರತದ ಕೃಷಿಕ (ರೈತನ) ಆಧಾಯ ಪ್ರಮಾಣ (2012–13)ವನ್ನು ಲೆಕ್ಕಹಾಕಿದರೆ ಕೃಷಿಯಿಂದ ಅವರ ಆಧಾಯ ಶೇಕಡ 48, ಪಶು ಸಂಗೋಪನೆಯಿಂದ ಶೇಕಡ 32, ದಿನಗೂಲಿ ಇತರೆಆಧಾಯ ಶೇಕಡ 12, ಕೃಷಿಯೇತರ ಚಟುವಕೆಗಳಿಂದ ಶೇಕಡ 8 ಎಂದು ತಿಳಿದು ಬರುತ್ತದೆ. ಇದರಿಂದ ಕೃಷಿ ಮತ್ತು ಕೃಷಿ ಪೂರಕ ಚಟುವಟಿಕೆಗಳಿಗೆ ಆಧ್ಯತೆ ನೀಡುವ ಬಗ್ಗೆ ಅರಿವು ಮೂಡುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಪಾಕ್ಸ) ಪ್ರಾಮುಖ್ಯತೆಯನ್ನು ಅರಿಯಬೇಕಾಗಿದೆ. ರಾಷ್ಟ್ರದಲ್ಲಿ 93,367 'ಪಾಕ್ಸ್'ಇದ್ದು 45,241 ಲಾಭದಲ್ಲಿವೆ ಮತ್ತು 36,695 ನಷ್ಟದಲ್ಲಿವೆ. 4,116 ನಿಷ್ಕ್ರಿಯಗೊಂಡಿವೆ. ಒಟ್ಟಾರೆ ಸದಸ್ಯರಲ್ಲಿ ಶೇಕಡಾ 50ಕ್ಕಿಂತ ಕಡಿಮೆ ಸದಸ್ಯರು ಸಾಲ ಪಡೆದಿರುತ್ತಾರೆ.

ಸಹಕಾರ ಪತ್ತುರಚನೆಯಲ್ಲಿನ ಒಟ್ಟಾರೆ ಸಾಲ (ಪತ್ತು) ಆಸ್ತಿಯಲ್ಲಿ ಪಾಕ್ಸ್‌ಗಳ ಪಾಲು ಶೇಕಡ 22. ಇವು ಬಹಳಷ್ಟು ಪಡೆದ ಸಾಲಗಳನ್ನೇ ಅವಲಂಭಿಸಿವೆ. 2010 ರಿಂದೀಚೆಗೆ ಕೃಷಿಯೇತರ ಸಾಲಗಳು ಹೆಚ್ಚಳ ಗೊಂಡಿವೆ. ಸಾಲ ಒದಗಿಸಲು (ಶೇಕಡ 50 ಗುರಿ) ಬಾಕಿ ಇರುವ ಸಂಖ್ಯೆ ಪರಿಶಿಷ್ಟ ಜಾತಿ ಶೇಕಡ 14.2, ಪರಿಶಿಷ್ಟ ವರ್ಗ ಶೇಕಡ 13.9, ಸಣ್ಣರೈತರು ಶೇಕಡ 8.1, ಗ್ರಾಮೀಣ ಗುಡಿ ಕೈಗಾರಿಕೆ ಶೇಕಡ 14.7 ಅಂಚಿನರೈತರು 18.1. ಈ ಅಂಕಿ ಅಂಶಗಳ ಪರಿಶೀಲನೆಯಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಸಾಧನೆ ಮಾಡಬೇಕಾಗಿರುವುದು ಇನ್ನು ಬಹಳಷ್ಟಿದೆ. ಅವಕಾಶಗಳು ಬಹಳಷ್ಟಿದೆ.ಸಾಲಗಳನ್ನು ವೈವಿಧ್ಯಮಯಗೊಳಿಸುವ ಅವಶ್ಯಕತೆ ಇದೆ ಎಂಬುದು ಗೋಚರಿಸುತ್ತದೆ.

**ವಿವಿದೋದ್ಧೇಶ ಕೇಂದ್ರಗಳಾಗಿ ಪರಿವರ್ತಿಸಬೇಕಾದಅವಶ್ಯಕತೆ ಏನು?**

- ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ದೇಜಾಲವನ್ನು ಹೊಂದಿವೆ. ಕೇವಲ ಅಲ್ಪಾವಧಿ ಬೆಳೆ ಸಾಲಗಳನ್ನು ಒದಗಿಸುತ್ತಿವೆ. ಆದರೆ ಮತ್ತೊಂದೆಡೆ
- ಅತಿ ಹೆಚ್ಚಿನರೈತರು ಸಣ್ಣ ಹಿಡುವಳಿಯಿಂದಾಗಿ ತಮ್ಮದೇ ಆದ ಸ್ವಂತ ಕೃಷಿ ಉಪಕರಣಗಳನ್ನು ಹೊಂದಲು ಅಶಕ್ತರಾಗಿರುತ್ತಾರೆ.
- ನೂತನ ಅವಿಷ್ಕಾರಗಳು, ಅಭಿವೃದ್ಧಿ ವಿಷಯಗಳನ್ನು ರೈತ ಸಮುದಾಯಕ್ಕೆ ತಲುಪಿಸಬೇಕಿದೆ.
- ಹಣದ ಅವಶ್ಯಕತೆಯಿಂದಾಗಿ ಅತಿ ಕಡಿಮೆ ಬೆಲೆಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದಾರೆ.
- ಗ್ರಾಮಾಂತರ ಪ್ರದೇಶಗಳಲ್ಲಿ ದಾಸ್ತಾನು ಸಂಗ್ರಹ ಮಾಡಿಡಲು ಅನುಕೂಲತೆಗಳಿಲ್ಲ.

ಪರಿಸ್ಥಿತಿ ಹೀಗಿರುವಾಗ ಅನೇಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಅತಿ ಸಣ್ಣಗಾತ್ರದಲ್ಲಿದ್ದು ಸಶಕ್ತವಾಗಿಲ್ಲ. ಕಾರ್ಯಾಚರಣೆಧಕ್ಷವಾಗಿಲ್ಲ. ಅನೇಕ ಪರಿಕರಗಳ ದೌರ್ಭಲ್ಯಗಳನ್ನು ಹೊಂದಿವೆ. ಆದುದರಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಸದಸ್ಯರಿಗೆ ಮತ್ತು ಸದಸ್ಯರಾಗಲುಅರ್ಹರಿರುವವರಿಗೆ ಸೇವೆ ಒದಗಿಸಲು ಸಶಕ್ತವಾಗುವಂತೆ ಈ ಸಂಘಗಳನ್ನು ಪುನರ್‌ರೂಪಸುವಅವಶ್ಯಕತೆಇದೆ. ಸದಸ್ಯರು ಮತ್ತು ಸಾಂಭವ್ಯ ಸದಸ್ಯರಲ್ಲಿ ವಿಶ್ವಾಸ ಮೂಡಿಸಬೇಕಾದಅವಶ್ಯಕತೆಇದೆ.

**ಈ ಕೆಳಕಂಡ ದಿಸೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಪುನರ್‌ರೂಪಿಸಬೇಕಾಗಿದೆ.**

- ಸದಸ್ಯರ 'ಅ ಯಿಂದ ಳ' ವರಗಿನಎಲ್ಲ ಅಗತ್ಯತೆಗಳನ್ನು ಒಂದೆಡೆ ಪೂರೈಕೆಯಾಗಬೇಕು.
- ನೂತನ ವ್ಯವಹಾರ ಅವಕಾಶಗಳನ್ನು ಹುಡುಕಬೇಕು.
- ರೈತರ ಉತ್ಪನ್ನಗಳಿಂದ ಹಿಂದಿನ ಮತ್ತು ಮುಂದಿನ ಕೊಂಡಿಗಳನ್ನು ಒದಗಿಸಬೇಕು.
- ಕೃಷಿಯನ್ನು ಲಾಭದಾಯಕ ಚಟುವಟಿಕೆಯಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೂಪಿಸಬಲ್ಲವು.
- ಬಹುಸೇವಾ ಕೇಂದ್ರಗಳಾಗಿ ಸದಸ್ಯರನ್ನು ಸ್ವಾವಲಂಭಿಗಳಾಗಿ ರೂಪಿಸಿ ನವೋದ್ಯಮಿಗಳಾಗಿ ರೂಪಿಸಲು ಸಾಧ್ಯ. ಆಧಾಯ ವೃದ್ಧಿಗೆ ಸಹಕಾರಿ.
- ಗ್ರಾಮೀಣ ಆರ್ಥಿಕತೆಯ ವಿವಿಧ ವಲಯಗಳಿಗೆ ಸಂಪರ್ಕ ಏರ್ಪಡಿಸಿ, ರೈತರಆಧಾಯ ದ್ವಿಗುಣಗೊಳಿಸಬಲ್ಲದು.

**ಸಾಧ್ಯವಾಗಬಲ್ಲ ವ್ಯವಹಾರ ಚಟುವಟಿಕೆಗಳ ಪಟ್ಟಿ ಈ ಕೆಳಕಂಡಂತಿವೆ.**

- ಉತ್ತಮ ಗುಣಮಟ್ಟದ ಕೃಷಿ ಉತ್ಪನ್ನದಾಸ್ತಾನುಕೇಂದ್ರ.
- ಕೃಷಿ ಸೇವ ಕೇಂದ್ರ ಕೃಷಿ ಉಪಕರಣಗಳ ಬಾಡಿಗೆ, ಕೃಷಿ ಅಗತ್ಯತೆಗಳ ಪೂರೈಕೆ.
- ಕೃಷಿ ಸಂಸ್ಕರಣೆ (ರೂಪಾಂತರ) ಕೇಂದ್ರ : ಪ್ರಾಥಮಿಕ ಮತ್ತು ಮಾಧ್ಯಮಿಕ ಸಂಸ್ಕರಣೆ
- ಕೃಷಿ ಮಾಹಿತಿ ಕೇಂದ್ರ– ವಿಸ್ತರಣಾ ಚಟುವಟಿಕೆಗಳು.
- ಕೃಷಿ ಸಾಗಾಣೆ ಮತ್ತು ಮಾರುಕಟ್ಟೆ ಅನುಕೂಲತೆಗಳು.
- ಗ್ರಾಹಕ (ಬಳಕೆ) ವಸ್ತುಗಳ ಮಾರಾಟ/ ಇತರೆ ಚಟುವಟಿಕೆಗಳು ಉದಾ: ಜನಔಷಧ ಮಾರಾಟಕೇಂದ್ರ
- ಅಲ್ಪಾವಧಿ ಕೃಷಿ ಸಾಲವಲ್ಲದೇ ಇತರೆ ಮಧ್ಯಮಾವಧಿ ಕೃಷಿ ಸಾಲ / ಕೃಷಿಯೇತರ ಸಾಲಗಳ ವಿತರಣೆ.

**ವಿವಿದೋದ್ಧೇಶ (ಬಹು) ಸೇವ ಕೇಂದ್ರ ಅಧುನಿಕತೆಯನ್ನು ಪಡೆಯಲು :**

- ತಾಂತ್ರಿಕ ಬೆಂಬಲವುಳ್ಳ–ಕಿರು ಎ.ಟಿ.ಎಂ.ಗಳ ಸ್ಥಾಪನೆ, ವೈ.ಫೈ. ಇಂಟರ್‌ನೆಟ್ (ಅಂತರ್ಜಾಲ) ಇದರಿಂದಇತರರನ್ನು ಒಳಗೊಳ್ಳುವ ಪ್ರಕ್ರಿಯೆ ಸಾಧ್ಯವಾಗುತ್ತದೆ.
- ಬ್ಯಾಂಕಿಂಗ್‌ಏಜೆಂಟ್/ ಕರೆಸ್ಪಾಂಡೆಂಟ್‌ಗಳಾಗಿ ಆರ್ಥಿಕ ಸೇರ್ಪಡೆ ಕಾರ್ಯಕ್ರಮದಲ್ಲಿ ಭಾಗವಹಿಸುವುದು.
- ರೈತಉತ್ಪನ್ನ ಸಂಸ್ಥೆಗಳು/ ಇತರೆ ಆಧುನಿಕ ಮಾರುಕಟ್ಟೆಗಳೊಡನೆ ಸಹಯೋಗ/ಸಂಯೋಜನೆ ಹೊಂದುವುದು.
- ಕೃಷಿ ವಿಶ್ವವಿದ್ಯಾಲಯಗಳು / ಸಂಸ್ಥೆಗಳೊಡನೆ ಸಹಯೋಗದೊಡನೆ ಕೃಷಿ ವ್ಯವಹಾರದ ವಿವಿಧ ಆಯಾಮಗಳ ಪರಿಚಯ ಮಾಡಿಕೊಳ್ಳುವುದು.

**ಗುಜರಾತ್ ರಾಜ್ಯದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಕೈಗೊಂಡಿರುವ ನೂತನ ಅವಿಷ್ಕಾರ ಯೋಜನೆಗಳು :**

- ಶುದ್ಧ ನೀರಿನಘಟಕ ಸ್ಥಾಪನೆ.
- ಗೋದಾಮುಗಳ ನಿರ್ಮಾಣ, ವೇರ್‌ಹೌಸ್ ನಿಯಮಗಳಡಿಯಲ್ಲಿ ಒಳಪಡಬಹುದಾದ ಮಾನದಂಡಗಳನ್ನು ಹೊಂದುವುದು.
- ಟ್ರಾಕ್ಟರ್‌ಗಳು ಮತ್ತು ಉಪಕರಣಗಳನ್ನು ಬಾಡಿಗೆಗೆಒದಗಿಸುವುದು.
- ಗ್ರಾಹಕರ ಅಂಗಡಿ
- ಸಿಮೆಂಟ್ ಮತ್ತು ಪಶು ಆಹಾರ ಮಾರಾಟ
- ಜೆರಾಕ್ಸ್‌ಯಂತ್ರ ಸ್ಥಾಪನೆ.
- ನವೀಕರಣ ಶಕ್ತಿ ಮೂಲ ಯೋಜನೆರೂಪಿಸುವುದು.

ಈ ಚಟುವಟಿಕಗಳನ್ನು ಕರ್ನಾಟಕದಲ್ಲಿಯೂಕಾಣುತ್ತಿದ್ದೇವೆ.ಇದರಿಂದ ಸದಸ್ಯತ್ವದ ಹೆಚ್ಚಳ, ಹೆಚ್ಚಿನ ವ್ಯವಹಾರ ಮತ್ತು ಹೆಚ್ಚಿನಆದಾಯ ಗಳಿಸುವ ಸಾಧ್ಯತೆ.

ಈ ಕ್ರಮಗಳು ಸಂಘವನ್ನು ಸುಸ್ಥಿರತೆಗೆ ಕೊಂಡೊಯ್ಯಬಲ್ಲವು.

# ಸಂಭ್ರಮದ ಸುಗ್ಗಿ ಈ ಸಂಕ್ರಾಂತಿ ಹಬ್ಬ

– ಶಂಕರ್ ಎಸ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

"ಸುಗ್ಗಿಯು ಬಂದಿತು
ಹಿಗ್ಗನು ತಂದಿತು
ನಮ್ಮಯ ನಾಡಿನ ಜನಕೆಲ್ಲ"

ಸಂಕ್ರಾಂತಿ ಹಬ್ಬವನ್ನು ಎಳ್ಳು-ಬೆಲ್ಲದ ಹಬ್ಬವೆಂದು ಎನ್ನುತ್ತಾರೆ. ರೈತರು ತಾವು ಬೆಳೆದ ಬೆಳೆಗಳನ್ನು ರಾಶಿ ರಾಶಿಯಾಗಿ ಹಾಕಿ ಅದಕ್ಕೆ ಪೂಜೆ ಮಾಡುತ್ತಾರೆ. ಈ ಕಾರಣಕ್ಕಾಗಿ ಸುಗ್ಗಿಯ ಹಬ್ಬವೆಂದು ಕರೆಯುತ್ತಾರೆ. ಹಬ್ಬದ ದಿನದಂದು ಎಳ್ಳು ಬೆಲ್ಲ (ಸಕ್ಕರೆ) ನೆಲಗಡಲೆ, ಸಕ್ಕರೆ ಅಚ್ಚು, ಕೊಬ್ಬರಿ, ಕಬ್ಬು ಬೆರೆಸಿದ ವಿಶೇಷ ಸಿಹಿಯನ್ನು ದೇವರಿಗೆ ನೈವೇದ್ಯ ಮಾಡಿ ನಂತರ ಹೆಣ್ಣು ಮಕ್ಕಳು ತಮ್ಮ ಆಪ್ತರಿಗೆ ಹಂಚಿ ಸಂತೋಷವನ್ನು ಪಡುತ್ತಾರೆ.



ಎಳ್ಳು ಶನಿ ಗ್ರಹದ ಪ್ರತಿನಿಧಿ ಹಾಗೂ ಆತನ ಧಾನ್ಯವಾಗಿದೆ. (ಶನಿಗ್ರಹ ಎಂದೊಡನೆ ಎಲ್ಲರಿಗೂ ಏನೋ ಒಂದು ರೀತಿ ಭಯ) ಎಳ್ಳನ್ನು ನಾವು ದಾನ ಮಾಡಲು ಹೋದಾಗ ಸಾಮಾನ್ಯವಾಗಿ ಅದನ್ನು ತೆಗೆದುಕೊಳ್ಳಲು ಇಷ್ಟ ಪಡುವುದಿಲ್ಲ. ಕಾರಣ ಅವರ ಪಾಪ ನಾಮ ತೆಗೆದುಕೊಂಡ ಹಾಗೆ ಎಂದು ಹಾಗೂ ದೋಷ ಉಂಟಾಗುವುದು ಎನ್ನುತ್ತಾರೆ. ಆದ್ದರಿಂದ ಈ ಕಾರಣದಿಂದ ಎಳ್ಳಿನ ಜತೆಯಲ್ಲಿ ಬೆಲ್ಲ, ಕಡಲೆಬೀಜ, ಕೊಬ್ಬರಿಯನ್ನು ಮಿಶ್ರಣ ಮಾಡಿ ದಾನ ಮಾಡುವ ಪದ್ಧತಿ ಪ್ರಾರಂಭವಾಯಿತು. ಅಲ್ಲದೆ ಆ ಬೆಳೆಗಳು ಆಗ ತಾನೆ ಬೆಳೆದು ಮಾರುಕಟ್ಟೆಗೆ ಬಂದಿರುತ್ತದೆ. ಅವುಗಳನ್ನು ಪೂಜೆ ಮಾಡಿ ದಾನ ಧರ್ಮ ಮಾಡಿದರೆ ಇನ್ನು ಫಲ ಹೆಚ್ಚು ಬರುವುದು ಎಂಬ ನಂಬಿಕೆಯೂ ಇದೆ.

ಸಾಮಾನ್ಯವಾಗಿ ಸುಗ್ಗಿಯ ಸಂದರ್ಭದಲ್ಲಿ ಆಚರಿಸುವ ಸಂಕ್ರಾಂತಿ ಹಬ್ಬವು ಭಾರತೀಯ ಕಾಲಮಾನ 'ಪುಷ್ಯಮಾಸದಲ್ಲಿ' ಬರುವುದು. ಉತ್ತರಾಯಣದ ಪುಣ್ಯಕಾಲವೆಂದೂ (ದೇವತೆಗಳ ಕಾಲವೆಂದೂ) ಸಹ ಕರೆಯಲಾಗುತ್ತದೆ. ಈ ಹಬ್ಬದ ಸಂದರ್ಭದಲ್ಲಿ ಭಕ್ತರು ಪುಣ್ಯ ನದಿಗಳೆಂದು ಹೆಸರುವಾಸಿಯಾದ ಗಂಗಾ, ಕಾವೇರಿ ಮೊದಲಾದವುಗಳಲ್ಲಿ ಸ್ನಾನ ಮಾಡುವುದು ಉಂಟು. ಸೂರ್ಯನು ಈವರೆಗೆ ದಕ್ಷಿಣದತ್ತ ವಾಲಿ ಚಲಿಸುತ್ತಿದ್ದದ್ದು, ಸಂಕ್ರಾಂತಿಯ ದಿನದಿಂದು ಉತ್ತರದ ಕಡೆ ಪಥ ಬದಲಾಯಿಸುತ್ತಾನೆ. ಈ ರೀತಿ ಸೂರ್ಯನ ಪಥ ಬದಲಾವಣೆಯಿಂದ ಭಾರತದಲ್ಲಿ ಕೊರೆಯುವ ಚಳಿ ಕಡಿಮೆಯಾಗಿ ಹಗಲು ಹೆಚ್ಚು ಸಂಭವಿಸುತ್ತದೆ ಎಂಬ ಪ್ರತೀತಿ ಇದೆ.

ವೈಜ್ಞಾನಿಕ ರೀತಿಯಲ್ಲಿ ನೋಡಿದಾಗ ಸಂಕ್ರಾಂತಿಯ ಸಮಯದಲ್ಲಿ ಹೆಚ್ಚು ಚಳಿ ಇರುತ್ತದೆ. ಎಳ್ಳು ಸೇವನೆಯಿಂದ ದೇಹದ ಉಷ್ಣತೆ ಹೆಚ್ಚು ಆಗುತ್ತದೆ ಹಾಗೂ ಚರ್ಮದ ಕಾಂತಿಯೂ ಹೆಚ್ಚುತ್ತದೆ. ಈ ಹಬ್ಬವು ಅತ್ಯಂತ ಪ್ರಾಚೀನ ಕಾಲದಿಂದಲೂ ಆಚರಣೆಗೆ ಬಂದಿದೆ. ಜನಪದ ಗೀತೆಯಲ್ಲೂ ಸಂಕ್ರಾಂತಿಯ ಬಗ್ಗೆ ಹೇಳಿದೆ. ಶಿವ ಮತ್ತು ಪಾರ್ವತಿಯರು ಲೋಕ ಸಂಚಾರ ಪ್ರಾರಂಭಿಸುತ್ತಾರಂತೆ. ಈ ಸಂಕ್ರಮಣದ ಕಾಲದ ಗೋಧೂಳಿ ಲಗ್ನಕ್ಕಿಂತ ಹೆಚ್ಚು ಸಮಯ ಈ ಭೂಲೋಕದಲ್ಲಿರುತ್ತಾರೆ ಎಂದು ಪುರಾಣದಲ್ಲಿ ಇದೆ. ಈ ಪುಣ್ಯ ದಿನದಲ್ಲಿ ಹಲವಾರು ದೇವತೆಗಳಿಗೆ ಶಾಪ ವಿಮೋಚನೆ ಉಂಟಾಗಿದೆ.

ಪ್ರತಿ ವರ್ಷ ಸಂಕ್ರಾಂತಿಯ ಹಬ್ಬದ ದಿನ ಸಂಜೆ ಶಬರಿ ಮಲೆಯಲ್ಲಿ ಅಯ್ಯಪ್ಪ ಸ್ವಾಮಿಯು ಜ್ಯೋತಿ ರೂಪದಲ್ಲಿ ದರ್ಶನ ನೀಡುತ್ತಾನೆ ಎಂಬ ನಂಬಿಕೆ ಇದೆ. ಗ್ರಾಮೀಣ ಪ್ರದೇಶದಲ್ಲಿ ರೈತರು ಆ ದಿನ ಎತ್ತುಗಳಿಗೆ ಪೂಜೆ ಸಲ್ಲಿಸಿ ಕಿಚ್ಚು ಹಾಯಿಸುತ್ತಾರೆ. ಎಳ್ಳು-ಬೆಲ್ಲ ಹಂಚಿ, ಪರಸ್ಪರ ದ್ವೇಷಾಸೂಯೆ, ಶತ್ರುತ್ವಗಳನ್ನೆಲ್ಲ ಮರೆತು ಸಾಮರಸ್ಯದಿಂದ ಬದುಕುವ ಪ್ರತಿಜ್ಞೆ ಮಾಡುವ ಈ ಸಂಭ್ರಮದ ಹಬ್ಬದ ಹಿಂದೆ ಹಲವು ಆಸಕ್ತಿದಾಯಕ ಸಂಗತಿಗಳಿವೆ.

ಈ ಹಬ್ಬವು ಕೇವಲ ಸಂಪ್ರದಾಯಿಕ ಪದ್ದತಿಗಳ ಆಚರಣೆ ಮಾತ್ರವಲ್ಲದೆ ಕೆಲವು ರಾಜ್ಯಗಳಲ್ಲಿ ಆಟವಾಡುವುದಕ್ಕೆ ಉತ್ತಮ ಸಮಯವಾಗಿದೆ. ಈ ಹಬ್ಬದ ಸಮಯದಲ್ಲಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ರಂಗೋಲಿ ಸ್ಪರ್ಧೆ, ಗಾಳಿಪಟ ಹಾರಿಸುವ ಸ್ಪರ್ಧೆ ಮತ್ತು ಇನ್ನೂ ಹಲವಾರು ಸಾಂಪ್ರದಾಯಿಕ ಕ್ರೀಡೆಗಳಾದ ಕುಸ್ತಿ ಇತ್ಯಾದಿಗಳನ್ನು ಹಳ್ಳಿಗಳಲ್ಲಿ ಆಯೋಜಿಸಲಾಗುತ್ತದೆ. ಜಾನುವಾರುಗಳನ್ನು ಅಲಂಕರಿಸುವುದು ಸಹ ಹಬ್ಬದ ವಿಶೇಷತೆಗಳಲ್ಲಿ ಒಂದಾಗಿದೆ. ರೈತರು ತಮ್ಮ ಹಸುಗಳು ಮತ್ತು ಎತ್ತುಗಳನ್ನು ಜನರಿಗೆ ಪ್ರದರ್ಶನ ಮಾಡಲು ಅಲಂಕರಿಸುತ್ತಾರೆ. ದನಗಳನ್ನು ಬೆಂಕಿಗೆ ಅಡ್ಡಲಾಗಿ ನೆಗೆಯುವಂತೆ ಮಾಡುವುದು ಈ ಹಬ್ಬದ ಇನ್ನೊಂದು ವಿಶೇಷ ಆಚರಣೆ.

75ನೇ ಪುಟಕ್ಕೆ.....

# ಆರ್ಥಿಕ ಬೆಳವಣಿಗೆಯಲ್ಲಿ ಸಹಕಾರ ಸಂಘಗಳ ಪಾತ್ರ

– ಎಂ.ಎನ್.ಸುಂದರ ರಾಜ್, ಅಧ್ಯಕ್ಷರು, ಕಲಾವಿದರ ವಿವಿದೋದ್ಧೇಶ ಸೌಹಾರ್ದ ಪತ್ತಿನ ಸಹಕಾರಿ ನಿ., ಶಿವಮೊಗ್ಗ

ಪ್ರತಿಯೊಬ್ಬ ವ್ಯಕ್ತಿಯೂ ಇಂದು ತನ್ನ ಆರ್ಥಿಕ ಶಕ್ತಿಯನ್ನು ಬೆಳೆಸಿಕೊಳ್ಳಲು ಇಚ್ಛಿಸುತ್ತಾನೆ. ಸಹಕಾರಿ ಸಂಸ್ಥೆಗಳು ಇಂತಹ ಸಮಯದಲ್ಲಿ ವ್ಯಕ್ತಿಯ ಆರ್ಥಿಕ, ಸಾಮಾಜಿಕ ಮಟ್ಟವನ್ನು ಹೆಚ್ಚಿಸಲು ನೆರವಾಗುತ್ತದೆ ಮಾತ್ರವಲ್ಲ, ಇದು ಒಬ್ಬನಿಂದ ಆಗದೆ ಸಂಘಟಿತ ಶಕ್ತಿಯಿಂದ ಎಂದು ಸಾಬೀತುಪಡಿಸುತ್ತದೆ.

ಇಂದು ಸಹಕಾರಕ್ಷೇತ್ರಕ್ಕೆ ಸುಮಾರು 260ಕ್ಕೂ ಹೆಚ್ಚಿನ ವರ್ಷದ ಇತಿಹಾಸವುಂಟು. ದಾಖಲಾದ ಮೊದಲ ಸಹಕಾರ ಸಂಘ ಪ್ರಾರಂಭವಾದದ್ದು ಫ್ರಾನ್ಸ್‌ನಲ್ಲಿ ಅದೂ 1750ರಲ್ಲಿ ಚೀಸ್ (ಗಿಣ್ಣು) ತಯಾರಿಸುವ ಕೆಲಸಗಾರರು ಒಟ್ಟಿಗೆ ಸೇರಿ ಒಂದು ಸಹಕಾರಿ ಸಂಸ್ಥೆಯನ್ನು ಸ್ಥಾಪಿಸಿದರು. ಅದೆಷ್ಟು ಯಶಸ್ವಿಯಾಯಿತೆಂದರೆ, ನಂತರದ ಹತ್ತು ವರ್ಷಗಳಲ್ಲಿ ಅಮೇರಿಕ, ಇಂಗ್ಲೆಂಡ್, ಗ್ರೀಸ್ ಮುಂತಾದೆಡೆ ಸಹಕಾರಿ ಸಂಸ್ಥೆಗಳು ಪ್ರಾರಂಭವಾಗಿ ಹೊಸ ಶಕೆಯನ್ನೇ ಪ್ರಾರಂಭಿಸಿತು. ಇಂದು ವಿಶ್ವಾದ್ಯಂತ ಸಹಕಾರಿ ಚಳುವಳಿ ಭಾರತವನ್ನೂ ಒಳಗೊಂಡು ಅತ್ಯಂತ ಹೆಚ್ಚು ಯಶಸ್ವಿಯಾಗಿ ಸಮಾಜದ ಒಟ್ಟಾರೆ ಚಿತ್ರಣವನ್ನೇ ಬದಲಿಸಿದೆ. ವಿಶ್ವದ ಬಹುಭಾಗದಲ್ಲಿ ಸರ್ಕಾರಗಳು ಸೇವಾಕಾರ್ಯಗಳನ್ನು ಕಡಿತಗೊಳಿಸಿ, ಮಾರುಕಟ್ಟೆಗಳ ಮೇಲಿನ ನಿಯಂತ್ರವನ್ನು ಕಳೆದುಕೊಂಡಗ ನಮ್ಮ ಸಹಕಾರಿ ಕ್ಷೇತ್ರ ತನ್ನ ಸದಸ್ಯರ ಹಿತರಕ್ಷಣೆ ಮಾಡಿ ಅವರ ಜೀವನ ಮಟ್ಟವನ್ನು ಉನ್ನತೀಕರಿಸುವಲ್ಲಿ ನೆರವಾಗಿದೆ.

ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ (International Cooperative Alliance) ತನ್ನ 1995ರ ಘೋಷಣೆಯಲ್ಲಿ ಹೀಗೆ ಅಭಿಪ್ರಾಯ ಪಟ್ಟಿದೆ. "ಸಹಕಾರಿ ಸಂಸ್ಥೆಯು ಒಂದು ವ್ಯಕ್ತಿಗಳ ಸ್ವಾಯತ್ತ ಸಂಸ್ಥೆಯಾಗಿದ್ದು ಅವರ ಸಾಮಾನ್ಯ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅವಶ್ಯಕತೆಗಳನ್ನು ಮತ್ತು ಆಶಯಗಳನ್ನು ಪೂರೈಸಿಕೊಳ್ಳ ಪ್ರಜಾಪ್ರಭುತ್ವ ರೀತಿ ರಚಿಸಿಕೊಂಡ ಸಂಸ್ಥೆ" ಸದಸ್ಯರಿಂದ ಸದಸ್ಯರಿಗಾಗಿ ರಚಿಸಲ್ಪಟ್ಟ ಸಂಸ್ಥೆ ಇದಾಗಿದ್ದು ಒಂದೊಂದೂ ಸಹಕಾರಿಯೂ ಒಂದೊಂದು ಉದ್ದೇಶವನ್ನು ಒಳಗೊಂಡಿದ್ದರೂ ಸಹ ಅವರುಗಳ ಗುರಿ ಒಂದೇ.

### ಸಹಕಾರಿ ಸಂಸ್ಥೆಗಳಿಂದ ಹೇಗೆ ಆರ್ಥಿಕ ಬೆಳವಣಿಗೆಯಾಗುತ್ತದೆ?

1. ಸಹಕಾರಿ ಸಂಸ್ಥೆಗಳು ಸಮುದಾಯ ಆಧಾರಿತವಾಗಿದ್ದು, ಪ್ರಜಾಪ್ರಭುತ್ವ ತತ್ವಗಳಿಗನುಗುಣವಾಗಿ ರಚಿತವಾಗಿರುತ್ತವೆ. ಬಡತನ ಕಡಿಮೆ ಮಾಡುವಲ್ಲಿ, ಹುದ್ದೆಗಳ ಸೃಷ್ಟಿಸುವಲ್ಲಿ ಮತ್ತು ಸಾಮಾಜಿಕ ಬೆಳಣಿಗೆಯಲ್ಲಿ ಸಹಕಾರಿ ಮುಖ್ಯ ಪಾತ್ರ ವಹಿಸುತ್ತದೆ.
2. ಸಹಕಾರಿಗಳು ಮಹಿಳೆಯರ ಮತ್ತು ಪುರುಷರ ಜೀವನ ಮತ್ತು ಕೆಲಸದ ಸ್ಥಿತಿಯನ್ನು ಉತ್ತಮ ಪಡಿಸುತ್ತದೆ. ತನ್ನ ಸದಸ್ಯರ ಕಲ್ಯಾಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರ ಜೀವನ ಮಟ್ಟ ಸುಧಾರಣೆಗೆ ಪ್ರಯತ್ನಿಸುತ್ತದೆ. ಮತ್ತು ಅದರಲ್ಲಿ ಯಶಸ್ವಿಯೂ ಆಗಿದೆ.
3. ಸದಸ್ಯರು ಹೆಚ್ಚಿನ ಆದಾಯ ಪಡೆಯಲು ಅನುವಾಗುವುದಲ್ಲದೆ, ಸಾಮಾಜಿಕ ರಕ್ಷಣೆ ನೀಡುತ್ತದೆ.
4. ಸರ್ಕಾರಗಳು ಸೇವೆಗಳನ್ನು ಕಡಿತಗೊಳಿಸಿ, ನಿಯಂತ್ರಿತ ಮಾರುಕಟ್ಟೆಯಿಂದ ಹಿಂದೆಗೆದರ ಸಹ ಸಹಕಾರಿಗಳು ತನ್ನ ಸದಸ್ಯರಿಗೆ ಉತ್ತಮ ಮಾರುಕಟ್ಟೆ ಸೌಲಭ್ಯ ಕಲ್ಪಿಸಿ, ಅವರ ಜೀವನ ಸದೃಢತೆಯನ್ನು ಹೆಚ್ಚಿಸುತ್ತದೆ.
5. ಅನೇಕ ಮಾರ್ಗಗಳಿಂದ ಸಹಕಾರಿಗಳು ವಿಶ್ವ ಮತ್ತು ರಾಷ್ಟ್ರೀಯ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. 'ಹೆಚ್ಚು ಜನ ಪಾಲ್ಗೊಳ್ಳುವಿಕೆ'ಯನ್ನು ಪ್ರೋತ್ಸಾಹಿಸುತ್ತದೆ. ಆದ್ದರಿಂದಲೇ ಸಹಕಾರಿ ಸಂಸ್ಥೆಗಳ ಪ್ರಚಾರದಿಂದ ಅದು ಆರ್ಥಿಕ ಬೆಳವಣಿಗೆಯ ಸ್ಥಂಭವೆಂದು ಪರಿಗಣಿಸಲಾಗುತ್ತಿದೆ.

ಸಹಕಾರಿ ಸಂಸ್ಥೆಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ, ಕೆಲವು ಹಂತಗಳಲ್ಲಿ ಕ್ರಮ ಕೈಗೊಳ್ಳಬೇಕಾಗುತ್ತದೆ. ಏಕೆಂದರೆ, ಯಾವುದೇ ಕೆಲಸ ಯಶಸ್ವಿಯಾಗಬೇಕಾದರೆ, ಅಲ್ಲಿ ಸದಸ್ಯರ ಪಾಲ್ಗೊಳ್ಳುವಿಕೆ ಅತ್ಯಂತ ಮುಖ್ಯವಾದುದು. ಹೀಗಾಗಿ ಸದಸ್ಯರ ಭಾವನೆಗಳಿಗೆ ಬೆಲೆ ನೀಡಬೇಕು ಮತ್ತು ಅವರ ಸಲಹೆಗಳನ್ನು ಪಡೆದು ಮುಂದೆ ಸಾಗಬೇಕು. ಈ ನಿಟ್ಟಿನಲ್ಲಿ ಸಹಕಾರಿಗಳು ಕೈಗೊಳ್ಳಬೇಕಾದ ಅಂಶಗಳ ಬಗ್ಗೆ ತಿಳಿದುಕೊಳ್ಳುವುದ ಅವಶ್ಯಕವಾಗಿದೆ.

### 1. ಮುನ್ನಡೆಸುವ ಸಮಿತಿಗಳ ರಚನೆ ಮತ್ತು ಕಾರ್ಯ :

ಆಸಕ್ತಿ ಹೊಂದಿರುವ ಸಂಭಾವ್ಯ ಸದಸ್ಯರನ್ನು ಗುರುತಿಸಿ, ಅವರನ್ನೊಳಗೊಂಡ ಒಂದು ಸಮಿತಿ ರಚಿಸಬೇಕು. ಅನೌಪಚಾರಿಕವಾಗಿ ಸೇರುವ ಈ ಸಮಿತಿ, ಸಹಕಾರಿ ಚಳುವಳಿಯಲ್ಲಿ ಕಂಡು ಬರುವ ಲೋಪದೋಷಗಳನ್ನು ಪಟ್ಟಿ ಮಾಡಿ ಅವುಗಳ ನಿವಾರಣೆಗಾಗಿ ಯಾವ ಕ್ರಮ ಕೈಗೊಳ್ಳಬೇಕೆಂದು ಶಿಫಾರಸು ಮಾಡಬೇಕು. ಆ ಶಿಫಾರಸ್ಸನ್ನು ಆಧರಿಸಿ, ಆಡಳಿತ ಮಂಡಳಿ ಕ್ರಮ ಕೈಗೊಳ್ಳಲು ಸಾಧ್ಯವಗುತ್ತದೆ. ಇಂತಹ ಮುನ್ನಡೆಸುವ ಸಮಿತಿಗೆ ಯಾವುದೇ ಕಾನೂನು ರೀತಿಯ ರಕ್ಷಣೆ ಸಿಗದಿದ್ದರೂ ಸಹ ಆಗಾಗ್ಗೆ ಸಭೇ ಸೇರಿ ಉತ್ತಮವಾದ ಸಲಹೆಗಳನ್ನು ನೀಡುವುದು ಮತ್ತು ಅವರುಗಳನ್ನು ಜಾರಿಗೊಳಿಸುವ ಮಾರ್ಶರ್ಗವನ್ನು ಸೂಚಿಸುವುದು.

### 2. ಸಂಭಾವ್ಯ ಸದಸ್ಯರ ಪರಿವೀಕ್ಷಣೆ:

ರಚಿತವಾದ ಮುನ್ನಡೆಸುವ ಸಮಿತಿಗಳು ಮತ್ತು ಸಂಪನ್ಮೂಲ ವ್ಯಕ್ತಿಗಳ

ಮಾರ್ಗದರ್ಶನದಲ್ಲಿ ಸಂಭಾವ್ಯ ಸದಸ್ಯರ ಬಗ್ಗೆ ಪರಿವೀಕ್ಷಣ ನಡೆಸಬೇಕು. ಅವರ ಸೇವೆಯ ಅವಶ್ಯಕತೆ, ಅವರ ಅಭಿರುಚಿ, ಸಹಕಾರಿ ಕ್ಷೇತ್ರದ ಬಗೆಗಿನ ಆಸಕ್ತಿ ಇವುಗಳನ್ನೆಲ್ಲ ಪರಿಗಣಿಸಿ ಸದಸ್ಯರನ್ನು ಸೇರ್ಪಡೆ ಮಾಡಿಕೊಂಡರೆ, ಅಂತಹವರು ಸಹಕಾರಿಯ ಅಮೂಲ್ಯ ಆಸ್ತಿಯಾಗುವರು.

ಕಾರ್ಯ ಸಾಧ್ಯತೆಯ ಅಧ್ಯಯನ ಅತಿ ಮುಖ್ಯ. ಇದರ ಉದ್ದೇಶ ಸಹಕಾರಿ ಕ್ಷೇತ್ರದಲ್ಲಿ ಅವಕಾಶಗಳ ಪರಿಶೀಲನೆ ಮತ್ತು ಅವುಗಳಿಗೆ ತಕ್ಕ ಯೋಜನೆಗಳನ್ನು ರೂಪಿಸುವುದು. ಇದರಿಂದ ಉತ್ತಮ ಯೋಜನೆಗಳನ್ನು ಹಾಕಿಕೊಂಡು ಸಹಕಾರಿಯ ಔನ್ನತ್ಯ ಸಾಧಿಸಲು ನೆರವಾಗುತ್ತದೆ. ಸಂಭಾವ್ಯ ಸದಸ್ಯರ ಆಸಕ್ತಿ ಮಟ್ಟ, ಉತ್ತಮ ಸೇವೆ ಇವುಗಳನ್ನು ಅಂದಾಜಿಸುವುದೂ ಸಹ ಇದರ ಉದ್ದೇಶವಾಗಿರುತ್ತದೆ.

### 3. ವ್ಯವಹಾರ ಯೋಜನೆಯ ಅಭಿವೃದ್ಧಿ:

ಪರಿವೀಕ್ಷಣೆ ಅಧ್ಯಯನದ ಫಲಿತಾಂಶವು ಸಮಾಧಾನಕರವಾಗಿದ್ದರೆ, ಯೋಗ್ಯ ಸಲಹೆಗಾರರ ಮಾರ್ಗದರ್ಶನದಲ್ಲಿ ಕಾರ್ಯರೂಪಕ್ಕೆ ಬರುವಂತಹ ಯೋಜನೆಗಳನ್ನು ಹಾಕಿಕೊಳ್ಳಬೇಕು. ಅದರ ಉದ್ದೇಶಗಳು ಬಹು ಮುಖ್ಯವಾಗಿ ಅಭಿವೃದ್ಧಿಗೆ ನೀಲಿನಕ್ಷೆ ತಯಾರಿ ಮತ್ತು ಆರಂಭಿಕ ಕಾರ್ಯಾಚರಣೆ.

### 4. ಸಹಕಾರಿಗೆ ಆರ್ಥಿಕ ಶಕ್ತಿ ತುಂಬುವುದು

ಸಹಕಾರಿಯ ಕಾರ್ಯ ನಿರ್ವಹಣೆ ಮತ್ತು ವ್ಯವಹಾರಕ್ಕೆ ಹಣಕಾಸಿನ ಅವಶ್ಯಕತೆ ಹೆಚ್ಚಿರುತ್ತದೆ. ಆದ್ದರಿಂದ ಹಣಕಾಸಿನ ಅವಶ್ಯಕತೆ ಮತ್ತು ಅದನ್ನು ದೊರಕಿಸಿಕೊಳ್ಳುವ ಬಗ್ಗೆ ಕಾರ್ಯೋನ್ಮುಖರಾಗಬೇಕು. ಸದಸ್ಯರಿಂದ ಸಂಗ್ರಹಿಸಬಹುದಾದ ಠೇವಣಿಗಳು, ಬ್ಯಾಂಕ್ ಮತ್ತಿತರ ಆರ್ಥಿಕ ಸಂಸ್ಥೆಗಳಿದ ಪಡೆಯಬಹುದಾದ ಮೊಬಲಗು ಇವನ್ನೆಲ್ಲ ಪರ್ಯಾಲೋಚಿಸಬೇಕು. ಸಂಗ್ರಹಿಸಿದ ಹಣವನ್ನು ಯೋಗ್ಯರೀತಿಯಲ್ಲಿ ವಿನಿಯೋಗ ಮಾಡುವುದೂ ಸಹ ಅತಿ ಅವಶ್ಯಕ.

### 5. ಸಿಬ್ಬಂದಿ ತರಬೇತಿ

ಸಮರ್ಥವಾದ ಸಿಬ್ಬಂದಿಗಳಿಂದ ಒಂದು ಸಹಕಾರಿ ಮುನ್ನಡೆಯುವುದು ಸಾಧ್ಯ. ಆದ್ದರಿಂದ ಸಿಬ್ಬಂದಿಗಳಿಗೆ ಆಗಾಗ್ಗೆ ತರಬೇತಿ ಶಿಬಿರಗಳನ್ನೇರ್ಪಡಿಸುವುದು, ಫೆಡರೇಷನ್ ಯೋಜಿಸಿದ ತರಬೇತಿಗಳಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸುವುದು ಅತಿ ಮುಖ್ಯವಾದುದು. ಸರ್ಕಾರದ ಮತ್ತು ಸಹಕಾರಿ ಇಲಾಖೆಯ ಎಲ್ಲ ನೂತನ ಆದೇಶಗಳು ಮತ್ತು ಮಾರ್ಗಸೂಚಿಗಳ ಪರಿಚಯವಿರಬೇಕು. ಏಕೆಂದರೆ ಇಂದಿನ ದಿನಗಳಲ್ಲಿ ಪ್ರತಿಕ್ಷಣ ಬದಲಾವಣೆಯನ್ನು ಕಾಣುತ್ತೇವೆ.

ಸಹಕಾರಿ ಸಂಸ್ಥೆಗಳು ಕೇವಲ ಠೇವಣಿ ಸಂಗ್ರಹಿಸಿ ಅದನ್ನು ಸಾಲ ನೀಡಿಕೆಗೆ ಮಾತ್ರ ಸೀಮಿತಗೊಳಿಸಿದೆ, ಇತರ ಆದಾಯ ಮೂಲಗಳ ಬಗ್ಗೆ ಸದಾ ಆಲೋಚನೆ ಮತ್ತು ಸಂಶೋಧನೆ ನಡೆಸುತ್ತಿರಬೇಕು. ಒಮ್ಮೆ ಕೆಲ ವರ್ಷಗಳ ಕೆಳಗೆ ನಮ್ಮ ಸೌಹರ್ದ ಫೆಡರೇಷನ್ ವತಿಯಿಂದ ನಾಲ್ಕು ರಾಜ್ಯಗಳ ಅಧ್ಯಯನ ಪ್ರವಾಸದಲ್ಲಿ ನನ್ನನ್ನೊಳಗೊಂಡ ಹಲವರು ಭಾಗಿಯಾಗಿದ್ದರು. ವಿವಿಧ ರಾಜ್ಯಗಳ ಸಹಕಾರಿ ಸಂಸ್ಥೆಗಳನ್ನು ಸಂದರ್ಶಿಸಿ ಅವರು ಬೇರೆ ಬೇರೆ ಆದಾಯ ಮೂಲಗಳಿಂದ ಹೇಗೆ ತಮ್ಮ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ತಿಳಿದುಕೊಂಡೆವು. ಅಲ್ಲದೆ ವಿವಿಧ ಸಹಕಾರಿ ಸಂಸ್ಥೆಗು ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳಲ್ಲು ಕೈಗೊಳ್ಳುತ್ತಿರುವ ವಿವಿಧ ಯೋಜನೆಗಳನ್ನು ಮನವರಿಕೆ ಮಾಡಿಕೊಂಡೆವು. ಅವುಗಳಲ್ಲಿ ಕೆಲವನ್ನು ಅಳವಡಿಸಿಕೊಂಡು ಅದರಿದ ಉಪಯೋಗವನ್ನೂ ಪಡೆದುಕೊಂಡೆವು. ಆದ್ದರಿಂದ ಇಂತಹ ಶೈಕ್ಷಣಿಕ ಪ್ರವಾಸ ಮತ್ತೆ ಏರ್ಪಡಿಸಲಿಲ್ಲ.. ಇದರ ಬಗ್ಗೆ ನಮ್ಮ ಸೌಹಾರ್ಧ ಫೆಡರೇಷನ್‌ನವರು ಸೂಕ್ತ ಚಿಂತನೆ ಮಾಡುವುದೊಳಿತು.

.....73ನೇ ಪುಟದಿಂದ

### ಮೈಸೂರಿನ ಸಿದ್ದಲಿಂಗಪುರದಲ್ಲಿ ಎತ್ತುಗಳಿಗೆ ಕಿಚ್ಚು ಹಾಯಿಸುವುದು ಒಂದು ವಿಶೇಷ



ಸಂಕ್ರಾಂತಿ ಹಬ್ಬದ ದಿನದಂದು ಪ್ರತಿ ವರ್ಷ ಈ ಗ್ರಾಮದ ಜನರೆಲ್ಲ ತಮ್ಮ ಹಸು ಮತ್ತು ಎತ್ತುಗಳಿಗೆ ಕಿಚ್ಚು ಹಾಯಿಸಲಾಗುತ್ತದೆ. ಈ ಕ್ಷಣವನ್ನು ಕಣ್ತುಂಬಿಕೊಳ್ಳಲು ಮೈಸೂರು ಬೆಂಗಳೂರು ರಸ್ತೆಯ ಇಕ್ಕೆಲಗಳಲ್ಲಿ ಹೆಚ್ಚಿನ ಜನರು ಸೇರುತ್ತಾರೆ. ಸೂರ್ಯ ಅಸ್ತಂಗತವಾಗುತ್ತಿದ್ದಂತೆ ರಸ್ತೆಯ ಮೇಲೆ ಮೂರು ಸಾಲಿನಂತೆ ಭತ್ತದ ಹುಲ್ಲನ್ನು ಇಟ್ಟು ಪೂಜೆ ಸಲ್ಲಿಸಿ ನಂತರ ಬೆಂಕಿ ಹಚ್ಚಲಾಗುತ್ತದೆ. ಈ ಸಂಪ್ರದಾಯವನ್ನು ಸಿದ್ದಲಿಂಗಪುರದ ರೈತರು 70 ವರ್ಷಗಳಿಂದ ನಡೆಸಿಕೊಂಡು ಬಂದಿದ್ದಾರೆ. ಈ ಹಬ್ಬಕಾಗಿ ದುಬಾರಿ ಬೆಲೆಯ ಎತ್ತುಗಳನ್ನು ಖರೀದಿಸುವುದು ಇಲ್ಲಿ ಪ್ರತಿಷ್ಠೆಯ ವಿಷಯವಾಗಿದೆ. ಇಲ್ಲಿನ ಎತ್ತುಗಳಿಗೆ ಮೈತೊಳೆದು ಶುಚಿಗೊಳಿಸಿದ ಕೊಂಬುಗಳಿಗೆ ಬಣ್ಣ ಬಳಿದು, ಹೂಮಾಲೆಗಳಿಂದ ಅಲಂಕರಿಸಿ, ಬಲೂನುಗಳನ್ನು ಕಟ್ಟಿ ಕಿಚ್ಚು ಹಾದು ಬಂದ ರಾಸುಗಳು ಗ್ರಾಮದ ಬೀದಿಗಳಲ್ಲಿ ಮೆರವಣಿಗೆಯನ್ನು ಮಾಡುವುದು ಇಲ್ಲಿನ ವಿಶೇಷವಾಗಿದೆ.

# ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ-9)

# PARTICIPATION OF COOPERATIVES IN ACHIEVING SUSTAINABLE DEVELOPMENT GOALS - SDGs (Part-9)



– ಶ್ರೀ ಯಶವಂತ ಡೋಂಗ್ರೆ

**ಎಸ್‌ಡಿಜಿ 9: ಸದೃಢ ಮತ್ತು ದೀರ್ಘಾವಧಿ ಬಾಳಿಕೆಯ ಮೂಲಭೂತ ಸೌಕರ್ಯಗಳನ್ನು ಬೆಳೆಸುವುದು, ಸುಸ್ಥಿರ ಕೈಗಾರಿಕೀಕರಣವನ್ನು ಉತ್ತೇಜಿಸುವುದು ಮತ್ತು ಹೊಸ ಆವಿಷ್ಕಾರಗಳನ್ನು ಗುರುತಿಸಿ ಬೆಳೆಸುವುದು**

**(Build resilient infrastructure, promote inclusive and sustainable industrialization and foster innovation)**

ಸುಸ್ಥಿರ ಅಭಿವೃದ್ಧಿಯ ಬಗೆಗಿನ ಈ ಗುರಿಯು ಮೂಲಭೂತ ಸೌಕರ್ಯಗಳು ಮತ್ತು ಹೊಸ ಅನ್ವೇಷಣೆಗಳ ಬಗ್ಗೆ ಮುಖ್ಯವಾಗಿ ಗಮನ ಹರಿಸುತ್ತದೆ. ಮೂಲಭೂತ ಸೌಕರ್ಯಗಳು ದೀರ್ಘಾವಧಿ ಜೀವಿತ ಹೊಂದಿದ್ದರೆ ಅವುಗಳ ಮೇಲೆ ಪುನ: ಪುನ: ವೆಚ್ಚಮಾಡುವುದು ತಪ್ಪುತ್ತದೆ ಮತ್ತು ಸಂಪನ್ಮೂಲಗಳ ಮಿಗತೆ ಉಂಟಾಗುತ್ತದೆ. ಹಾಗೆಯೇ ಕೈಗಾರಿಕೀಕರಣವು ಅನಿವಾರ್ಯವಾದರೂ, ಅದು ಹೊಸ ಅನ್ವೇಷಣೆಗಳನ್ನು ಅಳವಡಿಸಿಕೊಂಡು ಹೆಚ್ಚು ಸುಸ್ಥಿರವಾಗಿರಬೇಕೆಂದೂ ಈ ಗುರಿಯು ಬಯಸುತ್ತದೆ. ಆರ್ಥಿಕ ಅಭಿವೃದ್ಧಿಯು ಮಾನವನ ಒಟ್ಟಾರೆ ಯೋಗಕ್ಷೇಮವನ್ನು ಬೆಂಬಲಿಸುವಂತಿರಬೇಕು. ಇದು ಸಾಧ್ಯವಾಗಬೇಕಾದರೆ ಮೂಲಭೂತ ಸೌಕರ್ಯಗಳು ಉತ್ತಮ ಗುಣಮಟ್ಟದ, ವಿಶ್ವಾಸಾರ್ಹ, ಸ್ಥಿತಿಸ್ಥಾಪಕ ಹಾಗು ಸುಸ್ಥಿರವಾಗಿರಬೇಕು ಮತ್ತು ಎಲ್ಲರಿಗೂ ಕೈಗಟುಕುವಂತಿ–ರಬೇಕು. 2030ರ ಹೊತ್ತಿಗೆ ಎಲ್ಲ ದೇಶಗಳೂ ಪರಿಸರ ಮತ್ತು ಜನಸ್ನೇಹಿಯಾದ ಕೈಗಾರಿಕೆಗಳಾದ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಉತ್ತೇಜಿಸಿ ದ್ವಿಗುಣಗೊಳಿಸಬೇಕು ಎಂದೂ ಈ ಗುರಿಯು ವಿಧಿಸುತ್ತದೆ. ಸಂಪನ್ಮೂಲ ಬಳಕೆಯಲ್ಲಿ ದಕ್ಷತೆ ಮತ್ತು ಕ್ಷಮತೆಯನ್ನು ಸಾಧಿಸುವುದು, ವಿವಿಧ ಪರಿಕರಗಳನ್ನು ನವೀಕರಿಸಿ ಉಪಯೋಗಿಸುವುದು, ಪರಿಸರಸ್ನೇಹಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವುದು, ವೈಜ್ಞಾನಿಕ ಸಂಶೋಧನೆಯನ್ನು ಹೆಚ್ಚಿಸುವುದು ಮುಂತಾದುವುಗಳ ಮೂಲಕ ಎಲ್ಲ ದೇಶಗಳು ಅದರಲ್ಲೂ ವಿಶೇಷವಾಗಿ ಅಭಿವೃದ್ಧಿಶೀಲ ದೇಶಗಳು ತಮ್ಮ ಅಭಿವೃದ್ಧಿ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಬೇಕೆಂದೂ ಈ ಗುರಿಯು ತಿಳಿಸುತ್ತದೆ.

ಆಫ್ರಿಕನ್ ದೇಶಗಳು, ಕನಿಷ್ಠ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಮತ್ತು ದ್ವೀಪ ರಾಷ್ಟ್ರಗಳು ಅಂತಾರಾಷ್ಟ್ರೀಯ ಸಹಕಾರ ಮತ್ತು ತಾಂತ್ರಿಕ ಬೆಂಬಲದೊಂದಿಗೆ ಅಗತ್ಯ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕೆಂದೂ ಅಭಿವೃದ್ಧಿಶೀಲ ದೇಶಗಳು ದೇಶೀಯ ತಂತ್ರಜ್ಞಾನ ಅಭಿವೃದ್ಧಿ, ಕೈಗಾರಿಕಾ ವೈವಿಧ್ಯತೆ, ಆಂತರಿಕ ಸಂಶೋಧನೆಗಳ ಮೂಲಕ ಆಧುನಿಕ ಮೂಲಸೌಕ್ರಯಗಳನ್ನು ತಮ್ಮದಾಗಿಸಿಕೊಳ್ಳಬೇಕೆಂದೂ ಈ ಗುರಿಯಲ್ಲಿ ತಿಳಿಸಲಾಗಿದೆ. ಸರಕುಗಳ ಮೌಲ್ಯವರ್ಧನೆಗೆ ಉತ್ತಮ ವಾತಾವರಣವನ್ನು ನಿರ್ಮಿಸಬೇಕೆಂದು ಮತ್ತು ಮಾಹಿತಿ ತಂತ್ರಜ್ಞಾನವನ್ನು ಎಲ್ಲ ಜನರಿಗೆ ಲಭ್ಯವಾಗುವಂತೆ ಮಾಡಬೇಕೆಂಬುದೂ ಈ ಗುರಿಯ ಆಶಯವಾಗಿದೆ.

**ಸಹಕಾರಿ ಸಂಘಟನೆಗಳ ಪಾತ್ರ :**

ಸುಸ್ಥಿರ ಅಭಿವೃದ್ಧಿಯ ಬಗೆಗಿನ 9ನೆಯ ಗುರಿಯು ಪರಸ್ಪರ ಸಂಭಂಧಿಸಿದ ಮತ್ತು ಸುಸ್ಥಿರ ಅಭಿವೃದ್ಧಿಗೆ ಪೂರಕವಾದ ಮೂರು ಅಂಶಗಳ ಬಗ್ಗೆ ಒತ್ತು ನೀಡಿದೆ. ಮೂಲಭೂತ ಸೌಕರ್ಯಗಳು (ಉದಾಹರಣೆಗೆ ರಸ್ತೆ, ರೈಲ್ವೆ ಮುಂತಾದ ಸಾರಿಗೆ ಸೌಕರ್ಯಗಳು, ನೀರು ಸರಬರಾಜು ಮತ್ತು ಒಳಚರಂಡಿ, ನೀರಾವರಿ, ಸಂವಹನ ಸಾಧನಗಳು) ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಪ್ರಾಥಮಿಕ ಭೌತಿಕ ಸವಲತ್ತುಗಳನ್ನು ಒದಗಿಸಿದರೆ, ಕೈಗಾರಿಕೀಕರಣವು (ಉದಾಹರಣೆಗೆ ಎಲ್ಲಬಗೆಯ ಉತ್ಪಾದನಾ ಕಾರ್ಖಾನೆಗಳು) ಕಚ್ಚಾ ಸಾಮಗ್ರಿಗಳ ಮೌಲ್ಯವರ್ಧನೆಮಾಡಿ ಅವುಗಳ ಉಪಯೋಗ ಸಾಧ್ಯವಾಗಿಸುವುದರ ಮೂಲಕ ಆರ್ಥಿಕ ಪ್ರಗತಿಗೆ ವಾಹಕವಾಗುತ್ತವೆ. ಹಾಗೆಯೇ ಆವಿಷ್ಕಾರಗಳು (ಉದಾಹರಣೆಗೆ ಸಂಶೋಧನಾ ಚಟುವಟಿಕೆಗಳು) ಹೊಸ, ಆಧುನಿಕ ಮತ್ತು ಸುಧಾರಿತ ತಂತ್ರಜ್ಞಾನಗಳ ಮೂಲಕ ಸುಸ್ಥಿರ ಉತ್ಪಾದನೆಯನ್ನು ಸಾಧ್ಯವಾಗಿಸುತ್ತವೆ. ಈ ಮೂರೂ ಕ್ಷೇತ್ರಗಳಿಗೆ ದೊಡ್ಡ ಮಟ್ಟದ ಹೂಡಿಕೆಯ ಅಗತ್ಯವಿದೆ ಮತ್ತು ಈ ಎಲ್ಲ ಚಟುವಟಿಕೆಗಳಿಗೆ ಅರ್ಥವ್ಯವಸ್ಥೆಯ ಎಲ್ಲ ಸಂಘಟನೆಗಳೂ ಕೈಜೋಡಿಸಬೇಕಿದೆ. ಸದಸ್ಯರ ಒಡೆತನದ ಮತ್ತು ಸಮುದಾಯದ ಜೊತೆ ನಿರಂತರ ಸಂಪರ್ಕಹೊಂದಿದ ಸಂಸ್ಥೆಗಳಾದುದರಿಂದ ಸಹಕಾರಿ ಸಂಘಟನೆಗಳು ಬಂಡವಾಳ ಶೇಖರಣೆಯಂತಹ ಕೆಲಸವನ್ನು ಹೆಚ್ಚು ಯಶಸ್ವಿಯಾಗಿ ಮಾಡಬಹುದು. ಹಾಗೆಯೆ, ಸಾರ್ವಜನಿಕ ಸೇವೆಗಳ ಸಹಕಾರಿ ಸಂಘಗಳು ಜನರ ಅಗತ್ಯಗಳಾದ ನೀರು ಸರಬಾಜು, ಒಳಚರಂಡಿ ಉಸ್ತುವಾರಿ, ವಿದ್ಯುತ್ ಉತ್ಪಾದನೆ ಮತ್ತು ವಿತರಣೆ ಮುಂತಾದ ಮೂಲಭೂತ ಸೇವೆಗಳನ್ನು ಒದಗಿಸಬಹುದು. ವಿಶೇಷವಾಗಿ ಮೂಲಭೂತ ಸೌಕರ್ಯಗಳ ವಿಷಯದಲ್ಲಿ ಗ್ರಾಮೀಣ ಜನತೆ ಸಮಸ್ಯೆ ಎದುರಿಸುತ್ತಿರುತ್ತಾರೆ. ಸಹಕಾರಿ ಸಂಘಗಳು ಅತಿ ಹೆಚ್ಚು ಗ್ರಾಮೀಣ ಸದಸ್ಯರನ್ನು ಹೊಂದಿರುವ ಸಂಸ್ಥೆಗಳಾದುದರಿಂದ, ಗ್ರಾಮೀಣ ಜನರಿಗೆ ಮೂಲಭೂತ ಸೌಕರ್ಯಗಳು ದೊರೆಯುವಂತೆ ಮಾಡುವಲ್ಲಿ ಮಹತ್ತರ ಪಾತ್ರ ವಹಿಸಬಹುದು. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ನಡೆಸುತ್ತಿರುವ ಉದ್ದಿಮೆದಾರರು ಒಟ್ಟಾಗಿ ಸಹಕಾರಿ ಸಂಘಗಳನ್ನು ರಚಿಸಿಕೊಳ್ಳುವ ಮೂಲಕ ವೆಚ್ಚ ಹಂಚಿಕೆ ಆಧಾರದಲ್ಲಿ ಮೂಲಭೂತ ಸೌಕರ್ಯಗಳ ಉತ್ಪಾದನೆ ಮತ್ತು ವ್ಯವಸ್ಥಾಪನೆಯಲ್ಲಿ ತೊಡಗುವುದು

ಸಾಧ್ಯವಿದೆ.

ಇಂತಹ ಮಾದರಿಗಳನ್ನು ಈಗಾಗಲೇ ಅನುಸರಿಸುತ್ತಿರುವ ಮತ್ತು ಜನರ ಅಗತ್ಯದ ಹೊಸ ಹೊಸ ಮೂಲಸೌಕರ್ಯಗಳನ್ನು ಒದಗಿಸುವ ಪ್ರಯತ್ನ ನಡೆಸಿರುವ ಸಹಕಾರಿ ಸಂಘಗಳ ಉದಾಹರಣೆಗಳು ಹಲವಿವೆ. ದಕ್ಷಿಣ ಆಫ್ರಿಕದ ಮಂಕೋಸಿ ಪ್ರಾಂತ್ಯದಲ್ಲಿ 2012ರಲ್ಲಿ ಆರಂಭಿಸಲಾದ 'ಝೆಂಜೆಲಿನಿ' ಸುಮಾರು ಹತ್ತು ಗ್ರಾಮಗಳ 6000 ಕುಟುಂಬಗಳಿಗೆ ಇಂಟರ್‌ನೆಟ್ ಸೇವೆ ಒದಗಿಸುತ್ತಿದೆ. ಈ ಪ್ರದೇಶದಲ್ಲಿ ವಿದ್ಯುಚ್ಛಕ್ತಿಯಾಗಲೀ ಇಂಟರ್‌ನೆಟ್ ಆಗಲೀ ಲಭ್ಯವಿರಲಿಲ್ಲ. ಈ ಮೂಲಭೂತ ಸೌಕರ್ಯದ ಅಗತ್ಯವನ್ನು ಮನಗಂಡು 10 ಜನ ಸ್ಥಳೀಯ ಯುವಕರು ಸೇರಿ ಈ ಸಹಕಾರಿ ಸಂಘವನ್ನು ಸ್ಥಾಪಿಸಿ, ಅದರ ಮೂಲಕ ಎಲ್ಲ ಗ್ರಾಮಗಳಲ್ಲಿ ಸೌರ ವಿದ್ಯುತ್ ಘಟಕಗಳನ್ನು ಆರಂಭಿಸಿ ಗ್ರಾಮಸ್ತರಿಗೆ ಕಡಿಮೆದರದಲ್ಲಿ ಇಂಟರ್ ನೆಟ್ ಸೌಲಭ್ಯ ಒದಗಿಸಲು ಆರಂಭಿಸಿದರು. ಈ ಮಾದರಿಯು ಹಲವು ಹೊಸ ಸಹಕಾರಿ ಸಂಘಗಳಿಗೆ ಸ್ಫೂರ್ತಿಯಾಗಿದೆ. ಪಶ್ಚಿಮ ಆಫ್ರಿಕದ ಬೆನಿನ್ ದೇಶದಲ್ಲಿ ರೈತರು ಮತ್ತು ಇತರೆ ಸಮಾನ ಚಟುವಟಿಕೆಗಳಲ್ಲಿ ತೊಡಗಿರುವವರು ಮೂಲಭೂತ ಸೌಲಭ್ಯಗಳನ್ನು ಸಹಕಾರಿ ಮಾದರಿಯಲ್ಲಿ ಖರೀದಿಸಿ ಹಂಚಿಕೆಯ ಆಧಾರದಲ್ಲಿ ಉಪಯೋಗಿಸುವ 'ಕೋಆಪರೇಟಿವ್ಸ್ ಆಫ್ ಶೇರ್ಡ್ ಮೆಕನೈಝೇಶನ್' (CUMA) ಎನ್ನುವ 107 ಸಹಕಾರಿ ಗುಂಪುಗಳಿವೆ. ಇವುಗಳಲ್ಲಿ ಸುಮಾರು 1000 ರೈತರು ಸದಸ್ಯರಾಗಿದ್ದು, 57 ಟ್ರಾಕ್ಟರ್‌ಗಳನ್ನು ಜಂಟಿಯಾಗಿ ಖರೀದಿಸಲಾಗಿದೆ. ಕೃಷಿಗೆ ಬೇಕಾಗುವ ಯಾವುದೇ ಯಂತ್ರಗಳನ್ನು ಖರೀದಿಸುವಾಗ ಅವರವರು ಹೊಂದಿರುವ ಭೂಮಿಯ ಪರಿಮಾಣಕ್ಕನುಗುಣವಾಗಿ ಹಣ ನೀಡಿ, ತಮಗೆ ಬೇಕಾದಾಗ ಅದನ್ನು ಉಪಯೋಗಿಸಿಕೊಳ್ಳುತ್ತಾರೆ. ಇದರಿಂದಾಗಿ ಯಂತ್ರಗಳನ್ನು ವೈಯಕ್ತಿಕ ನೆಲೆಯಲ್ಲಿ ಕೊಳ್ಳಲು ಆರ್ಥಿಕ ಶಕ್ತಿ ಇಲ್ಲದವರೂ ಯಂತ್ರದ ಉಪಯೋಗ ಪಡೆಯಲು, ಯಂತ್ರಗಳ ಪೂರ್ಣ ಪ್ರಮಾಣದ ಉಪಯೋಗ ಪಡೆಯಲು ಮತ್ತು ಮುಖ್ಯವಾಗಿ ಅನಗತ್ಯವಾಗಿ ದೊಡ್ಡ ಮೊತ್ತವನ್ನು ಯಂತ್ರಗಳಮೇಲೆ ವಿನಿಯೋಗಿಸುವುದನ್ನು ತಡೆಯುವುದಕ್ಕೂ ಸಾಧ್ಯವಾಗಿದೆ. ಹತ್ತು ಸಾವಿರ ಸದಸ್ಯರನ್ನೂ ಮತ್ತು 13 ಸಾವಿರ ಉದ್ಯೋಗಿಗಳನ್ನೂ ಹೊಂದಿರುವ ಬ್ರೆಝಿಲ್‌ನ 'ಲಾರ್ ಕೋಆಪರೇಟಿವ ಆಗ್ರೋಇಂಡಸ್ಟ್ರಿಯಲ್' ತನ್ನ ಪ್ರದೇಶದಲ್ಲಿ ವಿವಿಧ ಬೆಳೆಗಳನ್ನು ಬೆಳೆಯುವ ರೈತರು ಮತ್ತು ಪಶುಸಂಗೋಪನಾ ಚಟುವಟಿಕೆಯಲ್ಲಿ ತೊಡಗಿರುವವರಿಗೆ ಅಗತ್ಯವಾದ ಎಲ್ಲ ಬಗೆಯ ವಸ್ತುಗಳನ್ನೂ ಒಂದೋ ತಯಾರಿಸಿ ಇಲ್ಲವೇ ಖರೀದಿಸಿ ಒದಗಿಸುತ್ತದೆ. ಕೃಷಿಯ ಆಧುನೀಕರಣದಲ್ಲಿ ಮಹತ್ತರ ಪಾತ್ರ ವಹಿಸಿರುವ ಈ ಸಹಕಾರಿಯು ಹೊಸ ಅನ್ವೇಶಣೆಗಳಿಗೂ ಕಾರಣವಾಗಿದೆ.

ಭಾರತದಲ್ಲಿಯೂ ಮೂಲಸೌಕರ್ಯ ಒದಗಿಸುವ ಹಲವು ಸಹಕಾರಿ ಸಂಘಗಳಿವೆ. ಗುಜರಾತ್‌ನಲ್ಲಿರುವ ಸಿಲ್ವರ್ ಜುಬಿಲಿ ಬಯೋಗ್ಯಾಸ್ ಉತ್ಪಾದಕರ ಮತ್ತು ವಿತರಕರ ಸಹಕಾರಿ ಸಂಘವು ಒಂದು ಉತ್ತಮ ಉದಾಹರಣೆ. ಸ್ಥಳೀಯವಾಗಿ ಸಂಗ್ರಹಿಸಿದ ಸಗಣಿಯಿಂದ ಜೈವಿಕ ಇಂಧನ ತಯಾರಿಸಿ ಅದನ್ನು ಪೈಪ್‌ಗಳ ಮೂಲಕ ಮನೆಮನೆಗೆ ಸರಬರಾಜುಮಾಡುವುದರ ಜೊತೆಗೆ ಸ್ಥಳೀಯ ರೈತರಿಗೆ ಉತ್ತಮ ಗೊಬ್ಬರವನ್ನೂ ಈ ಸಹಕಾರಿ ಸಂಘವು ಒದಗಿಸುತ್ತಿದೆ. ದೆಹಲಿಯಲ್ಲಿ ನಿವೃತ್ತ ಯೋಧರ ಸಹಕಾರಿ ಸಂಘವು ಟ್ಯಾಕ್ಸಿ ಸೇವೆಯನ್ನು ಒದಗಿಸುತ್ತಿದೆ. ಕರ್ನಾಟಕದಲ್ಲಿ ಸಾರ್ವಜನಿಕ ಸಾರಿಗೆಯನ್ನು ನೀಡುತ್ತಿರುವ ಕೊಪ್ಪದ ಸಹಕಾರ ಸಾರಿಗೆ ಮತ್ತು ಗದಗ ಜಿಲ್ಲೆಯಲ್ಲಿರುವ ವಿದ್ಯುಚ್ಛಕ್ತಿ ವಿತರಣಾ ಸಹಕಾರಿ ಸಂಘಗಳ ಬಗ್ಗೆ ಎಲ್ಲರಿಗೂ ತಿಳಿದಿದೆ. ಇಂತಹ ಪ್ರಯತ್ನಗಳ ಸಂಖ್ಯೆ ಹೆಚ್ಚಬೇಕಿದೆ ಮತ್ತು ವಿವಿದ ಮೂಲಭೂತಸೌಕರ್ಯಗಳು ಸಹಕಾರಿ ಕ್ಷೇತ್ರದ ಮೂಲಕ ದೊರೆಯುವಂತಾಗಬೇಕಿದೆ. ಈ ನಿಟ್ಟಿನಲ್ಲಿ ಸಹಕಾರಿ ಸಂಘಟನೆಗಳು ಈ ಕೆಳಗಿನ ಪ್ರಯತ್ನಗಳನ್ನು ಮಾಡಬಹದಾಗಿದೆ.

1. ವಿವಿಧ ಮೂಲ ಸೌಕರ್ಯಗಳನ್ನು ಒದಗಿಸಲು ಸಹಕಾರಿ ಸಂಘಗಳನ್ನು ಸ್ಥಾಪಿಸಲು ಸರಕಾರ ಮತ್ತು ಮಹಾಮಂಡಳಗಳು ಉತ್ತೇಜನ ನೀಡಬಹುದು
2. ಸಾರ್ವಜನಿಕರ ದೈನಂದಿನ ಉಪಯೋಗದ ಮೂಲ ಸೌಕರ್ಯಗಳ ವಿತಣೆಯನ್ನು ಸಹಕಾರಿ ಸಂಘಗಳು ಕೈಗೆತ್ತಿಕೊಳ್ಳಬಹುದು
3. ಸಹಕಾರಿ ಸಂಘಗಳು ತಮ್ಮ ಸದಸ್ಯರಿಗೆ, ವಿಶೇಷವಾಗಿ ಗ್ರಾಮೀಣ ಪ್ರದೇಶದ ಸದಸ್ಯರಿಗೆ ಅವರುಗಳ ಅಗತ್ಯದ ಮೂಲ ಸೌಕರ್ಯಗಳನ್ನು ಒಂದೇ ಸೂರಿನಡಿಯಲ್ಲಿ ದೊರೆಯುವಂತೆ ತಮ್ಮ ವ್ಯವಹಾರ ಚಟುವಟಿಕೆಗಳನ್ನು ವಿಸ್ತರಿಸಬಹುದು
4. ಕೃಷಿ ಉತ್ಪನ್ನಗಳನ್ನು ಸಂಸ್ಕರಿಸುವ ಮೂಲಕ ಮೌಲ್ಯವರ್ಧನೆ ಮಾಡಲು ಸಾಧ್ಯವಾಗುವಂತೆ ಸಂಸ್ಕರಣ ಘಟಕಗಳನ್ನು ಆರಂಭಿಸಬಹುದು
5. ಕೃಷಿ ಅಥವ ಸದಸ್ಯರ ಇತರ ಯಾವುದೇ ವ್ಯವಹಾರಕ್ಕೆ ಅಗತ್ಯವಾದ ಟ್ರಾಕ್ಟರಗಳು, ಗೋದಾಮುಗಳು, ಸಾರಿಗೆ ವಾಹನಗಳು ಮುಂತಾದುವುಗಳನ್ನು ಖರೀದಿಸಿ ಬಾಡಿಗೆ ಆಧಾರದಲ್ಲಿ ಗ್ರಾಹಕರಿಗೆ ಒದಗಿಸುವುದರ ಮೂಲಕ ಮೂಲಸೌಕರ್ಯಗಳ ಉತ್ತಮ ಉಪಯೋಗವಾಗುವಂತೆ ಮಾಡಬಹುದು
6. ಕೃಷಿ ಸಹಕಾರ ಸಂಘಗಳು ಜೈವಿಕ ಇಂಧನ, ಸೌರ ವಿದ್ಯುತ್, ಗ್ರಾಮೀಣ ಪ್ರದೇಶದಲ್ಲಿ ಲಭ್ಯವಾಗುವ ವಿವಿಧ ಕಚ್ಚಾವಸ್ತುಗಳಿಂದ ಉಪಯೋಗಿ ವಸ್ತುಗಳನ್ನು ತಯಾರಿಸುವುದು, ಕೃಷಿಗೆ ಅಗತ್ಯವಾದ ತಂತ್ರಜ್ಞಾನದ ಅಭಿವೃದ್ಧಿ ಮುಂತಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು
7. ಹಲವು ಸಹಕಾರಿ ಸಂಘಗಳು ಪರಸ್ಪರ ಸಹಕಾರದೊಂದಿಗೆ ಗ್ರಾಮೀಣ ಪ್ರದೇಶದ ವಿವಿಧ ಉತ್ಪಾದನಾ ಚಟುವಟಿಕೆಗಳಿಗೆ ಬಂಡವಾಳ ಕ್ರೋಢೀಕರಿಸುವ ಯೋಜನೆಗಳನ್ನು ರೂಪಿಸಬಹುದು

ಭಾರತದ ಪರಿಸ್ಥಿತಿಯಲ್ಲಿ ಗಮನಿಸಿದಾಗ ಮೂಲಸೌಕರ್ಯಗಳು ಮತ್ತು ಆಧುನಿಕ ಆವಿಷ್ಕಾರಗಳು ತುರ್ತು ಅಗತ್ಯವಾದುದರಿಂದ ಸಹಕಾರಿ ಸಂಘಟನೆಗಳು ಈ ಚಟುವಟಿಕೆಗಳು ತಮ್ಮ ಕಾರ್ಯಕ್ಷೇತ್ರದಿಂದ ಹೊರಗಿನದು ಎಂದು ಭಾವಿಸದೆ, ಎಸ್‌ಡಿಜಿ 9ರ ಸಾಧನೆಗೆ ಪೂರಕ ಕಾರ್ಯತಂತ್ರಗಳನ್ನು ರೂಪಿಸಬೇಕು.

# Cheque Payment Rules :

## ಬ್ಯಾಂಕ್‌ಗಳಲ್ಲಿ 2021ರ ಜನವರಿಯಿಂದ ಚೆಕ್ ವಹಿವಾಟಿಗೆ ಹೊಸ ನಿಯಮ ಜಾರಿ

### ಜನವರಿ ತಿಂಗಳಿಂದ 50,000 ರೂ.ಗೂ ಅಧಿಕ ಮೊತ್ತದ ಚೆಕ್‌ಗಳನ್ನು ನೀಡಿದವರು ಬ್ಯಾಂಕ್‌ಗಳಿಗೆ ಮೆಸೇಜ್, ಮೊಬೈಲ್ ಆ್ಯಪ್, ಇಂಟರ್ನೆಟ್ ಬ್ಯಾಂಕಿಂಗ್, ಎಟಿಎಂ ಅಥವಾ ಇತರೆ ಸಾಧನಗಳ ಬಳಸಿ ಚೆಕ್ ಮಾಹಿತಿಯನ್ನು ನೀಡಬೇಕು.

ಚೆಕ್ ಬಳಕೆಗೆ ಸಂಬಂಧಿಸಿದಂತೆ ಆರ್‌ಬಿಐ ಬ್ಯಾಂಕ್‌ಗಳಲ್ಲಿ ಪಾಸಿಟಿವ್ ಪೇ ಸಿಸ್ಟಂ ಜಾರಿಗೊಳಿಸುವುದಾಗಿ ಘೋಷಿಸಿತ್ತು. ಈ ಹೊಸ ನಿಯಮಾವಳಿ ಪ್ರಕಾರ 2021ರ ಜನವರಿಯಿಂದ ಬ್ಯಾಂಕ್‌ಗಳಲ್ಲಿ ಹೊಸ ವ್ಯವಸ್ಥೆ ಜಾರಿಗೆ ಬರಲಿದೆ. ನೀವೇನಾದರೂ ಚೆಕ್ ಮೂಲಕ 50 ಸಾವಿರ ರೂ.ಗಿಂತ ಹೆಚ್ಚು ಹಣ ಪಾವತಿಸಬೇಕಾದರೆ ಹೊಸ ವರ್ಷದಿಂದ ಈ ನಿಯಮಗಳನ್ನು ಅನುಸರಿಸಲೇಬೇಕು. ಇದರಿಂದ ಚೆಕ್ ವಹಿವಾಟಿನಲ್ಲಿ ನಡೆಯುವ ವಂಚನೆಯನ್ನು ತಡೆಯಲು ಸಾಧ್ಯವಿದೆ ಎಂದು ಆರ್.ಬಿ.ಐ ತಿಳಿಸಿದೆ. ಹಾಗಿದ್ದರೆ ಆ ಹೊಸ ನಿಯಮಗಳೇನು? ಎಂಬ ಬಗ್ಗೆ ಇಲ್ಲಿದೆ ಸಂಪೂರ್ಣ ಮಾಹಿತಿ.



ಜನವರಿ ತಿಂಗಳಿಂದ 50,000 ರೂ. ಗೂ ಅಧಿಕ ಮೊತ್ತವನ್ನು ಚೆಕ್ ಮೂಲಕ ಪಾವತಿ ಮಾಡುವುದಾದರೆ ಆಯಾ ಬ್ಯಾಂಕ್‌ಗಳು ಗ್ರಾಹಕರಿಂದ ಮರು ದೃಢೀಕರಿಸಿಕೊಳ್ಳುತ್ತವೆ. ಚೆಕ್‌ಗಳನ್ನು ನೀಡಿದವರು ಬ್ಯಾಂಕ್‌ಗಳಿಗೆ ಮೆಸೇಜ್, ಮೊಬೈಲ್ ಆ್ಯಪ್, ಇಂಟರ್ನೆಟ್ ಬ್ಯಾಂಕಿಂಗ್, ಎಟಿಎಂ ಅಥವಾ ಇತರೆ ಸಾಧನಗಳ ಬಳಸಿ ಚೆಕ್ ಮಾಹಿತಿಯನ್ನು ನೀಡಬೇಕು. 2021ರ ಜನವರಿ 1 ರಿಂದ ಈ ಹೊಸ ನಿಯಮ ಜಾರಿಯಾಗಲಿದೆ.

50,000 ರೂ.ಗೂ ಅಧಿಕ ಹಣದ ವಹಿವಾಟನ್ನು ಚೆಕ್ ಮೂಲಕ ನಡೆಸುವುದಾದರೆ ಬ್ಯಾಂಕ್‌ಗಳಿಗೆ ಆ ಚೆಕ್ ಮಾಹಿತಿಯನ್ನು ನೀಡಿ, ಮರು ದೃಢೀಕರಿಸಬೇಕು. ಆ ಬಳಿಕವೇ ಆ ಹಣವನ್ನು ಡ್ರಾ ಮಾಡಲು ಸಾಧ್ಯ. ಇದರಿಂದ ಚೆಕ್ ಬಳಸಿ ವಂಚನೆ ಮಾಡುವುದನ್ನು ನಿಯಂತ್ರಿಸಲು ಸಾಧ್ಯ ಎಂದು ಆರ್.ಬಿ.ಐ ಹೇಳಿದೆ. ಆದರೆ, ಈ ನಿಯಮ ಎಲ್ಲ ಗ್ರಾಹಕರಿಗೂ ಕಡ್ಡಾಯವಲ್ಲ. ಅಧಿಕ ಹಣದ ವಹಿವಾಟು ನಡೆಸುವವರು ಹಾಗೂ ತಮ್ಮ ಹಣದ ವರ್ಗಾವಣೆಯಲ್ಲಿ ಹೆಚ್ಚಿನ ಭದ್ರತೆಯನ್ನು ಬಯಸುವವರು ಈ ಆಯ್ಕೆಯನ್ನು ಬಳಸಿಕೊಳ್ಳಬಹುದು.

**ಬ್ಯಾಂಕ್‌ಗಳಲ್ಲಿ ಈ ಆಯ್ಕೆ ಪಡೆಯುವುದು ಹೇಗೆ ?**

2021ರ ಜನವರಿಯಿಂದ ಪಾಸಿಟಿವ್ ಪೇ ಸಿಸ್ಟಂ ಮೂಲಕ ಚೆಕ್ ವಿತರಣೆ ಮಾಡಲು ಇಚ್ಛಿಸುವವರು ತಮ್ಮ ಮೊಬೈಲ್‌ನಿಂದ SMS ಕಳುಹಿಸುವ ಮೂಲಕ, ಮೊಬೈಲ್‌ನಲ್ಲಿ ಬ್ಯಾಂಕ್ ಆ್ಯಪ್ ಹಾಕಿಕೊಳ್ಳುವ ಮೂಲಕ, ಇಂಟರ್ನೆಟ್ ಬ್ಯಾಂಕಿಂಗ್ ಅಥವಾ ಎಟಿಎಂ ಮೂಲಕವೂ ಬ್ಯಾಂಕ್ ಕೇಳುವ ಮಾಹಿತಿಯನ್ನು ಆನ್‌ಲೈನ್ ಸಲ್ಲಿಸಬೇಕು. ಆ ಎಲ್ಲ ಮಾಹಿತಿಯೂ ಬ್ಯಾಂಕ್‌ಗಳಲ್ಲಿ ಅಪ್ಡೇಟ್ ಆದ ನಂತರ ಈ ಆಯ್ಕೆಯನ್ನು ಬಳಸಲು ಸಾಧ್ಯವಿದೆ. ಬಳಿಕ, ನಿಮ್ಮ ಖಾತೆಯಿಂದ ಚೆಕ್ ಮೂಲಕ 50 ಸಾವಿರ ರೂ.ಗೂ ಅಧಿಕ ಹಣ ಡ್ರಾ ಆಗುವ ವೇಳೆ ಬ್ಯಾಂಕ್ ನಿಮ್ಮ ಬಳಿ ಮರು ದೃಢೀಕರಿಸಿಕೊಳ್ಳುತ್ತದೆ.

ಆದರೆ, ನೀವು ಚೆಕ್ ವಿತರಿಸುವಾಗ ನಿಮ್ಮ ಬ್ಯಾಂಕ್ ಆ ಚೆಕ್ ಸಂಖ್ಯೆ, ಮೊತ್ತ ಮುಂತಾದ ಮಾಹಿತಿಯನ್ನು ಸಲ್ಲಿಸಬೇಕು. ಆಗ ನಿಮ್ಮ ಖಾತೆಯಿಂದ ಹಣ ಡ್ರಾ ಮಾಡುವವನಿಗೆ ಹಣ ನೀಡುವ ಮೊದಲು ಬ್ಯಾಂಕ್ ನೀವು ನೀಡಿದ ಮಾಹಿತಿಯನ್ನು ಖಚಿತಪಡಿಸಿಕೊಳ್ಳುತ್ತದೆ. ಎರಡಕ್ಕೂ ಹೊಂದಾಣಿಕೆಯಾದರೆ ಮಾತ್ರ ಆ ವ್ಯಕ್ತಿ ಹಣವನ್ನು ವಿತ್ ಡ್ರಾ ಮಾಡಲು ಸಾಧ್ಯವಿದೆ.

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 80
Licensed to post without Prepayment License No. PMG BG/WPP-384/2020-2022.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

## ಆಡಳಿತ ಮಂಡಳಿ ಸದಸ್ಯರು

## 2021 ನೂತನ ವರ್ಷದ ಹಾಗೂ ಸೌಹಾರ್ದ ಸಹಕಾರಿ ದಿನದ ಹಾರ್ದಿಕ ಶುಭಾಶಯಗಳು



ಬಿ.ಹೆಚ್. ಕೃಷ್ಣಾರೆಡ್ಡಿ
ಅಧ್ಯಕ್ಷರು



ಜಗದೀಶ ಕವಟಗಿಮಠ
ಉಪಾಧ್ಯಕ್ಷರು



ಗುರುನಾಥ ಜಾಂತಿಕರ
ನಿರ್ದೇಶಕರು



ಹೆಚ್.ವಿ. ರಾಜೀವ್
ನಿರ್ದೇಶಕರು



ವಿಶ್ವನಾಥ ಚ. ಹಿರೇಮಠ
ನಿರ್ದೇಶಕರು



ಎಸ್.ಆರ್. ಲಕ್ಷ್ಮೀಕಾಂತರೆಡ್ಡಿ
ನಿರ್ದೇಶಕರು



ರಂಗಪ್ಪಯ್ಯ ದೇಶಪಾಂಡೆ
ನಿರ್ದೇಶಕರು



ಮಾರುತಿ ಬಿ. ಕಲಾಲ
ನಿರ್ದೇಶಕರು



ಗುರುನಗೌಡ ಪಾಟೀಲ
ನಿರ್ದೇಶಕರು



ವಾಯ್. ಟಿ. ಪಾಟೀಲ
ನಿರ್ದೇಶಕರು



ಜಿ. ನಂಜನಗೌಡ
ನಿರ್ದೇಶಕರು



ಬಿ. ಗಂಗಾಧರಯ್ಯ
ನಿರ್ದೇಶಕರು



ಸಿದ್ರಾಮಪ್ಪ ಉಪ್ಪಿನ
ನಿರ್ದೇಶಕರು



ಎ.ಆರ್. ಪ್ರಸನ್ನಕುಮಾರ್
ನಿರ್ದೇಶಕರು



ಆರ್. ತಿಮ್ಮಯ್ಯಶೆಟ್ಟಿ
ನಿರ್ದೇಶಕರು



ಸಂಜೀವ ಮಹಾಜನ
ನಿರ್ದೇಶಕರು



ಜಿ. ಶ್ರೀಧರ
ನಿರ್ದೇಶಕರು



ಬಿ.ಎಸ್. ಗುಂಡುರಾವ್
ನಿರ್ದೇಶಕರು



ಮಂಜುನಾಥ
ನಿರ್ದೇಶಕರು



ಚಂದ್ರಕಾಂತ ಪಡಚಣ್ಣನವರ
ನಿರ್ದೇಶಕರು



ಶ್ರೀಮತಿ ಸರಸ್ವತಿ
ನಿರ್ದೇಶಕರು



ಲಕ್ಷ್ಮಣ ಮಾರುತಿ ಪವಾರ್
ವೃತ್ತಿಪರ ನಿರ್ದೇಶಕರು



ಸದಾಶಿವ ಶೆಟ್ಟಿ
ವೃತ್ತಿಪರ ನಿರ್ದೇಶಕರು



ಶರಣಗೌಡ ಜಿ. ಪಾಟೀಲ
ವ್ಯವಸ್ಥಾಪಕ ನಿರ್ದೇಶಕರು

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ–585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010